ಸಂಪುಟ 2 ಸಂಚಿಕೆ 1



ಖಾಸಗೀ ಪ್ರಸಾರಕ್ಕಾಗಿ

ಮಾನವಿ

ಸಂಪುಟ : ೨ ಸಂಚಿಕೆ : ೧

ಜನವರಿ–ಫೆಬ್ರುವರಿ ೧೯೮೫

ಸಂಪಾದಕೀಯ ಮಂಡಳಿ

ವೇದ, ರಜೇಶ್ವರಿ ಎಚ್ ಎಸ್,

ಚಂಪಾವತಿ.

ಸಲಹೆ—ಸಹಕಾರ

ವಿಜಯ

ವಿಳಾಸ "ಮಾನವಿ"

ಪಂಚಾಯತಿ ರಸ್ತೆ

ಕಾಡುಗೋಡಿ (ಪೋ)

ಬೆಂಗಳೂರು—**560-067.**

ಸೂಚನೆ : ವಾರ್ಷಿಕ ಚಂದಾ : **15**ರೂ

ಆಜೀವ ಚಂದಾ **250** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಆರು ಸಂಚಿಕೆಗಳು.

ಹಣವನ್ನು ಬಾಂಕ್ ಡಾಫ್ಟ್, ಎಂ. ಓ.

ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ.............

ಮುಖಪುಟ : ಸರಸ್ವತಿ ಡಿ.

ಸಂಪಾದಕೀಯ



ಪುರಿ ಜಗದ್ಗುರುಗಳು ಸಮಾಜದ ಎರಡು ಶೋಷಿತ ಜನಾಂಗಗಳ ಬಗ್ಗೆ ಇಂದು ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಿದ್ದಾರೆ. ಸತಿ ಸಹಗಮನ ಸಮರ್ಥನೆ ಮಾಡುತ್ತಾ–ಸ್ತ್ರೀಯ ಆತ್ಮ ಶೋಷಣೆಯನ್ನೂ, ಅವಳ ಅಸ್ತಿತ್ವ ಗಂಡನ ರಕ್ಷಣೆಯಲ್ಲಿ ಮಾತ್ರ ಸಾಧ್ಯ ಎಂದರೆ, ದೇವಸ್ಥಾನದೊಳಗೆ ಹರಿಜನರು ಪ್ರವೇಶಕ್ಕೆ ಹಕ್ಕುದಾರರಲ್ಲ ಎಂದು ಸಮರ್ಥಿಸಿ ಅಸ್ಪೃಶ್ಯತೆಯನ್ನು ಎತ್ತಿ ಹಿಡಿದಿದ್ದಾರೆ. ಪುರಿ ಜಗದ್ಗುರುಗಳ ಈ ನಿಲುವುಗಳು ಎರಡು ತುಳಿಯಲ್ಪಟ್ಟ ಜನಾಂಗಗಳ ಅಸ್ತಿತ್ವಕ್ಕೆ ನೇರವಾಗಿ ಆಘಾತವನ್ನುಂಟುಮಾಡುವಂತಾಗಿದೆ. ಈ ನಿಲುವುಗಳ ಹಿನ್ನೆಲೆಗೆ ಮತಾಂಧತೆ, ಕೋಮುವಾರು ಭಾವನೆ ಅಥವಾ ಪುನಶ್ಚೈತನ್ಯಗೊಳಿಸುವ ಬಯಕೆ ಈ ರೀತಿಯ ಯಾವುದೇ ಪದಗಳು ಒಂದು ಸ್ಪಷ್ಟ ವಿವರಣೆ ನೀಡಬಹುದು. ಧಾರ್ಮಿಕ ಮುಖವಾಡದಲ್ಲಿ ಈ ನಿಲುವುಗಳು ವ್ಯಕ್ತಗೊಳ್ಳುತ್ತವೆ ಎಂಬುದಕ್ಕೆ ಪುರಿ ಜಗದ್ಗುರುಗಳು ಇಂದು ನಮಗೆ ಉದಾಹರಣೆಯಾಗಿದ್ದಾರೆ. ಧಾರ್ಮಿಕ ನಂಬಿಕೆ, ಆಚಾರಗಳಲ್ಲಿನ ವ್ಯತ್ಯಾಸಗಳು, ಭಿನ್ನತೆಗಳು-ಮತಾಂಧತೆ ಅಥವಾ ಕೋಮುವಾರು ಘರ್ಷಣೆಗಳನ್ನು ಹುಟ್ಟುಹಾಕುತ್ತವೆ ಎನ್ನುವ ಅಂಶದೊಳಗೆ ರಾಜಕೀಯ ವ್ಯತ್ಯಾಸಗಳು, ಭಿನ್ನತೆಗಳು ಆಳವಾಗಿ ತಳಕುಹಾಕಿಕೊಂಡಿರುತ್ತವೆ ಹಾಗಾಗಿ ಕೇವಲ ಧಾರ್ಮಿಕ ನಂಬಿಕೆ, ಆಚಾರಗಳು ಇಂದು ಕೋಮುವಾರು ಘರ್ಷಣೆಗಳಿಗೆ ಹೆಚ್ಚು ಕಾರಣವೆನ್ನುವುದಕ್ಕಿಂತ, ರಾಜಕೀಯ ಭಿನ್ನತೆಗಳು ಕಾರಣ ಎನ್ನುವುದು ಹೆಚ್ಚು ಪ್ರಸ್ತುತವಾಗುತ್ತದೆ. ಹೀಗೆ ರಾಜಕೀಯ ವಿಚಾರಗಳು ತಳಕು ಹಾಕಿಕೊಂಡಿರುವುದರಿಂದಲೇ ಸರ್ಕಾರ ಪುರಿ ಜಗದ್ಗುರುಗಳಂತಹ ಮಠಾಧಿಪತಿಗಳು ಅಧಿಕಾರಶಾಹಿಗಳು ತಳೆಯುವ ನಿಲುವುಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದೇ ಮೌನವಾಗಿರುವ ಮೂಲಕ ಅವರನ್ನು ಸಮರ್ಥಿಸಿಕೊಂಡುಬಿಡುತ್ತದೆ. ಆಗ ಇಂತಹ ನಿಲುವುಗಳನ್ನು ನಾವು ಸರ್ಕಾರ ಅಥವಾ ರಾಜ್ಯ ಪ್ರಾಯೋಜಿತಗೊಳಿಸಿದ ಮತಾಂಧತೆ ಅಥವಾ ಕೋಮುವಾರು ಘರ್ಷಣೆಗಳು ಎಂದು ಹೇಳಬೇಕಾಗುತ್ತದೆ.

ಕೋಮುವಾರು ಭಾವನೆ ಅಥವಾ ಮತಾಂಧತೆ ಎಂದರೆ ಆಧುನಿಕ ಬದುಕಿನ ರೀತಿ-ನೀತಿ ತಿದ್ದಲು ಒಂದಿಷ್ಟು ಧಾರ್ಮಿಕ ಮಹಾನ್ ಕೃತಿಗಳಿಗೆ, ಕಾನೂನುಗಳಿಗೆ, ಆರ್ಥಿಕತೆ ಇತ್ಯಾದಿಗಳಿಗೆ ಮೊರೆಹೋಗುವುದು ಎನ್ನುವ ಸಾಮಾನ್ಯ ಅರ್ಥವಿದೆ. ಹೀಗೆ ಪುನಶ್ಚೈತನ್ಯಗೊಳಿಸುವುದರಿಂದ ಆಧುನಿಕ ಪ್ರಪಂಚ ಎದುರಿಸುತ್ತಿರುವ ಪ್ರಶ್ನೆಗಳನ್ನು ಬಗೆಹರಿಸಬಹುದು ಎಂಬ ನಂಬಿಕೆ ಇದಾಗಿರುತ್ತದೆ. ಆದರೆ ನಿಜವಾಗಿ ಎಂದರೆ ಈ ರೀತಿಯ ಮತಾಂಧತೆಗೆ ಅಧಿಕಾರಶಾಹಿತ್ವ, ಸರ್ವಾಧಿಕಾರತ್ವಗಳು ಮೂಲಗಳಾಗಿದ್ದು, ಧಾರ್ಮಿಕ ಮುಖವಾಡದಲ್ಲಿ ಕಾಣಿಸಿಕೊಳ್ಳುತ್ತವೆ.

ಹಾಗಾಗಿಯೇ ಸತಿ ಸಹಗಮನ, ಹರಿಜನರಿಗೆ ದೇವಸ್ಥಾನ ಪ್ರವೇಶ ನಿಷಿದ್ಧತೆ ಎತ್ತಿ ಹಿಡಿಯುವ ಪುರಿ ಜಗದ್ಗುರುಗಳು ಮಠದ ಅಧಿಪತಿಗಳಾಗಿ ಧರ್ಮದ ಹೆಸರಿನಲ್ಲಿ ಕೆಲವು ಜಾತಿ ಹಾಗೂ ವರ್ಗಗಳ ಹಿತಾಸಕ್ತಿಗಳನ್ನು ರಕ್ಷಣೆ ಮಾಡಲು ಪ್ರಯತ್ನಿಸುತ್ತಾರೆ. ಮೇಲ್ವರ್ಗ, ಮೇಲ್ಜಾತಿ ಜನರು ಆರ್ಥಿಕ ಸವಲತ್ತುಗಳ ಜೊತೆಗೆ ಸಾಮಾಜಿಕ ಸವಲತ್ತುಗಳನ್ನು ಕಳೆದುಕೊಳ್ಳುವ ನಿರಂತರ ಭಯದಲ್ಲಿ ಹುಟ್ಟಿಕೊಳ್ಳುವ ಹಿಂಸೆ, ಕೊರತೆಗಳಿಗೆ ಧಾರ್ಮಿಕ ನಂಬಿಕೆಗಳ ಸಮರ್ಥನೆ ಪಡೆಯಲು ಪ್ರಯತ್ನಿಸುತ್ತಾರೆ. ಈ ಹಂತದಲ್ಲಿ ಪುರಿ ಜಗದ್ಗುರುಗಳಂತವರು ಇವರಿಗೆ ಧ್ವನಿಯಾಗುತ್ತಾರೆ.

ಇದರಿಂದಾಗಿಯೇ ಮೇಲೆ ಹೇಳಿದಂತೆ ಸರ್ಕಾರ ಮೌನವಾಗಿಬಿಡುತ್ತದೆ. ಅಷ್ಟೇ ಅಲ್ಲ ಕ್ರಿಯಾತ್ಮಕವಾಗಿ ಇಂತಹ ಮತಾಂಧತೆಯನ್ನು ಕೆಲವು ಸಲ ಪ್ರೋತ್ಸಾಹಿಸುತ್ತದೆ ಕೂಡಾ. ಆಧುನಿಕ ಕೈಗಾರಿಕೆಗಳು ಪ್ರಗತಿಯತ್ತ ಚಲಿಸದಿರುವುದು, ವಿದ್ಯಾಭ್ಯಾಸದಲ್ಲಿನ ಮತಾಂಧತೆ, ಸರ್ಕಾರ ಅಭಿವೃದ್ಧಿಗೆ ತೊಡಗಿಸುವ ಹಣದಲ್ಲಿನ ಕಡಿತಗಳು ಇತ್ಯಾದಿ ಮಧ್ಯಮವರ್ಗ ಹಾಗೂ ಕೆಳವರ್ಗದ ಸಾಮಾನ್ಯ ಜನರ ಹತಾಸೆ, ನಿರಾಸೆಯನ್ನು ಹೆಚ್ಚಿಸುತ್ತಿವೆ. ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆ, ಭೂತಾಕಾರವಾಗಿ ಬೆಳೆಯುತ್ತಿರುವ ಜನಸಂಖ್ಯೆ ಮುಂತಾದವುಗಳು ಜಾತಿ, ಜಾತಿಗಳ ಮಧ್ಯೆ, ಜಾತಿ, ವರ್ಗಗಳ ಮಧ್ಯೆ ಸ್ಪರ್ಧಾತ್ಮಕ ಮನೋಭಾವನನ್ನು ಹೆಚ್ಚಾಗಿ ಹುಟ್ಟುಹಾಕುತ್ತಿದೆ. ಈ ಹತಾಸೆ, ನಿರಾಸೆ, ಸ್ಪರ್ಧಾತ್ಮಕ ಮನೋಭಾವನೆಗಳು ಸತಿ ಪದ್ಧತಿ, ಬೆಂಡಿಗೆರೆಯ ಘಟನೆಗಳನ್ನು ಪ್ರೋತ್ಸಾಹಿಸುವಂತಹ ಅಮಾನವೀಯ ಕ್ರೂರ ಮಟ್ಟವನ್ನು ಈಗ ತಲುಪುತ್ತಿವೆ. ಈ ರೀತಿಯ ರಾಜಕೀಯ ವ್ಯವಸ್ಥೆ ಚಾರಿತ್ರಿಕವಾಗಿ ನಿರಂತರವಾಗಿ ವಿರೋಧಿಗಳಾಗಿರುವ ಜಾತಿ, ವರ್ಗ ಪಂಗಡಗಳ ಮಧ್ಯೆ ಮತ್ತೆ ಮತ್ತೆ ಘರ್ಷಣೆ ಹುಟ್ಟು ಹಾಕುತ್ತಿವೆ. ಯಾವುದೇ ಚಿಕ್ಕ ಧಾರ್ಮಿಕ ವಿಚಾರವನ್ನು ಬಳಸಿಕೊಂಡು ಇಂತಹ ಘರ್ಷಣೆಗಳು ಹಿಂಸೆ ಅಥವಾ ಕ್ರೂರ ರೂಪ ತಳೆಯಲು ಹಾತೊರೆಯುತ್ತಿರುತ್ತವೆ.

ಈ ಮತಾಂಧತೆಯು ಸಹ ಬಹಳ ಜಾಗರೂಕತೆಯಿಂದ ಧರ್ಮದ ಕೆಲವು ವಿಚಾರಗಳನ್ನು ಹೆಕ್ಕಿಕೊಳ್ಳುತ್ತದೆ. ತನಗೆ ಅನುಕೂಲವಾಗಿರುವ ಅಂಶಗಳನ್ನು ಮಾತ್ರ ಇದು ಆಯ್ಕೆ ಮಾಡಿಕೊಂಡು ಘರ್ಷಣೆಗೆ ತೊಡಗುತ್ತದೆ. ಭಾರತದಂತಹ ಜಾತಿ ಪದ್ಧತಿಯ ಹಾಗೂ ಮಹಿಳೆಯರ ಕೀಳು ಮಟ್ಟದ ಸ್ಥಾನ-ಮಾನಗಳ ನಾಡಿನಲ್ಲಿ ಈ ಘರ್ಷಣೆಗೆ ನೇರವಾಗಿ ಬಲಿಯಾಗುವವರು ಮಹಿಳೆಯರು ಹಾಗೂ ದಲಿತರು. ಕೆಲವು ವರ್ಗ, ಜಾತಿಗಳ ಹತಾಸೆ, ನಿರಾಸೆಗಳಿಗೆ ಉತ್ತರವಾಗಿ ಪುರಿ ಜಗದ್ಗುರುಗಳು ಆಯ್ಕೆ ಮಾಡಿಕೊಂಡ 'ಸತಿ' ಹಾಗೂ 'ದೇವಸ್ಥಾನದ ಪ್ರವೇಶ ನಿಷಿದ್ಧ' ಧಾರ್ಮಿಕವಿಚಾರಗಳು ಮಹಿಳೆಯರ ಹಾಗೂ ದಲಿತರ ಬದುಕುವ ಹಕ್ಕಿಗೇ, ಅವರ ಅಸ್ತಿತ್ವಕ್ಕೇ ಸವಾಲಾಗುವಂತಹ ವಿಚಾರಗಳಾಗಿವೆ.

ಸತಿ ಆರಾಧನೆ ತಡೆಯುವಲ್ಲಿ ರಾಜಸ್ಥಾನ ಸರ್ಕಾರದ ವೈಫಲ್ಯತೆ, 1980 ರ ನಂತರ ದೆಹಲಿಯಂತಹ ಪ್ರದೇಶಗಳಲ್ಲೇ ಹೆಚ್ಚಾಗುತ್ತಿರುವ 'ಸತಿ' ದೇವಸ್ಥಾನಗಳು ಹೆಚ್ಚಾಗಿ ಮಹಿಳೆಯರ ಒಟ್ಟು ವಿಧೇಯತೆ, ಹಾಗೂ ಗಂಡನಿಗೇ ತನ್ನ ಅಸ್ತಿತ್ವವನ್ನು ಅರ್ಪಿಸಿಕೊಳ್ಳುವಂತಹ ವಿಚಾರಗಳನ್ನು ಹೆಚ್ಚು ಹೆಚ್ಚು ಪುನಶ್ಚೈತನ್ಯಗೊಳಿಸುವ ವಿಚಾರಗಳಿಗೆ ದ್ಯೋತಕಗಳಾಗಿವೆ. ಈ ರೀತಿಯ ಬಾಹ್ಯ ಚಿಹ್ನೆಗಳು, ಬೆಳವಣಿಗೆಗಳು ಮತಾಂಧತೆ, ಕೋಮುವಾರು ಭಾವನೆಗಳನ್ನು ಧೃಡಪಡಿಸುವ ಸಂಕೇತಗಳಾಗುತ್ತಿವೆ.

ಇಂದು ಈ ರೀತಿಯ ಮತಾಂಧತೆಗೆ, ಕೋಮುವಾರು ಭಾವನೆಗೆ ಅಥವಾ ಪುನಶ್ಚೈತನ್ಯಗೊಳಿಸುವಿಕೆಗೆ ಪುರಿ ಜಗದ್ಗುರುಗಳು ಸಂಕೇತವಾಗಿ ವಿಜೃಂಭಿಸಿದ್ದಾರೆ. ಇಷ್ಟೊಂದು ಮಾರಕ ಮೌಲ್ಯಗಳನ್ನು ಎತ್ತಿ ಹಿಡಿದ ಈ ಮಠಾಧಿಪತಿಗಳ ಬಗ್ಗೆ ಕರ್ನಾಟಕ ಸರ್ಕಾರ ಯಾವುದೇ ರೀತಿಯ ವಿರೋಧ ವ್ಯಕ್ತಪಡಿಸಿಲ್ಲ. ಕೊನೆಗೆ 'ವಿಚಾರಣಾ ಸಮಿತಿ'ಯನ್ನು ನೇಮಿಸುವ ತಂಟೆಗೂ ಸಹ ಹೋಗಿಲ್ಲ. ಅಂದರೆ ಸಂದರ್ಭದಿಂದ ಆಚೆ ನಿಂತು ಹಿಂಸೆಯನ್ನು, ಕ್ರೂರತೆಯನ್ನು ಹೆಚ್ಚಿಸುವಂತಹ ಒಂದು ನಿಲುವನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಇದನ್ನು ಸರ್ಕಾರದಿಂದ ಪ್ರಾಯೋಜಿತವಾದ ಮತಾಂಧತೆಯ ಮೌಲ್ಯವೆಂದೇ ಇಂದು ನಾವು ಹೇಳಬೇಕಾಗುತ್ತದೆ. ಈ ರೀತಿಯ ಸಂದರ್ಭಗಳಲ್ಲಿ ಸರ್ಕಾರ ಕ್ರಿಯಾತ್ಮಕವಾಗಿ ಪ್ರತಿಕ್ರಯಿಸಿ-ಕೆಲವೇ ರಾಜಕೀಯ ಶಕ್ತಿಗಳ ಹಿತಾಸಕ್ತಿಗಳಿಗೆ ಶಾಮೀಲಾಗದೇ ಉಳಿಯಬೇಕು ಎಂಬುದನ್ನು ನಾವು ಒತ್ತಿ ಹೇಳಬೇಕಾಗಿದೆ.



ಸೇವಾ-ಸ್ವಯಂ ಉದ್ಯೋಗ ಮಹಿಳೆಯರ ಸ್ಫೂರ್ತಿಯ ನೆಲೆ

ಸೇವಾ- ಭಾರತದಲ್ಲಿ ಪ್ರಪ್ರಥಮ ಮಹಿಳಾ ಕಾರ್ಮಿಕ ಸಂಘ ಮಹಿಳಾ ಬ್ಯಾಂಕ್, ಮಹಿಳಾ ಸಹಕಾರಿ ಸಂಘಹಾಗೂ ಇತರ ಹಲವಾರು ಆರ್ಥಿಕಯೋಜನೆಗಳ ಮೂಲಕ ಅಸಂಘಟಿತ ಸ್ವಯಂ-ಮಹಿಳಾ ಉದ್ಯೋಗಿಗಳ ಸಂಘಟಿಸಿ ಕಾರ್ಮಿಕ, ಹಕ್ಕು ಭಾದ್ಯತೆಗಳನ್ನು ಅವರಿಗೆ ಒದಗಿಸಿಕೊಟ್ಟ ಹೆಮ್ಮೆ ಸೇವಾ ಕ್ಕೆ ಸೇರುತ್ತದೆ. ಅಸಂಘಟಿತ ಕ್ಷೇತ್ರದ ಮಹಿಳೆಯರಿಗೆ ಸೇವಾ ದ ಕೊಡುಗೆಗಳು ತುಂಬಾ ಗಮನಾರ್ಹವಾಗಿವೆ.

ಕಳೆದ ಮೂವತ್ತು ವರ್ಷಗಳಿಂದ ಒಂದೇ ಸಮನೆ ಬೀಡಿ ಸುತ್ತುತ್ತಿರುವ 49 ವರ್ಷದ ಲಕ್ಷ್ಮಿ, ಗಳಿಸಿದ್ದೇನೂ ಇಲ್ಲ. ಸಾಲದ ಹೊರೆಯಲ್ಲಿ ಸಿಲುಕಿದ್ದಾಳೆ. ಆರೋಗ್ಯ ಕ್ಷೀಣಿಸುತ್ತಿದೆ. ದಿನಕ್ಕೆ ಒಂದು ಸಾವಿರ-ಸಾವಿರದೈನೂರು ಬೀಡಿ ಸುತ್ತುತ್ತಿದ್ದ ಆಕೆ ಈಗ 700 ಬೀಡಿ ಸುತ್ತುವಲ್ಲೇ ಸುಸ್ತಾಗುತ್ತಾಳೆ. ಎಲೆಗಳನ್ನು ಸತತವಾಗಿ ಕತ್ತರಿಸುವ ಕೆಲಸದಿಂದ ತೋಳುಗಳು ಬಾತುಕೊಂಡಿವೆ. ಕಣ್ಣುರಿ, ಅಸ್ತಮಾ ಚಿಹ್ನೆಗಳು ಕಾಣತೊಡಗಿದೆ. ಬೆಳಿಗ್ಗೆ 5-30ಕ್ಕೆ ಆರಂಭವಾಗುವ ಈಕೆಯ ದುಡಿಮೆ ಮುಗಿಯುವುದು ರಾತ್ರಿ 11-30ಕ್ಕೆ.

ತರಕಾರಿ ಮಾರುವ ನಂಜಮ್ಮ, ಖಾಸಗಿ ಲೇವಾದೇವಿಗಾರನಿಂದ 50 ರೂ.ಗಳನ್ನು ಮುಂಜಾನೆ ಸಾಲವಾಗಿ ಪಡೆಯುತ್ತಾಳೆ. ತರಕಾರಿಗಳನ್ನು ಕೊಳ್ಳುತ್ತಾಳೆ. ಇಡೀ ದಿನ ಇದರ ಮಾರಾಟಕ್ಕಾಗಿ ಸೆಣಸಿದ ನಂತರ ಸಂಜೆಗೆ 50 ರೂ.ಗಳನ್ನು ಲೇವಾದೇವಿಗಾರನಿಗೆ ವಾಪಸ್ಸು ನೀಡುತ್ತಾಳೆ. ಮಾರನೆ ಮುಂಜಾನೆ ಮತ್ತೆ ಹಣ ಪಡೆಯುತ್ತಾಳೆ. ಇದು ನಿತ್ಯದ ಕಥೆ.

ಹೊಲದಲ್ಲಿ ದುಡಿಯುವ ಮಹಿಳೆಯೊಬ್ಬಳು 8-10 ಗಂಟೆಗಳ ಕಾಲ ಮೈಮುರಿದು ದುಡಿಯುತ್ತಾಳೆ. 8-10 ರೂ. ದೊರೆಯುತ್ತದೆ. ವರ್ಷದಲ್ಲಿ ಕೆಲವು ತಿಂಗಳು ಮಾತ್ರ ಕೃಷಿ ಕೆಲಸ. ಇದರಿಂದ ಸಾಲ ಮಾಡುವುದು ಅನಿವಾರ್ಯ. ನಂತರ ಸಾಲ ತೀರಿಸುವುಕ್ಕಾಗಿಯೇ ಅತ್ಯಂತ ಕಡಿಮೆ ಕೂಲಿಗೂ ಕೆಲಸ ಮಾಡುವ ಒಪ್ಪಂದ ಮಾಡಿಕೊಳ್ಳುವಂತಹ ಸ್ಥಿತಿ ಸೃಷ್ಟಿ.

ಸಿ. ಜಿ. ಮಂಜುಳ

ಇಂತಹ ಮಹಿಳೆಯರ ಉದಾಹರಣೆಗಳು ಅಸಂಖ್ಯ. ಇವರ ಸ್ಥಿತಿಗತಿಗಳು ಜಗತ್ತಿನ ಹಾಗೂ ರಾಷ್ಟ್ರದ "ಅಗೋಚರ ಕಾರ್ಮಿಕರ" ಸ್ಥಿತಿ ಬಿಂಬಿಸುತ್ತದೆ. ತಾವೇ ಸೃಷ್ಟಿಸಿಕೊಂಡ ಉದ್ಯೋಗ ಕ್ಷೇತ್ರಗಳಲ್ಲಿ ಇವರು ದುಡಿಯುತ್ತಾರೆ. ಉತ್ಪಾದಿತ ವಸ್ತುಗಳು ಅಥವಾ ಮಾನವ ಶ್ರಮದ ಮಾರಾಟದ ಅವಕಾಶಗಳಿಗಾಗಿ ಸೆಣಸುತ್ತಾರೆ.

ಇವರಲ್ಲಿ ಬಂಡವಾಳ ಅಥವಾ ಉತ್ಪಾದನಾ ಉಪಕರಣಗಳಿಲ್ಲ. ಸಂಘಟಿತ ಕೈಗಾರಿಕಾ ಕ್ಷೇತ್ರದೊಡನೆ ನೇರ ಸಂಪರ್ಕವಿಲ್ಲ. ಆಧುನಿಕ ತಂತ್ರಜ್ಞಾನ, ಸೌಲಭ್ಯಗಳ ಪರಿಚಯವಿಲ್ಲ. ಕೌಶಲ್ಯ, ತಂತಮ್ಮ ವ್ಯಾಪಾರದ ತಿಳು ವಳಿಕೆ ಹಾಗೂ ಶ್ರಮ ಶಕ್ತಿಯಷ್ಟೇ ಇವರಲ್ಲಿರುವ ಬಂಡವಾಳ. ಸಾಮಾನ್ಯವಾಗಿ "ಅಸಂಘಟಿತ ವಲಯ"ಕ್ಕೆ ಸೇರಿದವರೆಂದು ವಿಂಗಡಿಸಲಾಗುವ ಇವರು ಸ್ವಯಂಉದ್ಯೋಗ ಕಾರ್ಮಿಕರ ಸಮುದಾಯ ಪ್ರತಿನಿಧಿಸುತ್ತಾರೆ. ಕೇವಲ ಶೇಕಡ 6 ರಷ್ಟು ಮಹಿಳೆಯರು ಮಾತ್ರ ಸಂಘಟಿತ ಕೈಗಾರಿಕಾ ಕ್ಷೇತ್ರಗಳಲ್ಲಿದ್ದಾರೆ. ಉಳಿದ ಶೇಕಡ 94ರಷ್ಟು ಮಂದಿ ಸ್ವತಃ ಸೃಷ್ಟಿಸಿಕೊಂಡ ಉದ್ಯೋಗದಲ್ಲಿ ಗಂಜಿ ಕಾಣಬೇಕಿದೆ (ಇದು 1980 ರಲ್ಲಿ ಕೋಪನ್ ಹೇಗನ್‌ನಲ್ಲಿ ನಡೆದ ಮಹಿಳಾ ಮಧ್ಯದಶಕ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾದ ವಿಶ್ವಸಂಸ್ಥೆಯ ಅಂಕಿ ಅಂಶ) ಇಂತಹ ಮಹಿಳೆಯರಿಗೆ ಸಮಾಜದಲ್ಲಿ ಇತ್ಯಾತ್ಮಕ ಸ್ಥಾನ ಗಳಿಸಿ ಕೊಡುವುದಕ್ಕಾಗಿ "ಸೇವಾ" ರೂಪುಗೊಂಡಿತು. "ಸೆಲ್ಫ್ ಎಂಪ್ಲಾಯ್‌ಡ್ ವಿಮೆನ್ಸ್ ಅಸೋಸಿಯೇಷನ್" ಹೆಸರಿನ ಸಂಕ್ಷಿಪ್ತ ರೂಪ "ಸೇವಾ". ಅನೇಕ ಭಾರತೀಯ ಭಾಷೆಗಳಲ್ಲಿ ಸೇವೆ ಎನ್ನುವ ಅರ್ಥ ಧ್ವನಿಸುತ್ತದೆ.

ಗುಜರಾತ್ ರಾಜ್ಯದ ಅಹಮದಬಾದಿನಲ್ಲಿ ನೊಂದಾಯಿಸಲಾಗಿರುವ ಕಾರ್ಮಿಕ ಸಂಘ "ಸೇವಾ" ಅಹಮದಾಬಾದಿನ ಜವಳಿ ಕಾರ್ಮಿಕ ಸಂಘದ(ಟಿಎಲ್ಎ) ಮಹಿಳಾ ವಿಭಾಗವಾಗಿ ಕಳೆದ 1981 ರವರೆಗೂ ಕೆಲಸ ಮಾಡುತ್ತಿದ್ದ ಸೇವಾ ಈಗ ಸ್ವಾಯತ್ತ ಸಂಸ್ಥೆಯಾಗಿದೆ. ಗಾಂಧಿ ತತ್ವ ಚಿಂತನೆ ಸೇವಾ ಸ್ಫೂರ್ತಿಯ ಸೆಲೆ.

ಸ್ವಯಂ ಉದ್ಯೋಗ ಕ್ಷೇತ್ರಕ್ಕೆ ಸಂಘಟಿತ ಕ್ಷೇತ್ರದ ಕಾರ್ಮಿಕ ಕಾನೂನು, ರಕ್ಷಣೆ ನಿಯಮಾವಳಿಗಳು ಅನ್ವಯಿಸುವುದಿಲ್ಲ. ಲೇವಾದೇವಿಗಾರ ಹಾಗೂ ಮಧ್ಯವರ್ತಿಗಳ ಮಧ್ಯೆ ನಲುಗುತ್ತಾರೆ ಈ ಬಡವರು. ಈ ಕ್ಷೇತ್ರದ ಕಾರ್ಮಿಕರನ್ನು ಕಾರ್ಮಿಕ ಕಾನೂನು ವ್ಯಾಪ್ತಿಗೆ ತರುವ ದಕ್ಕಾಗಿ ಸೇವಾ ಅನ್ನು ಕಾರ್ಮಿಕ ಸಂಘವಾಗಿ ನೊಂದಾಯಿಸಲು ನಿರ್ಧರಿಸಲಾಯಿತು. ಕಾರ್ಮಿಕ ಕಮಿಷನರ್ ಕಛೇರಿಯ ಭಾರಿ ಪ್ರತಿರೋಧದ ನಡುವೆಯೂ ಕಳೆದ 1972 ರಲ್ಲಿ ನೊಂದಾಯಿಸಲಾದ ಕಾರ್ಮಿಕ ಸಂಘವಾಗಿ "ಸೇವಾ"ಗೆ ಮಾನ್ಯತೆ ಸಿಕ್ಕಿತು.

ವಿವಿಧ ಬಗೆಯ ಸ್ವಯಂ ಉದ್ಯೋಗಗಳಲ್ಲಿ ತೊಡಗಿರುವ ದುಡಿಯುವ ಮಹಿಳೆಯರನ್ನು ಸಂಘಟಿಸಿ ಅವರಿಗೆ ನ್ಯಾಯವಾಗಿ ಸಿಗಬೇಕಾದ ಸವಲತ್ತುಗಳಿಗೆ ಶ್ರಮಿಸುವುದು ಸೇವಾ ಗುರಿ.

ಈ ಗುರಿ ಸಾಧನೆಗೆ ಹಲವು ಆಯಾಮಗಳಿವೆ. ಜಗತ್ತಿನ ಜನಸಂಖ್ಯೆಯಲ್ಲಿ ಶೇಕಡ 40 ರಷ್ಟು ಮಹಿಳೆಯರು ವಿಶ್ವದ ಆರ್ಥಿಕತೆಯ ಕೆಲಸಗಳಲ್ಲಿ ಮೂರನೇ ಎರಡು $\frac{2}{3}$ ಭಾಗದಷ್ಟು ಕಾರ್ಯಗಳನ್ನು ನಿರ್ವಹಿಸುವ ಮಹಿಳೆ ಇದಕ್ಕಾಗಿ ಕೇವಲ ಶೇಕಡ 10 ರಷ್ಟು ವೇತನ, ಸಂಬಳ ಪಡೆಯುತ್ತಾಳೆ. ಈ ಆದಾಯದಲ್ಲೂ ಶೇಕಡ 1 ರಷ್ಟರ ಮೇಲೆ ಮಾತ್ರ ಮಹಿಳೆ ಹಕ್ಕು ಸಾಧಿಸುತ್ತಾಳೆ. ಮಹಿಳೆಯ ಕೆಲಸವನ್ನು—ಕೆಲಸವೆಂದು ಗುರುತಿಸದಿರುವುದೇ ಇದಕ್ಕೆಲ್ಲಾ ಕಾರಣ. ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ ಸ್ವಯಂ—ಉದ್ಯೋಗದ ಮಹಿಳೆಯರಿಗೆ, ಮಾನ್ಯತೆ ದೊರಕಿಸಲು, ಅವರ ಕೆಲಸ ಗೋಚರವಾಗುವಂತೆ ಮಾಡುವುದು ಸೇವಾದ ಮೊದಲ ಕಾರ್ಯವಾಗಿತ್ತು. ಮಹಿಳೆ ನಿರ್ವಹಿಸುವ ಕಾರ್ಯಗಳ ಸಮೀಕ್ಷೆಗಳನ್ನು ನಡೆಸುವುದು ಹಾಗೂ ಅವರನ್ನು ಸಂಘಟಿಸುವ ಕ್ರಿಯೆ ಇದರತ್ತ ಇಟ್ಟ ಮೊದಲ ಹೆಜ್ಜೆಯಾಗಿತ್ತು.

ವಿವಿಧ ವ್ಯಾಪಾರಿ ಕೆಲಸಗಳಲ್ಲಿ ನಿರತರಾದ ಮಹಿಳೆಯರಿಗೆ ನ್ಯಾಯಯುತ ವೇತನ ಹೆಚ್ಚಿನ ವೇತನಗಳಿಗಾಗಿ 'ಸೇವಾ' ನಡೆಸಿದ ಹೋರಾಟದಲ್ಲಿ ಅನೇಕ ಸಂದರ್ಭಗಳಲ್ಲಿ ಅನಿವಾರ್ಯವಾಗಿ ದೊಡ್ಡ ಉದ್ಯಮಪತಿಗಳು ಮಧ್ಯಾವರ್ತಿಗಳನ್ನು ಎದುರು ಹಾಕಿಕೊಳ್ಳಬೇಕಾಯಿತು. ಇದು ಸೇವಾ ಸದಸ್ಯರನ್ನು ಸ್ವಾವಲಂಬಿಗಳಾಗಿಸುವ ಅಭಿವೃದ್ಧಿ ಚಟವಟಿಕೆಗಳನ್ನು ಹಮ್ಮಿಕೊಳ್ಳುವುದಕ್ಕೆ ಪ್ರೇರಣೆ ನೀಡಿತು.

ಬಡವರಾದ ಸ್ವಯಂ ಉದ್ಯೋಗಿ ಮಹಿಳೆಯರಿಗೆ ಬ್ಯಾಂಕಿಂಗ್ ಹಾಗೂ ಸಾಲ ಸೌಲಭ್ಯ ಒದಗಿಸುವಂತಹ ಮಹಿಳಾ ಸಹಕಾರಿ ಬ್ಯಾಂಕ್ ಅನ್ನು ರಾಷ್ಟ್ರದಲ್ಲೇ ಪ್ರಥಮ ಬಾರಿಗೆ 1974 ರಲ್ಲಿ ನೊಂದಾಯಿಸಲಾಯಿತು. ಬ್ಯಾಂಕಿಂಗ್ ವ್ಯವಸ್ಥೆಯ ಪಾರಂಪಾರಿಕ ನಂಬಿಕೆಗಳನ್ನು ಸುಳ್ಳಾಗಿಸಿ ಸೇವಾ ಸದಸ್ಯರ ಷೇರು ಬಂಡವಾಳ ಹಾಗೂ ಠೇವಣಿಗಳಿಂದಾದ ಇದೊಂದು ಸುವ್ಯವಸ್ಥಿತ ಆರ್ಥಿಕ ಘಟಕವಾಗಿ ಬೆಳೆದಿದೆ. ಲೇವಾದೇವಿಗಾರರ ಹಿಡಿತದಿಂದ ತಪ್ಪಿಸಿಕೊಂಡು ಸ್ವಾವಲಂಬನೆಯ ಹಾದಿಯಲ್ಲಿ ಸಾಗಲು ಬಡ ಮಹಿಳೆಯರಿಂದ ಸಾಲ ಮರುಪಾವತಿ ಅಸಾಧ್ಯ

ಎಂಬಂತಹ ನಂಬಿಕೆಗೂ ಇದು ಕೊಡಲಿ ಪೆಟ್ಟು ಹಾಕಿದೆ. ಸಾಲ ಮತ್ತು ಮರುಪಾವತಿ ಪರಿಣಾಮಕಾರಿಯಾಗಿರಲು ಮಹಿಳೆಯರು ತಂತಮ್ಮ ವ್ಯಾಪಾರ ಕ್ಷೇತ್ರಗಳಲ್ಲಿ ಪರಿಣಿತಿ ಸಾಧಿಸಬೇಕು ಸಾಮಾಜಿಕ ಭದ್ರತೆಯ ಸೌಲಭ್ಯಗಳಿರಬೇಕು. ಈ ಗುರಿ ಸಾಧನೆಗಾಗಿ ಸೇವಾ ಮಹಿಳಾ ಟ್ರಸ್ಟ್ 1975ರಲ್ಲಿ ಸ್ಥಾಪನೆಯಾಯಿತು. ತರಬೇತಿ, ತಾಂತ್ರಿಕ ಪರಿಣಿತಿ, ಕಾನೂನು ನೆರವು, ಹೆರಿಗೆ ಸೌಲಭ್ಯಗಳು, ಆರೋಗ್ಯ, ಬಾಲವಾಕಿ, ಸಮುದಾಯ ವಿಮೆ ವಿಧವೆಯರಿಗೆ ನೆರವು ಇತ್ಯಾದಿ "ಸೇವಾ" ಸದಸ್ಯರ ಹಲವು ಅಗತ್ಯಗಳಿಗೆ ಟ್ರಸ್ಟ್ ಗಮನ ನೀಡುತ್ತದೆ.

ಕಚ್ಚಾವಸ್ತು ಸರಬರಾಜು ಮಾಡುವವರು ಹಾಗೂ ತಯಾರಿಸಿದ ವಸ್ತುಗಳನ್ನು ಮಾರಾಟಮಾಡುವ ಮಧ್ಯವರ್ತಿಗಳ ಮಧ್ಯೆ ಸಿಲುಕಿದಂತಹ ಸಂದರ್ಭಗಳಲ್ಲಿ ಮಹಿಳೆಯರು ಹೆಚ್ಚಿನ ವೇತನಕ್ಕಾಗಿ ಹೋರಾಟ ನಡೆಸುವುದು ಅಸಾಧ್ಯ ಎಂದು ಕಂಡುಕೊಂಡ "ಸೇವಾ" ತನ್ನದೇ ಕೆಲವು ಆರ್ಥಿಕ ಘಲಕಗಳನ್ನು ಸ್ಥಾಪಿಸಿದೆ. ಇವುಗಳಲ್ಲಿ ಕೆಲವು ಉತ್ಪಾದಕ ಸಹಕಾರ ಸಂಘಗಳನ್ನು ಹೊಂದಿವೆ.



ಬಹಳ ಕಾಲದವರೆಗೆ ಅಹಮದಾಬಾದಿಗೆ ಸೀಮಿತವಾಗಿದ್ದ ಸೇವಾ ಚಟುವಟಿಕೆ 1977ರಲ್ಲಿ ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಿತು. ಈ ಗ್ರಾಮೀಣ ಘಟಕ ಬಡ ಗ್ರಾಮೀಣ ಮಹಿಳೆಯರಿಗೆ ಆದಾಯ ತರಬಹುದಾದ ಅವಕಾಶಗಳನ್ನೂ ಗುರುತಿಸಿ ನಂತರ ತಾಂತ್ರಿಕ, ಆರ್ಥಿಕ ನೆರವನ್ನು ನೀಡುತ್ತದೆ.

ಕುಟುಂಬದ ಆದಾಯ ಹೆಚ್ಚಿಸುವುದಕ್ಕಾಗಿ ದುಡಿಯಲೇ ಬೇಕಿರುವ ಸೇವಾ ಸದಸ್ಯರ ಹದಿಹರೆಯದ ಮಕ್ಕಳಿಗೆ ಹೊಸ ಅವಕಾಶಗಳನ್ನು ತೆರೆಯುವುದಕ್ಕಾಗಿ ಸೇವಾ ಬಾಲ ಕಾರ್ಮಿಕರ ಕೇಂದ್ರ ಸ್ಥಾಪಿಸಲಾಗಿದೆ. ಇಲ್ಲಿ ಈ ಮಕ್ಕಳಿಗೆ ಹೊಸ ಕೌಶಲ್ಯದ ಕಾರ್ಯಗಳ ಬಗ್ಗೆ ತರಬೇತಿ ನೀಡಲಾಗುವುದು ಅಲ್ಲದೆ ಪೌಷ್ಠಿಕ ಆಹಾರ ಮತ್ತು ಅನೌಪಚಾರಿಕ ಶಿಕ್ಷಣ ಸಹ ನೀಡಲಾಗುವುದು.

ಆರ್ಥಿಕತೆಯ ಮುಖ್ಯ ಪ್ರವಾಹದಲ್ಲಿ ಸ್ವಯಂ ಉದ್ಯೋಗ ಕ್ಷೇತ್ರವನ್ನು ಸೇರಿಸಲು ಸರಕಾರದ ನೀತಿಗಳ ಬದಲಾವಣೆ ಅಗತ್ಯ. ಸ್ವಯಂ ಉದ್ಯೋಗದಲ್ಲಿ ತೊಡಗಿರುವ ಕಾರ್ಮಿಕರನ್ನು ಒಳಗೊಳ್ಳುವಂತೆ "ಕಾರ್ಮಿಕ" ಪದದ ಅರ್ಥ ವಿವರಣೆಯೇ ಬದಲಾಗಬೇಕಿದೆ ಹೀಗಾದಾಗ ಮಾತ್ರ ಕಾರ್ಮಿಕ ಕಾನೂನು ಈ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಸತತವಾಗಿ ಐದು ವರ್ಷಗಳ ಸೇವಾ ತಂದ ಒತ್ತಡಕ್ಕೆ ಮಣಿದು ಗುಜರಾತ್ ಸರಕಾರ ಕಡೆಗೂ 1980ರಲ್ಲಿ ಅಸಂಘಟಿತ ಕಾರ್ಮಿಕ ಮಂಡಲಿ ಸ್ಥಾಪಿಸಿತು. ಆರನೆ ಪಂಚವಾರ್ಷಿಕ ಯೋಜನೆ ಕರಡಿನಲ್ಲಿ, ಸ್ವಯಂ ಉದ್ಯೋಗ ಕುರಿತಂತೆ ಪ್ರತ್ಯೇಕ ಅಧ್ಯಾಯ ಸೇರಿಸಲಾಯಿತು.


ಈ ಕ್ಷೇತ್ರದೆಡೆ ಸರಕಾರದ ನೀತಿ ರೂಪಿಸುವವರ ಗಮನ ಸೆಳೆಯುವುದಕ್ಕಾಗಿ ಏಪ್ರಿಲ್ 15 ಅನ್ನು ಸ್ವಯಂ ಉದ್ಯೋಗ ನೌಕರರ ದಿನವಾಗಿ ಆಚರಿಸಲು ಸೇವಾ ಒತ್ತಾಯಿಸುತ್ತಿದೆ. ರಾಷ್ಟ್ರದ ವಿವಿಧೆಡೆಗಳಲ್ಲಿ ಈ ಕ್ಷೇತ್ರದ ಕಾರ್ಮಿಕರನ್ನು ಸಂಘಟಿಸಲು ಯತ್ನಿಸಲಾಗುತ್ತಿದೆ. ಸದ್ಯಕ್ಕೆ ಅಹಮದಾಬಾದ್ ಅಲ್ಲದೆ, ಭೋಪಾಲ್, ಹರಿಯಾಣ, ಲಕ್ನೋ, ಮಿಥಿಲಾ, ಭಾಗಲ್‌ಪುರ' ಸಿಂಗ್‌ಭೂಮ್, ಮುಂಗೇರ್ ಹಾಗೂ ದೆಹಲಿಗಳಲ್ಲಿ ಸೇವಾ ಕಾರ್ಯ ನಿರ್ವಹಿಸುತ್ತಿದೆ ಗುಜರಾತಿ ಭಾಷೆಯಲ್ಲಿ "ಅನಸೂಯ ಎಂಬ ಪಾಕ್ಷಿಕ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ. ಅಲ್ಲದೆ 'ವಿ ದಿ ಸೆಲ್ಫ್ ಎಂಪ್ಲಾಯ್ಡ್" ಎಂಬ ಇಂಗ್ಲೀಷ್ ಪ್ರಕಟಣೆಯನ್ನೂ ಆರಂಭಿಸಲಾಗಿದೆ.

ಗುಜರಾತಿನ ಪ್ರಬಲ ಕಾರ್ಮಿಕ ಸಂಘಟನೆಯಿಂದ ಟೆಕ್ಸ್‌ಟೈಲ್ ಲೇಬರ್ ಅಸೋಸಿಯೇಷನ್ (ಟಿಎಲ್ಎ) ಬೆಂಬಲದಿಂದ ಜತೆ ಜತೆಯಾಗಿಯೇ ಕಾರ್ಯ ನಿರ್ವಹಿಸುತ್ತಿದ್ದ "ಸೇವಾ" 1981ರ ಮೇ ತಿಂಗಳಲ್ಲಿ ಟಿ ಎಲ್ ಎ

ಸದಸ್ಯರ ನಡವಳಿಕೆ ಸಂಘದ ಶಿಸ್ತಿಗೆ ವಿರುದ್ಧ ಹಾಗೂ ತೀರಾ ಸ್ವಾತಂತ್ರ್ಯ ವಹಿಸಿದಂತಹದು ಎಂದು ಟೀಕಿಸಿಲಾಯಿತು. ಇದರಿಂದ ಟಿ ಎಲ್ ಎ ಯಿಂದ ಪೂರ್ಣ ಬೇರ್ಪಡಲು ಸೇವಾಗೆ ಸೂಚಿಸಲಾಯಿತು. ಟಿ ಎಲ್ ಎ ನಾಯಕರ ನಿಯಂತ್ರಣದಲ್ಲಿರುವ ರಾಷ್ಟ್ರೀಯ ಕಾರ್ಮಿಕ ಸಂಘಟನೆ ಸದಸ್ಯತ್ವದಿಂದ ಸೇವಾ ಅನ್ನು ಉಚ್ಚಾಟಿಸಲಾಯಿತು.

ಸ್ವಯಂ ಉದ್ಯೋಗದಲ್ಲಿ ತೊಡಗುವ ವ್ಯಕ್ತಿಯೂ ಕಾರ್ಮಿಕನೇ ಎಂಬ ವಿಚಾರವನ್ನು ಅಂತಿರರಾಷ್ಟ್ರೀಯ ಮಟ್ಟದಲ್ಲೂ ಈಗ ಅಂಗೀಕರಿಸಲಾಗಿದೆ. ಕೋಪೆನ್‌ಹೇಗ್‌ನಲ್ಲಿ ಕಳೆದ 1980 ರಲ್ಲಿ ನಡೆದ ವಿಶ್ವಸಂಸ್ಥೆ ಮಹಿಳಾ ಸಮ್ಮೇಳನದಲ್ಲಿ 'ಕಾರ್ಮಿಕ' ಪದದ ಅರ್ಥವಿವರಣೆಯ ಬಗ್ಗೆ ಪುನರಾಲೋಚಿಸಲು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ಐ ಎಲ್ ಒ ಗೆ ಒತ್ತಾಯಿಸಿ. ನಿರ್ಣಯ ಅಂಗೀಕರಿಸಲಾಗಿತ್ತು.

ಇಂದು, ಅಸಂಘಟಿತ ವಲಯದ ಕಾರ್ಮಿಕರನ್ನು ಸಂಘಟಿತ ಕ್ಷೇತ್ರಕ್ಕೆ ಸೇರಿಸಿರುವಂತಹ ಪ್ರಗತಿಪರ ಸಂಘಟನೆಯಾಗಿದೆ ಐ ಎಲ್ ಓ. ಐ ಎಲ್ ಒ ಆಹ್ವಾನದ ಮೇರೆಗೆ 1983 ರಲ್ಲಿ ಐಸಿಎಫ್‌ಟಿಯು ವರ್ಲ್ಡ್ ಕಾಂಗ್ರೆಸ್‌ನಲ್ಲಿ ಪಾಲ್ಗೊಳ್ಳುವಂತಹ ಗೌರವ ಸೇವಾದಾಗಿತ್ತು.



1983ರ ಸೆಪ್ಟೆಂಬರ್ ತಿಂಗಳಿಂದ ಸೇವಾ ಬ್ಯಾಂಕ್ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪಟ್ಟಿಯಲ್ಲಿ ಸೇರಿದೆ. ಗ್ರಾಮೀಣ ಅಭಿವೃದ್ಧಿಗಾಗಿ ಸರಕಾರ ರೂಪಿಸಿರುವ ಎನ್ ಆರ್ ಇಪಿ, ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಹಮದಾಬಾದ್ ಜಿಲ್ಲೆಯಲ್ಲಿ ಸೇವಾ ಸದಸ್ಯರು ಸಹಕರಿಸುತ್ತಿದ್ದಾರೆ.

ಸೇವಾ ಸ್ಥಾಪನೆಗೆ ಪ್ರಮುಖ ಕಾರಣರಾದ ಸೇವಾ ಕಾರ್ಯಕಾರಿ ಸಮಿತಿ ಪ್ರಧಾನ ಕಾರ್ಯದರ್ಶಿ ಇಳಾಭಟ್ ಅವರಿಗೆ 1977ರಲ್ಲಿ ವಿಶ್ವದ ಪ್ರತಿಷ್ಠಿತ ಮ್ಯಾಗ್‌ಸೇಸೆ ಪ್ರಶಸ್ತಿಯು ಲಭಿಸಿತು. ಈ ಪ್ರಶಸ್ತಿಯ 20,000 ಡಾಲರ್ ಹಣವನ್ನು ಇಳಾಭಟ್ ಸೇವಾ ಟ್ರಸ್ಟ್‌ಗೆ ಕೊಡುಗೆಯಾಗಿ ನೀಡಿದರು. ◯

ಲೇಡೀಸ್ ಸೀಟು ಮತ್ತು ದುಡಿಯುವ ಮಹಿಳೆ

ಹೆಂಡತಿಯರು ಮಾಡಿಟ್ಟ ಅಡುಗೆಯನ್ನು
ಪಟ್ಟಾಗಿ ಹೊಡೆದು 'ಬಸ್ಸು ಕ್ಯೂ'ನಲ್ಲಿ
ಎಲ್ಲರಿಗಿಂತ ಮುಂದೆ ಇರುವ ಈ ಗಂಡಸರಿಗೆ
ಲೇಡೀಸ್ ಸೀಟುಗಳ ಮೇಲೇ ಕಣ್ಣು.
ಅಷ್ಟೇ ಅಲ್ಲ,
ಲೇಡಿ ಕುಳಿತ ಸೀಟಿನ ಮೇಲೂ ಕಣ್ಣು.
ಮನೆಯಲ್ಲೂ ದುಡಿದು ಹೊರಗೆ ದುಡಿಯಲು
ಲೇಟಾಗಿ ಬಂದ ಮಹಿಳೆಯರಿಗೆ
ಯಾವಾಗಲೂ ಸ್ಟಾಂಡಿಂಗ್ ಸೀಟೇ !


ಮಹಿಳೆಯರ ಕಣ್ಣು ಲೇಡೀಸ್ ಸೀಟು ಕಡೆ
ಹೊರಳಿದರೆ, ಇವರ ಕಣ್ಣ ಭಾವಕ್ಕೆ
ಅವರ ಕಣ್ಣುಗಳು ಗೂಣಗುತ್ತವೆ.
'ಸಮಾನತೆ ಅಂತೀರಿ, ನಿಂತುಕೊಳ್ಳಲು ಆಗಲ್ವೇ ?'
ಹೌದು.
ದೈಹಿಕವಾಗಿ ಮಾತ್ರ ಹೆಣ್ಣು ಅಬಲೆ.
ಮಿಕ್ಕೆಲ್ಲಾ ವಿಷಯಗಳಲ್ಲಿ ಅವಳೆಲ್ಲಿ ಅಬಲೆ ?

ನಾವೂ ಮಹಿಳೆಯರೇ.
ನಮಗೆ ಲೇಡೀಸ್ ಸೀಟು ಬೇಡ.
ಈ ಬಸುರಿ ಹೆಂಗಸಿಗೆ,
ಈ ಅಂಗವಿಕಲೆಗೆ,
ಮಗುವನೆತ್ತಿಕೊಂಡ ಈ ತಾಯಿಗೆ,
ಸುಸ್ತಾಗಿ ನಿಂತಿರುವ ಈ ಹೆಣ್ಣಿಗೆ,
ಈ ಮುಪ್ಪು ಮುದುಕಿಗೆ,
ಮಾತ್ರ-ಮಾತ್ರ
"ಲೇಡೀಸ್ ಸೀಟು" ಬಿಟ್ಟು ಕೊಡಿ.

—ವರದಾ ಶ್ರೀನಿವಾಸ

ಆರೋಗ್ಯ

ತಾಯ್ತನ ಕರ್ತವ್ಯವೋ ಅಥವಾ ಆಯ್ಕೆಯೋ?



ಹೆಣ್ಣು ಗರ್ಭಾವಸ್ಥೆಯ ಸಮಯದಲ್ಲಾಗಲೀ ಹೆರಿಗೆಯ ಸಮಯದಲ್ಲಾಗಲೀ, ಹಾಗೂ ಗರ್ಭಪಾತವಾದ 42 ದಿನಗಳೊಳಗೆ ಸಂಭವಿಸುವ ಸಾವಾಗಲೀ, "ತಾಯ್ತನಕ್ಕೆ ಸಂಬಂಧಪಟ್ಟ ಸಾವು" ಎಂಬುದು ಅಂತರರಾಷ್ಟ್ರೀಯವಾಗಿ ಒಪ್ಪಿತವಾಗಿದೆ. ತಾಯ್ತನಕ್ಕೆ ಸಂಬಂಧಪಟ್ಟ ಸಾವು ಪ್ರಪಂಚದಲ್ಲಿರುವ ಪ್ರತಿಯೊಬ್ಬರಿಗೂ ಸಂಬಂಧಪಟ್ಟದ್ದಾಗಿದೆ. ಈ ವಿಚಾರದಲ್ಲಿ ವಿಮೆನ್ಸ್ ಗ್ಲೋಬಲ್ ನೆಟ್‌ವರ್ಕ್ ಆನ್ ರಿಪ್ರೊಡಕ್ಟೀವ್ ರೈಟ್ಸ್ ಮತ್ತು ಲ್ಯಾಟಿನ್ ಅಮೇರಿಕನ್ ಅಂಡ್ ಕರೇಬೀಯನ್ ವಿಮೆನ್ಸ್ ಹೆಲ್ತ್ ನೆಟ್‌ವರ್ಕ್ ಆಫ್ ಐಎಸ್ ಐಎಸ್ ಇಂಟರ್‌ನ್ಯಾಷನಲ್ ಎಂಬ ಸಂಸ್ಥೆಗಳು ವಿಶೇಷ ಗಮನ ಹರಿಸಿ ತಾಯ್ತನಕ್ಕೆ ಸಂಬಂಧಪಟ್ಟ ಸಾವಿನ ಪ್ರಮಾಣವನ್ನು ತಡೆಯುವ ಸಲುವಾಗಿ ಪ್ರಪಂಚದಾದ್ಯಂತ ಎಲ್ಲರ ಗಮನ ಕೇಂದ್ರಿಕರಿಸಲು ಮೇ 28, 1988 ರಂದು "ವಿಶ್ವ ಮಹಿಳಾ ಆರೋಗ್ಯ ದಿನಾಚರಣೆ" ಎಂದು ಘೋಷಿಸಿವೆ.

ತಾಯ್ತನಕ್ಕೆ ಸಂಬಂಧಪಟ್ಟ ನೋವಿನೊಂದಿಗೆ ಸಾವಿನ ಸಂಭವವೂ ಕೂಡಾ ಹೆಣ್ಣಿನ ಪಾಲಿಗೆ ನಿತ್ಯಸತ್ಯ. ಶತಮಾನಗಳಿಂದಲೂ ಸಾವು ನೋವುಗಳೊಂದಿಗೆ ಬದುಕಿ ಬಂದಿದ್ದರೂ ಆಕೆ ದಿವ್ಯ ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದಾಳೆ. ಭಾರತೀಯ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಯಲ್ಲಿ ಹೆಣ್ಣು, ಹೆರಿಗೆ ಇವೆಲ್ಲಕ್ಕೂ ಮುಖ್ಯವಾಗಿ ಗರ್ಭಪಾತ ಎನ್ನುವುದೆಲ್ಲವನ್ನು ಪುರುಷ ಪ್ರಧಾನ ವ್ಯವಸ್ಥೆ ತನ್ನ ಚರಿತ್ರೆಯ ಗರ್ಭದಲ್ಲಿ ಹೊಸಕಿ ಹಾಕಿದೆ. ಹೆಣ್ಣು ಎಂದು, ಯಾವತ್ತೂ ಯಾವುದೇ ವಿಚಾರಗಳಲ್ಲಿ ಸ್ವತಂತ್ರಳಾಗಬಾರದೆಂಬುದೇ ಕಾರಣವಾಗಿದೆ. ಹೆಣ್ಣಿನ ಮುಕ್ತತೆಗೆ ಮುಖ್ಯವಾಗುವುದು, ಎಂದು ಹೆಣ್ಣು ತನ್ನ ತಾಯ್ತನವನ್ನು ತಾನೇ ನಿರ್ಧರಿಸುವಳು ಅಂದು ಎಂಬುದನ್ನು ತಿಳಿಯಬೇಕಾಗಿರುವುದು ಅವಶ್ಯವಾಗಿದೆ. ಭಾರತೀಯ ಸಮಾಜದಲ್ಲಿ ತಾಯ್ತನ, ಗರ್ಭಪಾತ, ಅನ್ನುವುದೆಲ್ಲಾ ಅತ್ಯಂತ ಮಡಿವಂತಿಕೆಯ, ನಿಷ್ಠೂರತೆಯ ವಿಚಾರ. ಗರ್ಭಪಾತ ಎಂದಾಕ್ಷಣ ನಾವುಗಳು ನೋಡುವ ಬಗ್ಗೆ, ಸ್ಪಂದಿಸುವ ವಿಚಾರವನ್ನು ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗಿರುವುದು ಅತ್ಯವಶ್ಯ.

ಭಾರತೀಯ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಯಲ್ಲಿ ಹೆಣ್ಣು, ಹೆರಿಗೆ ಇವೆಲ್ಲಾಕ್ಕೂ ಮುಖ್ಯವಾಗಿ ಗರ್ಭಪಾತ ಎನ್ನುವುದನ್ನು ಪುರುಷ ಪ್ರಧಾನ ವ್ಯವಸ್ಥೆ ತನ್ನ ಚರಿತ್ರೆಯ ಗರ್ಭದಲ್ಲಿ ಹೊಸಕಿ ಹಾಕಿದೆ. ಈ ವಿಚಾರಗಳು ಅತ್ಯಂತ ಮಡಿವಂತಿಕೆಯ ಹಾಗೂ ನಿಷ್ಠುರತೆಯ ಅಂಶಗಳಾಗಿವೆ. ಗರ್ಭಪಾತ, ತಾಯ್ತನ ಎಂದಾಕ್ಷಣ ನಾವು ಸ್ಪಂದಿಸುವ ವಿಚಾರವನ್ನು ನಮ್ಮ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗಿರುವುದು ಅತವಶ್ಯ.

ಸ್ತ್ರೀ ಎಂಬ ಪದದ ಅರ್ಥವೇ ಸೂಚಿಸುವಂತೆ ಹೆಣ್ಣಿನ ಅಸ್ತಿತ್ವದ ಪ್ರತೀಕವೆಂದರೆ ಕೇವಲ ಹೆರುವುದೇ ಆಗಿದೆ. ವೇದಕಾಲದಿಂದಲೂ ಹಿಡಿದು ಇಂದಿಗೂ ಹಲವಡೆ ಪ್ರಚಲಿತದಲ್ಲಿರುವಂತೆ ಹೆಣ್ಣು ರಜಸ್ವಲೆಯಾಗುವುದಕ್ಕೆ ಮುಂಚೆ ಮದುವೆ ಮಾಡುವುದು ಸಂಪ್ರದಾಯವಾಗಿದೆ. ಕಾರಣ ಹೆಣ್ಣಿನ ದೇಹದಲ್ಲಿ ಉತ್ಪತ್ತಿಯಾಗುವ ಪ್ರಥಮ ಅಂಡಾಣುಗಳು ಸಹ ವ್ಯರ್ಥವಾಗಬಾರದೆಂಬ ಸ್ವಾರ್ಥದ ಮುನ್ನೆಚ್ಚರಿಕೆಯಾಗಿತ್ತು. ಕೆಲವೊಮ್ಮೆ ಹಾಗೆ ಆಗದಿದ್ದಲ್ಲಿ ಆಕೆಯ ಪೋಷಕರು ಗೋದಾನ ಭೂದಾನ ಇನ್ನೂ ಮುಂತಾದ ಶಾಂತಿ ಕ್ರಿಯೆಗಳನ್ನು ನಡೆಸುತ್ತಿದ್ದರು. ಇಂತಹ ಅನರ್ಥ ದಾನಧರ್ಮಗಳ ಮೂಲಕ ಹೆಣ್ಣಿನ ಸ್ವಾತಂತ್ರ್ಯ ಹರಣವಾಗಿರುವುದು ಚರಿತ್ರೆಯ ಪ್ರತಿ ಪುಟಗಳ ಸತ್ಯವಾಗಿದೆ..

ಹೆಣ್ಣು ಮದುವೆಯಾಗಿ ತಾಯಿಯಾದಾಗಲೇ ಪರಿಪೂರ್ಣಳು, ಗೌರವಾನ್ವಿತಳು ಎಂಬುದು ನಮ್ಮ ಸಂಸ್ಕೃತಿಯ ಸಾರವಾಗಿದೆ. ಗರ್ಭವನ್ನು ಧರಿಸುವುದು ಹೆಣ್ಣೇ ಆದರೂ, ನಿರ್ಧರಿಸುವ ಹಕ್ಕು ಆಕೆಯದಲ್ಲವೆಂಬುದು ಸಾಂಸ್ಕೃತಿಕ ವಿಪರ್ಯಾಸವಾಗಿದೆ. ಇವೆಲ್ಲವೂ ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣಿನ ಮೇಲೆ ಹೇರಿರುವ ಮೌಲ್ಯಗಳು ಎಂಬುದು ಅತಿಶಯವಲ್ಲ. ಇಂತಹ ವ್ಯವಸ್ಥಿತ ಚೌಕಟ್ಟನ್ನು ಮುರಿದು, ಬದುಕಿನ ಹಲವಾರು ಸ್ತರಗಳಲ್ಲಿ ಹೆಣ್ಣು ಸ್ವವ್ಯಕ್ತಿತ್ವವನ್ನು ಕಂಡುಕೊಳ್ಳುತ್ತಿರುವುದು ಸಂಪೂರ್ಣ ಸ್ವಾತಂತ್ರಗಳಲ್ಲಿ ಎಂಬುದನ್ನು ಮನಗಾಣಬೇಕು.

ಹೆಣ್ಣಿನ ಪರಿಪೂರ್ಣತೆಯನ್ನು ತಾಯ್ತನ, ಗರ್ಭಪಾತಧಾರದ ಮೇಲೆ ನಿರ್ಧರಿಸುವುದು ಸಮಾಜದ ಜವಾಬ್ದಾರಿಯಾಗಲಿ, ಹಕ್ಕಾಗಲಿ ಅಲ್ಲವೇ ಅಲ್ಲ. ಅದು ಹೆಣ್ಣಿನ ಜನ್ಮ ಸಿದ್ಧ ಹಕ್ಕು ಎನ್ನುವ ವಿಚಾರ ಅತ್ಯಂತ ಪ್ರಸ್ತುತ. ಗರ್ಭಪಾತ ಎಂದು ಕೂಡಲೇ ತಟ್ಟನೇ ಕಾಡುವುದು ಅಪರಾಧ ಪ್ರಜ್ಞೆ, ಜೊತೆ ಜೊತೆಯಲೇ ರಾಚುವುದು ನೈತಿಕತೆಯ ಪ್ರಶ್ನೆ. ಇದಕ್ಕೆ ಮುಖ್ಯ ಕಾರಣ ಗರ್ಭಪಾತದ ಬಗ್ಗೆ ಇರುವ ತಪ್ಪು ಗ್ರಹಿಕೆ. ಈ ಸೂಕ್ಷ್ಮ ನಿಗೂಢತೆಯನ್ನು ಅರ್ಥೈಸಿಕೊಳ್ಳಲು ಚರಿತ್ರೆಯ ಪುಟಗಳನ್ನು ತಿರುಗಿಸಲೇಬೇಕು. ನಾಗರೀಕತೆಯ ಉಗಮದಿಂದಲೂ ಗರ್ಭಪಾತ ಮಹಿಳೆಯ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ಹಿಂದಿನಿಂದಲೂ ಗರ್ಭಪಾತ ಮಾಡಿಕೊಳ್ಳಲು ಅಥವಾ ಮಾಡಿಸಿಕೊಳ್ಳಲು ಅನೇಕ ವಿಧಾನಗಳನ್ನು ಅನುಸರಿಸುತ್ತಿದ್ದರು. (ಉದಾ : ನಾರು, ಬೇರು, ಸೊಪ್ಪು, ದಾಯಿ) ಪ್ರಸ್ತುತ ವೈದ್ಯಕೀಯ ವಿಜ್ಞಾನವು ಎಷ್ಟೇ ಮುಂದುವರಿದಿದ್ದರೂ ಸುರಕ್ಷಿತ "ಗರ್ಭಪಾತ"ದ ಕ್ರಮಗಳನ್ನು ಬೆಳಕಿಗೆ ತಂದಿದ್ದರೂ ಮಹಿಳೆಯರ ಪಾಲಿಗೆ ಸುಲಭವಾಗಿ ಧಕ್ಕುವುದು ಕತ್ತಲಲ್ಲಿ ಸೇರಿದೆ. ಕಾರಣ ಇದಕ್ಕೆ ಸಂಬಂಧಪಟ್ಟ ಕ್ರಮಗಳ ಬಗ್ಗೆಯಾಗಲೀ ರಕ್ಷಣೆಯ ಬಗ್ಗೆಯಾಗಲೀ ಸೂಕ್ತ ತಿಳುವಳಿಕೆ ಹಾಗೂ ಸ್ಪಷ್ಟ ಮಾಹಿತಿಯನ್ನು ಮಹಿಳೆಯರು ತಿಳಿದಿರುವುದಿಲ್ಲ. ನೈತಿಕತೆಯ ಜೊತೆಯಲ್ಲಿ ಹೆಣ್ಣಿನ ಶೀಲವನ್ನು ಗರ್ಭಪಾತದೊಂದಿಗೆ ಹೊಸೆದಿರುವುದು ಕೂಡ ಗಮನಿಸಬೇಕಾದ ಅಂಶ. ಇದೊಂದು ಅಮಾನವೀಯ ಕ್ರಿಯೆಯೆಂದು ಪರಿಗಣಿಸಿದಲ್ಲಿ ಹೆಣ್ಣನ್ನು ಜೀವಂತ ಸುಡುವುದೂ ಅತ್ಯಾಚಾರವೆಸಗುವುದೂ ಮಾನವೀಯತೆಯೇ ? ತಾಯ್ತನ, ಗರ್ಭಪಾತ ಹೆಣ್ಣಿನ ದೇಹಕ್ಕೆ ಸಂಬಂಧಿಸಿರುವುದರಿಂದ ಅದು ಹೆಣ್ಣೇ ನಿರ್ಧರಿಸುವುದಾದರೆ ಅದು ಆಕೆಯ ಆಯ್ಕೆಯಾಗುತ್ತದೆಯೇ ಹೊರತು ಅಮಾನವೀಯ ಕೃತ್ಯವಲ್ಲ ಎಂಬುದನ್ನು ಅತ್ಯವಶ್ಯಕವಾಗಿ ಮನಗಾಣಬೇಕು.

ವೈದ್ಯಕೀಯ ವಿಜ್ಞಾನ ವಿಶ್ವದಾದ್ಯಂತ ಮುಂದುವರಿದಿದ್ದರೂ ಶೇಕಡಾ ನೂರರಷ್ಟು ಖಚಿತವಾದ ಗರ್ಭನಿರೋಧಕಗಳನ್ನು ಕಂಡು ಹಿಡಿದಿಲ್ಲ. ಇದರಿಂದಾಗಿ ಕೆಲವು ಸಲ ಗರ್ಭಧರಿಸುವುದು ಅನಿವಾರ್ಯವಾಗಿ ಬಿಡುತ್ತದೆ. ಇಂತಹ ಸಮಯದಲ್ಲಿ ಗರ್ಭಪಾತ ಮಾಡಿಸಿಕೊಳ್ಳುವುದಾಗಲೀ, ಬಿಡುವುದಾಗಲೀ ಹೆಣ್ಣಿನ ಆಯ್ಕೆಯೇ ಅಂತಿಮ ನಿರ್ಧಾರವಾಗಬೇಕಾಗುತ್ತದೆ.

ಜಗತ್ತಿನಾದ್ಯಂತ "ತಾಯ್ತನಕ್ಕೆ ಸಂಬಂಧಪಟ್ಟ" ಸಾವನ್ನು ಶೇಕಡವಾರು ಪ್ರಮಾಣದಲ್ಲಿ ನೋಡಿದರೆ, ಅಭಿವೃದ್ಧಿ ಶೀಲ ರಾಷ್ಟ್ರಗಳಿಗಿಂತ ಮೂರನೆಯ ಜಗತ್ತಿನಲ್ಲಿ ತಾಯ್ತನಕ್ಕೆ ಸಂಬಂಧ ಪಟ್ಟ ಸಾವಿನ ಪ್ರಮಾಣ ಹೆಚ್ಚಾಗಿದೆ. ಉದಾ : ದಕ್ಷಿಣ ಏಷ್ಯಾದಲ್ಲಿ ಪ್ರತಿ



ವರ್ಷಾನೂ 2 ಲಕ್ಷಕ್ಕೂ ಹೆಚ್ಚು ಮಹಿಳೆಯರು ಇಂತಹ ಅವಮಾನನೀಯ ಮರಣಕ್ಕೊಳಗಾಗುತ್ತಿದ್ದಾರೆ. ಅಷ್ಟೇ ಏಕೆ, ಭಾರತದೇಶದಲ್ಲಿಯೇ ಒಂದು ಲಕ್ಷ ಇಪ್ಪತ್ತೈದು ಸಾವಿರ ಮಹಿಳೆಯರು ಬಸಿರು, ಹೆರಿಗೆ, ಗರ್ಭಪಾತಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳದಿರುವುದು ಖಂಡಿತ ಒಂದು ಕಾರಣವೇ.

ನಮ್ಮ ದೇಶದಲ್ಲಿ ಕಾನೂನು ರೀತ್ಯಾ ಗರ್ಭಪಾತ ಮಾಡಿಸಿಕೊಳ್ಳುವ ಅವಕಾಶವಿದೆ (ಜನನ ನಿಯಂತ್ರಣವೆ ಇದರ ಗುಟ್ಟು). ಈ ಅವಕಾಶವನ್ನು ಮಹಿಳೆಯ ಹಕ್ಕೆಂದು ಪರಿವರ್ತಿಸಿ, ಅದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಲ್ಲವೆ ? ಸುರಕ್ಷಿತ ಗರ್ಭಪಾತದಿಂದ (ಮತ್ತೆ ಗರ್ಭಧರಿಸುವುದಕ್ಕಾಗಲೀ, ಮಗುವನ್ನು ಹೆರುವುದಕ್ಕಾಗಲೀ ಗರ್ಭಕೋಶಕ್ಕೆ ಯಾವುದೇ ರೀತಿಯ ಹಾನಿ ಇಲ್ಲವೆಂದು ಇತ್ತೀಚಿನ ವರದಿಯ ಪ್ರಕಾರ ಸಾಬೀತಾಗಿದೆ. ಈ ಎಲ್ಲ ವಿಚಾರಗಳನ್ನು ಗಂಭೀರವಾಗಿ ತೆಗೆದುಕೊಂಡರೂ ಅತ್ಯವಶ್ಯಕವಾಗಿ ಗಮನಿಸಬೇಕಾದ ಇನ್ನೂ ಕೆಲವು ವಿಚಾರಗಳಿವೆ.

ಮೊದಲನೆಯದಾಗಿ, ಇಂದಿನ ಪುರುಷ ಪ್ರಧಾನ ಮೌಲ್ಯಾಧಾರಿತ ಸಾಮಾಜಿಕ ಸಂದರ್ಭದಲ್ಲಿ, ತನ್ನ ದೇಹದ ಮೇಲಿನ ಸಂಪೂರ್ಣ ಹಕ್ಕನ್ನು ಮಹಿಳೆಯೇ ಪಡೆಯಬೇಕಾಗಿದೆ. ಇದೊಂದು ಜಾಗತಿಕ ಸತ್ಯ. ಪುರುಷ ದಬ್ಬಾಳಿಕೆಯ ಅತಿರೇಕವೆನಿಸಿದ ಅತ್ಯಾಚಾರವು ಮಹಿಳೆಯರನ್ನು ಯಂತ್ರಗಳಂತೆ ನಿರಂತರವಾಗಿ ಗರ್ಭಧರಿಸುವ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ.

ಎರಡನೆಯದಾಗಿ, ಆರ್ಥಿಕ ಅನಿವಾರ್ಯತೆ ಅಲ್ಲದೆ ಮುಖ್ಯವಾಗಿ ಜಗತ್ತಿನ ಆಗು ಹೋಗುಗಳನ್ನು ಅರಿಯುವ ಅವಶ್ಯಕತೆ ಇಂದು ಮಹಿಳೆಗಿದೆ. ವಿಶ್ವದ ಜನಸಂಖ್ಯೆಯ ಅರ್ಧಭಾಗದಷ್ಟಿರುವ ಮಹಿಳೆಯರು ಜಗತ್ತಿನ ಆಗು ಹೋಗುಗಳನ್ನು ಅರಿಯುವುದಲ್ಲದೇ ಸಕ್ರಿಯವಾಗಿ ಪಾಲುಗೊಳ್ಳುವ ಅವಶ್ಯಕತೆ ಇದೆ. ಆದುದರಿಂದ ಹೆಣ್ಣು, ಗರ್ಭಧರಿಸುವುದರ ಬಗ್ಗೆ ಯೋಚಿಸಲೇಬೇಕಾಗುವುದು. ಆಕೆಗೆ ಯಾವ ಸಮಯ ಸೂಕ್ತ ಎಂಬುದನ್ನು ಆಕೆಯೇ ನಿರ್ಧರಿಸಬೇಕು. ಅದಕ್ಕಾಗಿ ಇಂದು ನಾವೆಲ್ಲರೂ ಕಾಳಜಿ ವಹಿಸಬೇಕಾಗಿದೆ, ನಿರ್ಧರಿಸುವ ಅವಶ್ಯಕತೆ ಇದೆ.

ಇಂತಹ ಪ್ರಯತ್ನಗಳು ಪ್ರಸವ ವೇದನೆಯಷ್ಟೇ ತ್ರಾಸದಾಯಕ ಕ್ರಿಯೆ ಎಂಬುದು ನಮ್ಮ ನಿಮ್ಮೆಲ್ಲರ ಅನುಭವವಾದರೂ, ಪರಿಸ್ಥಿತಿಯ ಅನಿವಾರ್ಯತೆ, ಅವಶ್ಯಕತೆಯನ್ನು ಅರಿತು ಮುನ್ನುಗ್ಗಬೇಕಾಗಿದೆ. ಹಾಗಾದಾಗ ಮಾತ್ರ ಇಂತಹ ದಿನಗಳು ಅರ್ಥಪೂರ್ಣವಾಗುವುದು. ನಮ್ಮ ನಿಮ್ಮೆಲ್ಲರ ಮೂಕ ನೋವಿಗೆ, ಮೌನ ವಿರೋಧಕ್ಕೆ ಮಾತು ಜೋಡಿಸಬೇಕು. ಸ್ವವ್ಯಕ್ತಿತ್ವ, ಸ್ವವಿಕಾಸಕ್ಕೆ ನಮ್ಮ ದೇಹದ ಮೇಲಿನ ಹಕ್ಕು ನಾಂದಿಯಾಗಬೇಕು.

ಸವಿತ, ಸರಸ್ವತಿ.

–ಮಹಿಳೆ ಮತ್ತು ಆರೋಗ್ಯ
ಅಧ್ಯಯನ ವೇದಿಕೆ, ಬೆಂಗಳೂರು.

ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮೊದಲಬಾರಿಗೆ ಬರೆಯಲು ಯತ್ನಿಸುವ ಲೇಖಕಿ-ಲೇಖಕರಿಗಾಗಿ "ಮೌನ ಮಾತಾದಾಗ" ಅಂಕಣವಿದೆ. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನ ವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗೂ ಅನುಭವಗಳನ್ನು ಪುಟ್ಟ ಲೇಖನದ ರೂಪದಲ್ಲಿ ಬರೆದು ಕಳಿಸಿ ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗುವುದು.

–ಸಂ. ಮಂಡಳಿ

ಯಾರ ಕರುಣೆಯೂ ಬೇಕಾಗಿಲ್ಲ........

ಬಸ್ಸಿಗಾಗಿ ಕಾದುಕಾದು ಸಾಕಾಗುತ್ತಿತ್ತು. ಆಫೀಸಿನಿಂದ ಮನೆಗೆ ಹೋಗುವ ಸಮಯ. ಹೊಟ್ಟೆ ಚುರುಗುಡುತ್ತಿತ್ತು. ಬಸ್ಸಿನ ನಿರೀಕ್ಷೆಯಲ್ಲೇ ನಿಂತಿದ್ದೆ ಆಗ ಒಬ್ಬ ಮಹಿಳೆ ನನ್ನಲ್ಲಿಗೆ ಬಂದು Excuse me please time ಎಷ್ಟಾಯ್ತು ಹೇಳುತ್ತೀರಾ ? ಎಂದು ಕೇಳಿದಳು ಅವಳ ಮುಖವನ್ನು ನೋಡುವಷ್ಟು ತಾಳ್ಮೆ ನನ್ನಲ್ಲಿರಲಿಲ್ಲ ಹಾಗೆಯೇ 5–50 ಎಂದು ಹೇಳಿದೆ. ನೋಡ್ರಿ ನಾನು ವಿಶ್ವೇಶ್ವರ ನಗರಕ್ಕೆ ಹೋಗಬೇಕಾಗಿದೆ ಎಷ್ಟು ಹೊತ್ತಿಗೆ ಬಸ್ಸು ಬರುತ್ತದ್ರಿ ಎಂದು ಕೇಳಿದಾಗ ನಾನವಳ ಮುಖನೋಡಿದೆ. ಶಾಂತಮುಖ, ಬಡಕಲು ಶರೀರ, 33–35ರ ವಯಸ್ಸಿರಬಹುದು, ಆತ್ಮೀಯತೆ ಸೂಸುವ ಕಣ್ಣುಗಳು. ಮಾತನಾಡಿಸಬೇಕೆನಿಸಿತು. ಈಗ ಬರಬಹುದು, ನಾನು ಸಹ ಅಲ್ಲಿಗೇ ಹೋಗಬೇಕು ಎಂದೆ. ಹಾಗೇ ಒಬ್ಬರಿಗೊಬ್ಬರು ಔಪಚಾರಿಕವಾಗಿ ಪ್ರಾರಂಭಿಸಿದೆವು. ಅಂದು ಬಸ್ಸು ತಡವಾಗಿ ಬಂದಿದ್ದರಿಂದ ಸ್ವಲ್ಪ ಹೆಚ್ಚು ಮಾತನಾಡಲು ಅವಕಾಶವಾಯಿತು. ಅವಳು ತಾನು ಮತ್ತು ತನ್ನ ಮಗ ಇಬ್ಬರೇ ಇರುವುದಾಗಿಯೂ ತಾನು Tutions ತೆಗೆದುಕೊಳ್ಳುವುದಾಗಿಯೂ ತಿಳಿಸಿದಳು. ಸರಳವಾದ ಸ್ನೇಹಪೂರ್ಣ ಮಾತುಗಳಿಂದ ಮೀರ ಬಹಳ ಬೇಗ ಹತ್ತಿರವಾಗಹತ್ತಿದ್ದರು. ಅಷ್ಟರಲ್ಲಿ ಬಸ್ಸು ಬಂದಿತು. ಒಟ್ಟಿಗೇ ಕುಳಿತುಕೊಳ್ಳಲು ಸೀಟು ಕೂಡ ಸಿಕ್ಕಿತು ಹಾಗೆಯೇ ಮಾತನಾಡುತ್ತ ಅವಳ ಗಂಡನ ವಿಚಾರವಾಗಿ ಕೇಳಿದಾಗ ಸ್ವಲ್ಪ ಗಂಭೀರಳಾದಳು. ಅದೆಲ್ಲ ದೊಡ್ಡ ಕತೆ, ಹೇಳಿ ಪ್ರಯೋಜನವಿಲ್ಲ ಎಂದು ಒಂದು ತರಹವಾಗಿ ನಕ್ಕಳು. ಆ ನಗುವಿನ ಹಿಂದೆ ನೋವಿನ ಛಾಯೆ ಇತ್ತು. ನಾನು ಖಾಸಗಿ ಕಂಪನಿಯೊಂದರಲ್ಲಿ ಕೆಲಸಮಾಡುವುದಾಗಿ ತಿಳಿಸಿದೆ: ದಯವಿಟ್ಟು ನನಗೂ ಅಂತಹದೊಂದು ಕೆಲಸ ಕೊಡಿಸಿದರೆ ತುಂಬಾ ಉಪಕಾರ ಮಾಡಿದಂತಾಗುತ್ತದೆಯೆಂದೂ, ತನಗೆ ಕೆಲಸದ ಅವಶ್ಯಕತೆ ತುಂಬಾ ಇದೆಯೆಂದೂ ತಿಳಿಸಿದಳು. ನಾನು ಪ್ರಯತ್ನಿಸುತ್ತೇನೆ ಎಂದೆ. ಅಷ್ಟರಲ್ಲಿ ಅವಳ Stop ಬಂದಿತು. ಖಂಡಿತವಾಗಿ ಕೆಲಸದ ವಿಷಯವಾಗಿ ತಿಳಿಸಬೇಕು ಎನ್ನುತ್ತ ನನ್ನ ಕೈಯನ್ನು ಹಿಡಿದು ಹೇಳಿ ಇಳಿದುಹೋದರು. ಆ ಸ್ಪರ್ಶದಲ್ಲಿ ಅವಳ ಅವಶ್ಯಕತೆಯ ಸ್ಪಷ್ಟಸೂಚನೆ ಇತ್ತು. ಅವಳ ನೊಂದ ಮುಖ ನನ್ನನ್ನು ಕಾಡುತ್ತಲೇ ಇತ್ತು.

ಕೆಲ ದಿನಗಳಲ್ಲಿ ನಮ್ಮ ಕಂಪನಿಯಲ್ಲೇ ಆಕೆಗೆ ಕೆಲಸ ಸಿಕ್ಕಿತು. ಅವಳಿಗಾದ ಸಂತೋಷ ಅಷ್ಟಿಷ್ಟಲ್ಲ ನನ್ನ ಸಹೋದ್ಯೋಗಿಯಾದಳು ಮೀರಾ. ಅವಳ ನನ ಒಡನಾಟ ಹೆಚ್ಚಿದಂತೆ ಆತ್ಮೀಯತೆಯೂ ಹೆಚ್ಚಾಗಿತ್ತು. ಒಂದು ದಿನ ತಾನಾಗಿಯೇ ತನ್ನ ವಿಷಯವಾಗಿ ಹೇಳುತ್ತೇನೆಂದಾಗ ಸಂಜೆ ಇಬ್ಬರೂ ನಡೆಯುತ್ತಾ ಹೊರಟೆವು.

ಮೀರ ಆಂಧ್ರಪ್ರದೇಶದ ಸಂಪ್ರದಾಯಕ ಕುಟುಂಬದಲ್ಲಿ ಜನಿಸಿದ ಹಿರಿಯ ಮಗಳು. ಪದವೀಧರೆ. ಸರಳ ಹೃದಯದ ಮೀರ ಕುಟುಂಬದಲ್ಲೇ ಎಲ್ಲರಿಗೂ ಮೆಚ್ಚಿನವಳು. ಅವಳ ಚಿಕ್ಕಮ್ಮನ ಆಸೆಯಂತೆ ಮೀರಳನ್ನು ಅವಳ ಮಾವನಿಗೇ ವರದಕ್ಷಣೆ ವರೋಪಚಾರ ಸಹಿತ

ಷಾರೆ ಎರೆದುಕೊಳ್ಳಲಾಯಿತ್ತು. ಅವನೂ ಒಳ್ಳೇ ಕೆಲಸದಲ್ಲಿದ್ದನು. ಮಗಳು ಸುಖವಾಗಿರುತ್ತಾಳೆಂದೇ ಎಲ್ಲರ ನಂಬಿಕೆ. ನೂರಾರು ಕನಸುಗಳನ್ನೂ ಹೊತ್ತು ಮೀರ ಗಂಡನ ಮನೆಗೆ ಹೋದಳು, ಒಂದುವಾರ ಎಲ್ಲಾ ಚೆನ್ನಾಗೇ ನಡೆಯಿತು. ಒಂದು ದಿನ ಇದ್ದಕ್ಕಿದ್ದ ಹಾಗೆ ಅವಳಷ್ಟೇ ವಯಸ್ಸಿನ ಹೆಣ್ಣೊಬ್ಬಳು ಒಂದು ಮಗುವಿನೊಂದಿಗೆ ಬಂದು "ನಾನು ನಿಮ್ಮ ಮನೆಯವರ ಮೊದಲನೇ ಹೆಂಡತಿ. ನನಗೆ ತಿಳಿಯದ ಹಾಗೆ ಅವರು ನಿಮ್ಮನ್ನು ಮದುವೆಯಾಗಿ ನನಗೆ ಮೋಸ ಮಾಡುತ್ತಿದ್ದಾರೆ. ನಾನು ಅನಾಥೆ ಎಲ್ಲಿ ಹೋಗಲಿ. ನಾನೂ ಇಲ್ಲಿಯೇ ಇರುತ್ತೇನೆ" ಎಂದು ಗೋಗರೆಯಲು ಪ್ರಾರಂಭಿಸಿದಾಗ ಮೀರಳಿಗೆ ಸಿಡಿಲೆರಗಿದಂತಾಯ್ತು. ಎಲ್ಲವನ್ನೂ ವಿಚಾರಿಸಿದಾಗ ನಿಜ ಎಂದು ಸಾಬೀತಾಯಿತು. ಮೀರಳ ಅತ್ತೆ ಮಾವ ಗಂಡ ಆ ಹೆಣ್ಣನ್ನು ನಿರಾಕರಿಸಲು ಸಿದ್ಧರಿದ್ದರು. ಆದರೆ ಮೀರ ಒಪ್ಪಲಿಲ್ಲ. ತನಗೆ ಎಲ್ಲ ಸೇರಿ ಮೋಸ ಮಾಡಿದಿರೆಂದು ಗೋಳಿಟ್ಟಳು. ಒಂದು ಹೆಣ್ಣನ್ನು ನಡುನೀರಿನಲ್ಲಿ ಕೈಬಿಟ್ಟಷ್ಟು ತನ್ನ ಗಂಡನ ಹೇಡಿತನವನ್ನು ನಿಂದಿಸಿದಳು. ಕೊನೆಗೆ ಮೀರ ಅನಾಥೆಯಾದ ಆ ಹೆಂಗಸೇ ಈ ಮನೆಯಲ್ಲಿರಲಿ ಅವಳಿಗೆ, ಅನ್ಯಾಯವಾಗುವುದು ಬೇಡ, ತಾನು ತನ್ನ ಬದುಕನ್ನು ನೋಡಿಕೊಳ್ಳುತ್ತೇನೆ ಎಂದು ನಿರ್ಧರಿಸಿದಳು. ಅತ್ತೆಮಾವ ಏನು ಹೇಳಿದರೂ ತನ್ನ ಹಟವನ್ನು ಬಿಡಲಿಲ್ಲ. ಸ್ನೇಹವನ್ನು ಹಂಚಬಹುದು ರೂಪ, ಆದರೆ ಪ್ರೀತಿಯನ್ನು ಹಂಚಲು ಸಾಧ್ಯವಿಲ್ಲ ಎನ್ನುತ್ತಾಳೆ ಮೀರ ಅಲ್ಲಿಗೆ ಮುಗಿಯಿತು ಮೀರಳ ದಾಂಪತ್ಯ ಜೀವನ ನುಚ್ಚು ನೂರಾದವು ಅವಳ ಹುಚ್ಚು ಕನಸುಗಳು. ತವರಿಗೆ ಬಂದಳು ಮೀರ ಒಂದು ತಿಂಗಳು ಕಳೆಯಿತು, ಮೀರ ಗರ್ಭಿಣಿಯಾಗಿದ್ದಳು. ಅಕ್ಕಪಕ್ಕದವರ ಚುಚ್ಚುಮಾತುಗಳು ಪ್ರಾರಂಭವಾದವು. ತಂದೆ ತಾಯಿಯರ ಮನಸ್ಸು ನೋಯಿಸಬಾರದೆಂದು ಮೀರ ಕೆಲವು ದಿನ ಬಳ್ಳಾರಿಯ ಚಿಕ್ಕಪ್ಪನ ಮನೆಯಲ್ಲಿ ಕಳೆದಳು. ಗಂಡು ಮಗುವಾಯಿತು. ನಂತರ ಮುಂಡಗೋಡಿನಲ್ಲಿ ಕೆಲವು ದಿನ ಉಪಾಧ್ಯಾಯಿನಿಯಾಗಿದ್ದು ಈಗ ಹುಬ್ಬಳ್ಳಿಗೆ ಬಂದಿದ್ದಾಳೆ. ಮಗನೇ ಅವಳ ಬಾಳಿನ ಗುರಿ.

ಈಗ ಮೀರಳಿಗೆ ಬರುವ ಆದಾಯ ರೂ. 450/– ಸರಕಾರಿ ಕೆಲಸ ಸಿಗುವ ಸಂಭವವಿಲ್ಲ. ತನ್ನ ಮಗನಿಗಾಗಿ ಮೀರ ದಿನವಿಡೀ ಜೀವ ಸವೆಸುತ್ತಿದ್ದಾಳೆ. ತನ್ನೆಲ್ಲ ಆಸೆಗಳನ್ನು ಬತ್ತಿಸಿಕೊಂಡಿದ್ದಾಳೆ. ಅವಳನ್ನು ನೋಡಿದಾಗ ಲೆಲ್ಲ ಕರಳು ಕಿವಿಚಿದಂತಾಗುತ್ತದೆ.

ತನ್ನ ಯಾವುದೇ ತಪ್ಪಿಲ್ಲದಿದ್ದರೂ ಪ್ರಕೃತಿ ಸಹಜ ಆಸೆಗಳಿಂದ ದೂರವಾಗಿ ಪ್ರೀತಿಯಿಂದ ವಂಚಿತಳಾಗಿ ಮಗನಿಗಾಗಿ ಬದುಕುತ್ತಿರುವ "ಮೀರ ನನಗೆ ಯಾರ ಕರುಣೆಯೂ ಬೇಕಾಗಿಲ್ಲ ರೂಪ" ಎನ್ನುತ್ತಾಳೆ. ಆಧ್ಯಾತ್ಮದ ಬಗ್ಗೆ ಹೆಚ್ಚು ಒಲವು ಬೆಳೆಸಿಕೊಳ್ಳುತ್ತಿರುವ ಮೀರ ಅದರಲ್ಲಿಯೇ ನಾನು ಶಾಂತಿ ಸುಖ ಕಾಣುತ್ತೇನೆ ಎಂದು ದೃಢವಾಗಿ ಹೇಳುತ್ತಾಳೆ.

ಮೀರ ಬಂದ ನಂತರ ಅವಳ ಗಂಡ ಮೊದಲಹೆಂಡತಿಯೊಂದಿಗೆ ಸುಖವಾಗಿದ್ದಾನೆ. ಮೀರಳ ಧೈರ್ಯಕ್ಕೆ ಎದೆಯುಬ್ಬಿದರೆ ಅವನ ಹೇಡಿತನಕ್ಕೆ ಹೇಸಿಗೆಯಾಗುತ್ತದೆ. ಈ ದಬ್ಬಾಳಿಕೆಗೆ ಕೊನೆಯೇ ಇಲ್ಲವೆ ? ಈ ರೀತಿ ಎಲ್ಲ ಸ್ತ್ರೀಯರು ಪುರುಷರಿಂದ ದೂರವಿದ್ದರೆ ಶೋಷಣೆಗೆ ಕೊನೆಯಾಗುತ್ತದೆಯೇ ?

ಸ್ವರೂಪ ಕೆ. ಪಿ.

ಪ್ರಶ್ನೆ

ಈ ಭೂಮಿಯಿಲಿ ಜನಿಸಿದ
ನಿಮಗುಂಟು ಬಾಯಿ, ಹೃದಯ ನಾಲಿಗೆ
ನಮಗೆ ? ಇಲ್ಲ ಅನ್ನುವಿರಾ !

ಬಾಯಿ ತುಂಬಾ ಹೊಗಳಿ
ನಾಲಿಗೆ ಪೂರ್ಣ ತೆಗಳಿ
ಹೃದಯಗಳಲಿ ವಿಷ ತಳ್ಳಿ
ಮರೆಯಲಿ ಕುಳಿತವರು ನೀವು

ಕೀಲುಗೊಂಬೆಗಳಾಗಿ
ನಿಮ್ಮಲಿ ದುಡಿಯುತ್ತಲೆ
ದಿನವೆಣಿಸುವ ನಮಗೆಂದು
ಬಿಡುಗಡೆ ಸೆರೆಮನೆಯಿಂದ

ಅತ್ತ ಸಾಯಲು ಬಿಡದೆ
ಇತ್ತ ಜೀವಿಸ ಕೊಡದೆ
ರಕ್ತಹೀರುವ ನಿಮಗೆ
"ಮಾನವೀಯತೆಯು ಅರಿವಿದೆಯಾ" ?

—**ಕಾವ್ಯಜೀವಿ**

ಪುಸ್ತಕ ಪರಿಚಯ

ಕಂಬಿಗಳ ಹಿಂದೆ ಕಂಬನಿ

-ಎಚ್. ಪಿ. ಫಿಲೋಮಿನಾ

ಹಸಿರು ಚಿಗುರದ, ಹೂವು ಅರಳದ, ಕೋಗಿಲೆ ಕೂಗದ ಗೋಡೆಯ ಮಧ್ಯ ಅಡಗಿರುವ ಹಲವು ಹತ್ತು ನೋವಿನ ಧ್ವನಿಗಳ, ಮೂಕ ರೋಧನಗಳ ಸಂಗ್ರಹವೇ "ಕಂಬಿಗಳ ಹಿಂದೆ ಕಂಬನಿ" ಸಂಕಲನವಾಗಿ ಹೊರ ಬಂದಿದೆ ಎನ್ನುತ್ತಾರೆ ಫಿಲೋಮಿನಾ. ಇತ್ತ ಬಿಡುಗಡೆಯು ಆಗದೆ, ಅತ್ತ ಬದುಕಲೂ ಚೈತನ್ಯವಿಲ್ಲದ ಹೆತ್ತ ಕಂದಮ್ಮಗಳನ್ನೂ ಜೈಲು ಜೀವನಕ್ಕೊಳ ಪಡಿಸಿದ ಸಂಕಟವನ್ನೂ ಅನುಭವಿಸುತ್ತ ದಿನ ದೂಡುತ್ತಿರುವ ಅನೇಕ ಅಭಾಗಿನಿಯರ ಬದುಕಿನ ಎಳೆಗಳನ್ನೂ ಅಪರಾಧ ಎಸಗಲು ಕಾರಣವಾದ ಹೊಳವುಗಳನ್ನು ನಮ್ಮ ಮುಂದೆ ತೆರೆಯುತ್ತಾರೆ ಫಿಲೋಮಿನಾ ಈ ಸಂಕಲನದಲ್ಲಿ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೇ ಬೇರೆ ಕಾನೂನು, ಬೇರೆಯದೇ ದೃಷ್ಟಿ ಇರುವಾಗ, ಜೈಲುವಾಸ ಅನುಭವಿಸುವ ಹೆಣ್ಣಿನ ಮನಸ್ಥಿತಿ ಏನು ? ಆಕೆ ಬಿಡುಗಡೆ ಆದರೆ ಸಮಾಜ ಆಕೆಯನ್ನು ಹೇಗೆ ಕಂಡೀತು ಎನ್ನುವುದನ್ನು ಚರ್ಚಿಸುವ ಫಿಲೋಮಿನಾ ಮಹಿಳೆ ಅಪರಾಧಿಯಾಗಲು ಉಂಟಾದ ಪರಿಸ್ಥಿತಿಯ ಒತ್ತಡಗಳನ್ನು ತಮ್ಮ ಸಂದರ್ಶನಗಳ ಮೂಲಕ ಸ್ಪಷ್ಟಪಡಿಸುತ್ತಾರೆ.

ಹೆಚ್ಚಾಗಿ ಗ್ರಾಮೀಣ ಪರಿಸರಕ್ಕೆ ಸೇರಿದ ಮಹಿಳೆಯರೇ ಅಪರಾಧಿಗಳಾಗಿದ್ದು, ಅನಕ್ಷರತೆ, ಆರ್ಥಿಕ ಮುಗ್ಗಟ್ಟು, ಸಂಕುಚಿತ ಮನೋಭಾವ, ಪರಿಸರದ ಮಿತಿಯಿಂದಾಗಿ ಬೆಳೆದ ಸ್ವಾರ್ಥ ಮುಂತಾದವುಗಳು ಆಕೆಯನ್ನು ಅಪರಾಧಿ ಸ್ಥಾನಕ್ಕೆ ತಳ್ಳಲು ಕಾರಣಗಳಾಗಿವೆ. ಬದುಕಬೇಕೆಂಬ ಅನಿವಾರ್ಯತೆ ಮತ್ತು ಆರ್ಥಿಕ ಮುಗ್ಗಟ್ಟು ಜೊತೆಗೆ ಕೆಳಮಧ್ಯಮವರ್ಗ ಅತಿಯಾಗಿ ಅಂಜುವ ಸಂಪ್ರದಾಯದ ಕಟ್ಟುಪಾಡುಗಳು ಹೆಣ್ಣನ್ನು ಕೊಲೆಗೈಯ್ಯುವಂತಹ ಅಪರಾಧಕ್ಕೆ ಹೇಗೆ ತಳ್ಳುತ್ತವೆ ಎಂದು ವಿವರಿಸಿದ್ದಾರೆ ಫಿಲೋಮಿನಾ.

ವಿದೇಶಗಳಲ್ಲಿನ ಮಹಿಳೆಯರ ಅಪರಾಧಗಳ ಸ್ವರೂಪವೇ ಬೇರೆ (ಬಾಂಬ್ ಹಾಕುವುದು, ಭಯೋತ್ಪಾದನೆ ...) ಎನ್ನುವ ಫಿಲೊಮಿನಾ ಭಾರತದ ಶೇಕಡಾ 90 ಮಹಿಳಾ ಅಪರಾಧಗಳು ಉದ್ದೇಶ ಪೂರ್ವಕವಾದವುಗಳಲ್ಲ ಎನ್ನುತ್ತಾರೆ. ಅವರು ಸಂದರ್ಶಿಸಿದ ಬಂಧಿತ ಮಹಿಳೆಯರು ಕೆಳಮಧ್ಯಮವರ್ಗ ಮತ್ತು ಕೆಳವರ್ಗಕ್ಕೆ ಸೇರಿದವರಾಗಿದ್ದು ಆರ್ಥಿಕ ಮುಗ್ಗಟ್ಟಿನಿಂದಾಗಿ ಬೇಸತ್ತು ಮನೆ ಮಾಲಿಕನನ್ನು ಕೊಲ್ಲುವುದು, ಪತಿಯ ಚಿತ್ರಹಿಂಸೆ ತಾಳಲಾರದೆ ಮಕ್ಕಳೊಂದಿಗೆ ಆತ್ಮಹತ್ಯೆಗೆ ಪ್ರಯತ್ನಿಸಿರುವುದು, ದ್ವಿಪತ್ನಿತ್ವದ ಸಂಪ್ರದಯವನ್ನು ಒಪ್ಪಿಕೊಂಡು ನಂತರ ಹೆಣ್ಣಿನಿಂದ ಹೆಣ್ಣೇ ಶೋಷಣೆಗೆ ಒಳಗಾಗಿರುವುದು, ಕಳ್ಳ ಕೊಲೆಗಾರ ಪತಿಯ ತಪ್ಪನ್ನು ಹೊತ್ತು ಬಂಧನಕ್ಕೊಳಗಾಗಿರುವುದು, ಬದುಕುವ ಅನಿವಾರ್ಯತೆಯಿಂದಾಗಿ ಯಾವುದೋ ವಿಷಗಳಿಗೆಯಲ್ಲಿ ಅಡ್ಡದಾರಿ ತುಳಿದಿರುವುದನ್ನು ಕಾಣಬಹುದಾಗಿದೆ. ಯಾರೂ ಅಪರಾಧಿಗಳಾಗಿ ಜನಿಸಿರುವುದಿಲ್ಲ, ವ್ಯವಸ್ಥೆ ಅವರನ್ನು ಅಪರಾಧಿಗಳನ್ನಾಗಿ ಮಾಡುತ್ತದೆ ಎನ್ನುವುದನ್ನು ಫಿಲೋಮಿನಾ ತಮ್ಮ ಸಂದರ್ಶನಗಳ ಮೂಲಕ ಮನವರಿಕೆ ಮಾಡುತ್ತಾರೆ.

ಇದರ ಜೊತೆಗೆ ಮಹಿಳಾ ಅಪರಾಧಿಗಳನ್ನು ಹೇಗೆ ನೋಡಿಕೊಳ್ಳುತ್ತಾರೆ, ಹೇಗೆ ನೋಡಿಕೊಳ್ಳಬೇಕು ಎಂದು ಚರ್ಚಿಸುವ ಫಿಲೋಮಿನಾ, ಅವರನ್ನು ಪುರುಷರ ಜೊತೆ ಜೈಲುಗಳಲ್ಲಿಡುವುದನ್ನು ವಿರೋಧಿಸುತ್ತ ಮಾದರಿ ಜೈಲುಗಳನ್ನು ನಿರ್ಮಿಸಿ ಮಹಿಳಾ ಮೇಲ್ವಿಚಾರಕರಿಗೆ ಬಣ್ಣದ ಸಮವಸ್ತ್ರಗಳನ್ನು ಒದಗಿಸಬೇಕೆನ್ನುತ್ತಾರೆ. ಅಲ್ಲದೆ ಬಿಡುಗಡೆಯ ನಂತರ ಅವರ ಭವಿಷ್ಯ ರೂಪಿಸುವ ಜವಾಬ್ದಾರಿ ಹೊತ್ತು ಅವರಿಗೆ ಉದ್ಯೋಗದ ವ್ಯವಸ್ಥೆ ಮಾಡಬೇಕೆನ್ನುತ್ತಾರೆ.

ಪುರುಷನ ಎಲ್ಲ ಭ್ರಷ್ಟತನ, ವ್ಯಭಿಚಾರಗಳ ಸಹಿಸುವ ಸಮಾಜ ಮಹಿಳೆಯ ಅಪರಾಧಗಳನ್ನು ಬಹಳ ಕೆಟ್ಟ ದೃಷ್ಟಿಯಿಂದ ನೋಡುತ್ತದೆ. ಆಕೆಗೆ ಮುಂದಿನ ಜೀವನವೇ ಅಸಾಧ್ಯ ಎನ್ನುವಂತೆ ವರ್ತಿಸುತ್ತದೆ. ಇದು ಬದಲಾಗಿ ಮಹಿಳೆಕೂಡ ಪುರುಷನಂತೆ ಕಾಮ, ಕ್ರೋಧ ಮದ ಮತ್ಸರಗಳನ್ನೊಳಗೊಂಡ ಮನುಷ್ಯಳು ಎಂಬುದನ್ನು ತಿಳಿದು ಆಕೆಗೆ ಅನುಕಂಪ, ಬದುಕಲು ಅವಕಾಶ ದೊರೆಯಬೇಕೆಂಬುದನ್ನು ಎತ್ತಿ ಹಿಡಿಯುತ್ತಾರೆ ಫಿಲೋಮಿನಾ.

ಮಹಿಳೆಯ ಶೋಷಣೆಯ ಹಲವು ಮುಖಗಳನ್ನು ತೆರೆದು ಆಕೆ ವಿರೋಧದ ಧ್ವನಿ, ಎತ್ತಿ ತನ್ನ ಹಕ್ಕಿಗಾಗಿ, ಹೋರಾಡುತ್ತಿರುವ ಈ ಸಂಕ್ರಮಣ ಕಾಲದಲ್ಲಿ ಮಹಿಳಾ ಅಪರಾಧಿಗಳ ನೋವಿನ ಕಥೆಯನ್ನು ಹೇಳುವ ಈ ಸಂಕಲನ, ಒಂದು ಉತ್ತಮ ಪ್ರಯತ್ನ.

ಕೆ. ಪಿ ಶೈಲಜಾ

ಸ್ಕಾಟಿಷ್ ಕಲಾವಿದೆಯೊಂದಿಗೆ ಸಂವಾದ



ಹೆಣ್ಣಿನ ತುಳಿತವೆಂಬುದು ಎಲ್ಲಾ ಸಂಸ್ಕೃತಿಗಳಲ್ಲೂ ಪ್ರಾರಂಭಿಕ ಹಂತಗಳಿಂದಲೂ ಸುವ್ಯವಸ್ಥಿತವಾಗಿ ರಚಿತಗೊಳ್ಳುತ್ತಲೇ ಬಂದಿರುವಂತಹದ್ದು. ಆಧುನೀಕರಣದ ಪ್ರತಿಕ್ರಿಯೆಯಲ್ಲಿ ಶುದ್ಧ ಸಂಪ್ರದಾಯವಾದದ ಕೊಂಡಿಗಳು ಕಳಚಿಕೊಳುತ್ತಾ ಬಂದಹಾಗೆ ಹೆಣ್ಣಿಗೆ ಹೆಚ್ಚೆಚ್ಚು ಮುಕ್ತತೆ ಮತ್ತು ಸ್ವಾತಂತ್ರಗಳು ಲಭಿಸುತ್ತಿರುವುದು ಸ್ಪಷ್ಟ. ಇಷ್ಟರಮಟ್ಟಿಗೆ ಆಧುನಿಕತೆ ಹೆಣ್ಣಿಗೊಂದು ವರಪ್ರಸಾದದಂತೆ ಅಲ್ಲದೆ ಇಂದಿನ ಆಧುನಿಕ ಹೆಣ್ಣಿನ ಸ್ಥಿತಿಗತಿಯ ಹಿನ್ನೆಲೆಯಲ್ಲಿ ದಶಕಗಳನೇಕರ ಉಗ್ರ ಹೋರಾಟದ ಒಂದು ಪರಂಪರೆಯೇ ಇರುವುದನ್ನು ಗಮನಿಸಿಕೊಳ್ಳಬಹುದು. ಸ್ತ್ರೀ ವಿಮೋಚನೆಯೆನ್ನುವುದು ಒಂದು ಸಾಮೂಹಿಕ ಚಳುವಳಿಯಾಗಿ ಕಂಡುಬಂದರೂ, ಅದು ಪ್ರತಿ ಹೆಣ್ಣಿಗೂ ಅತ್ಯಂತ ವೈಯಕ್ತಿಕ ಹಂತಗಳಲ್ಲಿ ಅರ್ಥೈಸಲ್ಪಡುವುದು ಇಂದಿನ ಒಟ್ಟು ಸಂದರ್ಭದ ಸತ್ಯ. ತನಗೊಂದು ನಿರ್ದಿಷ್ಟ ಐಡೆಂಟಿಟಿಯನ್ನು ಕಂಡುಕೊಳ್ಳುವುದು ಇಂದಿನ ಎಷ್ಟೋ ಸ್ವತಂತ್ರ ಮನೋಭಾವದ ಹೆಣ್ಣುಗಳಿಗೆ ಮುಖ್ಯವಾಗಿದೆ.

ಆಧುನಿಕತೆ ಹೆಣ್ಣಿಗೆ ನೀಡಿದ ತನ್ನೆಲ್ಲಾ ಕೊಡುಗೆಗಳೊಟ್ಟಿಗೆ ಅದು ತಂದೊಡ್ಡುವ ತಲ್ಲಣಗಳು ಅಪಾರ. ತಾಂತ್ರಿಕತೆ ಕೇಂದ್ರಿತ ಆಧುನಿಕ ಸಮಾಜದಲ್ಲಿ ಅತ್ಯಂತ ಸಂವೇದನಾಶೀಲ ಹೆಣ್ಣಿಗೆ ತಾನೆಲ್ಲೋ ಕಳೆದುಹೋಗುತ್ತಿರುವ ಅನುಭವ ದಟ್ಟವಾಗಿ ಕಾಡುತ್ತದೆ. ತನ್ನೊಳಗಿನ ಅತ್ಯಂತ ಸೂಕ್ಷ್ಮ ಸಂವೇದನೆಗೆ ದೊಡ್ಡ ಅರ್ಥ ಕೊಡುವ ಸಂವೇದನಾಶೀಲ ಹೆಣ್ಣಿನ ತೀವ್ರ ಆತಂಕ ಮತ್ತು ನವನಾಗರಿಕತೆಯ ಒಟ್ಟು ಸಂದರ್ಭದಲ್ಲಿ ಅದನ್ನು ತನ್ನೆಲ್ಲಾ ಸಾಧ್ಯತೆಗಳಿಂದ ನಾಶಮಾಡುವ ಆಧುನಿಕತೆಯ ವಿಕೃತಭಾಗ. ಇವೆರಡರನಡುವಿನ ಸಂಘರ್ಷಣೆಯಲ್ಲಿ ಉಂಟಾಗುವ ತಲ್ಲಣಗಳು ಉತ್ಕಟವಾದವುಗಳು. ಹೀಗೆ ತಲ್ಲಣಗೊಂಡ ಸ್ಥಿತಿಯಲ್ಲಿ ತನ್ನ ಐಡೆಂಟಿಟಿಗಾಗಿ ಸೃಜನಶೀಲೆಯೊಬ್ಬಳು ನಡೆಸುವ ಹುಡುಕಾಟ, ಕ್ಯಾಥೋಲೈನ್ಸ್‌ರ ಒಟ್ಟು ವ್ಯಕ್ತಿತ್ವದ ಕಲಾಬದುಕಿನ ಹಿಂದೆ ಇರುವಂತಹ ಹೋರಾಟ ಎಂಬುದು ಈ ಸಂದರ್ಭಕ್ಕೆ ಒಪ್ಪುವ ಮಾತು.

ಒಂದು ಗಟ್ಟಿ ವ್ಯಕ್ತಿತ್ವವನ್ನು ರೂಪಿಸುವಂತಹ ಶಕ್ತಿಗಳು ಎಲ್ಲೆಲ್ಲೋ ಅಡಗಿಕೊಂಡಿರುತ್ತವೆ. ಈ ಸ್ಕಾಟಿಷ್ ಕಲಾವಿದೆಗೆ ಐಡೆಂಟಿಟಿಯನ್ನು ಕೊಡುವಶಕ್ತಿ ಅಡಗಿದ್ದು ರಾಮಾಯಣದ ಸೀತೆಯಲ್ಲಿ. ಹೀಗಾಗಿ ಸೀತೆ

ಗಾಯಿತ್ರಿ ವಿ.

ಯನ್ನು ದೃಷ್ಟಿಯಲ್ಲಿರಿಸಿ 'ಸೀತಾ ಆ್ಯಸ್ ದ ವುಮನ್ ಆರ್ಟಿಸ್ಟ್' ಎಂಬ ಶೀರ್ಷಿಕೆಯಲ್ಲಿ ೧೫ ಪೇಂಟಿಗ್‌ಗಳ ಒಂದು ಸರಣಿಯಲ್ಲಿ ಈಕೆ ರಾಮಾಯಣವನ್ನು ಪುನರ್ ವ್ಯಾಖ್ಯಾನಿಸಿದ್ದಾರೆ. ಮೂಲತಃ ವುಡ್‌ಕಟ್ಸ್‌ನಲ್ಲಿದ್ದು ನಂತರ ತೈಲ ಚಿತ್ರಗಳಾಗಿ ಮಾರ್ಪಡಿಸಿದ ಈ ಸರಣಿ ಸೀತೆ ಕಾಡನ್ನು ಪ್ರವೇಶಿಸುವಲ್ಲಿಂದ ವಾಲ್ಮೀಕಿ ಆಶ್ರಮದಲ್ಲಿ ಆಕೆ ಅವಳಿ ಮಕ್ಕಳಿಗೆ ಜನ್ಮಕೊಡುವವರೆಗೆ ರಾಮಾಯಣದ ಹಲವು ಮುಖ್ಯ ಘಟನೆಗಳನ್ನು ಒಳಗೊಂಡಿದೆ. "ನನ್ನನ್ನು ಪೂರ್ತಿಯಾಗಿ ಸೀತೆಯಲ್ಲಿ ತೊಡಗಿಸಿಕೊಂಡು ನನ್ನ ಕ್ರಿಶ್ಚಿಯನ್ ಹಿನ್ನೆಲೆಯೊಳಗೆ ನನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಮಾಡಿದ ಪ್ರಯತ್ನ ಇದು. ಇದರಲ್ಲಿ ರಾಮಾಯಣದ ಕಥೆ, ವೈಯಕ್ತಿಕ ಹುಡುಕಾಟ ಮತ್ತು ನನ್ನ ಪಾಶ್ಚಿಮಾತ್ಯ ಹಿನ್ನೆಲೆ, ಇವು ಮೂರು ಮೇಳವಿಸ್ಸಿಕೊಂಡ ಸ್ಥಿತಿ ಇದೆ" ಎನ್ನುವ ಈಕೆ ಕಂಡ ಸೀತೆ ಹೆಣ್ಣಿನೆಡೆಗಿನ ಸಂಪ್ರದಾಯಬದ್ಧ ತುಳಿತವನ್ನು ಧಿಕ್ಕರಿಸುವ ಸೃಜನಶೀಲೆ. ಸೀತೆ ಲಕ್ಷ್ಮಣನನ್ನು ತಿರಸ್ಕರಿಸುವ

ಮೂಲಕ ಪುರುಷರಿಂದ ಮಹಿಳೆಯರಿಗಿರುವ ಸಂಪ್ರದಾಯಬದ್ಧ ರಕ್ಷಣೆಯನ್ನು ದೂರತಳ್ಳುತ್ತಾಳೆ. ಕೊನೆಯವರೆಗೂ ರಾಮನಲ್ಲಿ ಆಕೆ ತೋರುವ ಪ್ರೀತಿ ತನ್ನನ್ನು ಸ್ವತಂತ್ರ, ಸೃಜನಶೀಲ ಹೆಣ್ಣಾಗಿಅರಿಯ ಬಲ್ಲವರೆಡೆಗಿನ ಪ್ರೀತಿಯನ್ನು ತೋರಿಸುತ್ತದೆ. ಸಂಪ್ರದಾಯಬದ್ಧತೆಯನ್ನು ಮುರಿಯುವುದರಿಂದ ತೀವ್ರ ಪ್ರಚೋದನೆಗಳು ಉಂಟಾಗುತ್ತವೆ. ಲಕ್ಷ್ಮಣನನ್ನು ತಿರಸ್ಕರಿಸಿದ ಫಲವಾಗಿ ಆಕೆಯ ಸಂವೇದನೆಗೆ ಸ್ಪಂದನವಿಲ್ಲದ ರಾವಣ ಆಕೆಯನ್ನು ಆಕ್ರಮಿಸುತ್ತಾನೆ. ಆಕೆಯೆಡೆಗಿನ ಅವನ ಆಸೆ ಪೂರಾ ದೈಹಿಕ ಮತ್ತು ಐಹಿಕವಾದದ್ದು. ಈ ರಾವಣ ಇಂದಿನ ತಾಂತ್ರಿಕತೆ ಕೇಂದ್ರಿತ ತನ್ನ ಲಾಭಕ್ಕಾಗಿ ಪ್ರಕೃತಿಯನು ಶೋಷಿಸುವ ಆಧುನಿಕ ಸಮಾಜವನ್ನು ಹೋಲುತ್ತಾನೆ. ನಮ್ಮ ಬದುಕಿನ ಅರ್ಥ ಪರಿಪೂರ್ಣತೆಯನ್ನು ಆಧುನಿಕ ಕನ್ಸ್ಯೂಮರ್ - ಸಮಾಜ ಕೊಂಡೊಯ್ಯುವಂತೆ ರಾವಣ ಸೀತೆಯನ್ನು ಕೊಂಡೊಯ್ಯುತ್ತಾನೆ. ಮುಂದೆ ಸೀತೆಯನ್ನು ಕಾಣದ ರಾಮ ವಿಪರೀತ ಕಂಗೆಟ್ಟು ಹೋಗುತ್ತಾನೆ. ಅವಳನ್ನು ಹುಡುಕುತ್ತಾ ಅಲೆಯುತ್ತಾನೆ. ಸಂಪ್ರದಾಯ ಬಿಟ್ಟಾಗ ಉಂಟಾಗುವ ಸ್ಥಿತಿ ಇದು ಎಂದು ನನಗನಿಸುತ್ತದೆ ಎನ್ನುತ್ತಾರೆ ಕ್ಯಾರೋಲೈನ್. ಅನೇಕ ಗಂಡಸರು ತಂದೆಯಂದಿರು, ಅಣ್ಣಂದರು, ಗಂಡಂದಿರು ತಮ್ಮ ಹೆಂಗಸರು ಸಂಪ್ರದಾಯವನ್ನು ಬಿಟ್ಟು ಹೋದಾಗ ಹೀಗೆ ಆತಂಕ ಪಡುತ್ತಾರೆ. ರಾಮನಂತೆ ತಲ್ಲಣಿಸಿ ಹೋಗಿ ಪರಿಸ್ಥಿತಿಯನ್ನು ಯಥಾವತ್ತಾಗಿಸುವ ಹುಡುಕಾಟದಲ್ಲಿ ಬೀಳುತ್ತಾರೆ. ಸಂಪ್ರದಾಯದ ಕಪಿಮುಷ್ಟಿಯಿಂದ ಬಿಡುಗಡೆ ಪಡೆದು ಕನ್ಸ್ಯೂಮರಿಸಂನ (ರಾವಣನ) ಮುಷ್ಟಿಗೆ ಮುಕ್ತಿ ಸಿಕ್ಕಿ ಲಂಕಾದ್ವೀಪದಲ್ಲಿ ಬಂಧನದಲ್ಲಿರುವ ಸೀತೆ ತೀವ್ರ ಹತಾಶೆಯಲ್ಲಿ ತನ್ನ ಜಡೆಗೆ ಕಟ್ಟಿದ ದಾರದಿಂದ ನೇಣುಹಾಕಿಕೊಳ್ಳಲು ತೀರ್ಮಾನಿಸುತ್ತಾಳೆ. ಆದರೆ ಹನುಮಂತನ ಬರುವಿಕೆಯಿಂದ ಆದು ತಪ್ಪುತ್ತದೆ ಮುಂದೆ ರಾಮನಿಂದ ಬಿಡಿಸಲ್ಪಟ್ಟ ಸೀತೆ ರಾಮನಿಂದ ಅಗ್ನಿಪರೀಕ್ಷೆಗೆ ಒಳಗಾಗುತ್ತಾಳೆ. ತಾನು ತುಂಬಾ ಪ್ರೀತಿಸುವ ಮತ್ತು ಬಂಧಮುಕ್ತಳಾಗಿಸಲು ಬಹಳ ಕಷ್ಟಪಟ್ಟ ತನ್ನ ಹೆಂಡತಿಗೆ ಅವನು ಹೀಗೆ ಮಾಡುವುದು ಅತಿಯಾಯಿತು ಅನಿಸಿದರೂ ಆಕೆಯನ್ನು ತಿರಸ್ಕರಿಸುವುದು ಅವನ ಇಚ್ಛೆಗೆ ಅನುಸಾರವಾಗಿಲ್ಲ. ಅವಳನ್ನು ತಿರಸ್ಕರಿಸುವಾಗ ಅವನು ಕಂಪಿಸುತ್ತಿರುತ್ತಾನೆ ಪ್ರಕೃತಿಯನ್ನು ನಂಬದಿರುವಂತೆ ಮಾನವ ನಿರ್ಮಿತ ತಾಂತ್ರಿಕತೆಯನ್ನು ನಂಬುವಂತೆ ಒತ್ತಾಯಿಸುವ ತಾಂತ್ರಿಕ ಸಮಾಜದ ಉದ್ದೇಶಕ್ಕೆ ದ್ಯೋತಕ ವಾಗುತ್ತದೆ ಇದು. ರಾಮ ಮತ್ತು ಸೀತೆ ಮರಳಿ ಸ್ವಸ್ಥಾನಕ್ಕೆ ನಡೆಯುವಲ್ಲಿ ಒಂದೇ ಘಟಕವಾಗಿ ರೂಪುಗೊಳ್ಳುತ್ತಾರೆ. ಅಂತಿಮವಾಗಿ ರಾಮ ಸೀತೆಯನ್ನು ಪ್ರೀತಿಸುವುದು ಅತ್ಯಂತ ಆಳ ಸಂಬಂಧದ ವಿರಹನೇ ಮದುವೆಯಿದ್ದ ಹಾಗೆ ಒಂದು ರೀತಿಯಲ್ಲಿ ವಿರೋಧಗಳ ಪುನರ್ಮಿಲನ.

ಅದು ಸೃಜನಶೀಲತೆಯೊಟ್ಟಿಗೆ ಮಾನವಕುಲದ ಪರಿಷ್ಕೃತ ಸಂಬಧದ ಸಂಕೇತವಾಗುತ್ತದೆ. ಉತ್ತರಕಾಂಡದಲ್ಲಿ ತನ್ನ ಶೀಲದ ಬಗ್ಗೆ ಎದ್ದ ಊಹಾಪೋಹದಿಂದ ಮತ್ತೆ ಪರಿತ್ಯಜಿಸಲ್ಪಟ್ಟ ಗರ್ಭಿಣಿ ಸೀತೆ ವಾಲ್ಮೀಕಿ ಆಶ್ರಮದಲ್ಲಿ ತನ್ನ ಪೂರ್ತಿ ಕಥೆ ಹೇಳುತ್ತಾಳೆ. ಚಿತ್ರದಲ್ಲಿ ಕಲಾಕಾರಳು ತಾನು ಅತ್ಯಂತ ಗಾಢವಾಗಿ ಸ್ಪಂದಿಸಿದ ರಾಮಾಯಣದ ಕಥೆಯ ಗರ್ಭಧರಿಸಿರುವುದರ ಸಂಕೇತವಾಗಿ/ಗರ್ಭಿಣಿಯನ್ನು ತೋರಿಸಲಾಗಿದೆ. ಅವಳಿಗಳ ಜನನ ಕಲಾಕಾರಳ ಕಲಾಕೃತಿಯ ಸಂಕೇತ. ಇವರಲ್ಲಿ ತನ್ನದೇ ಆದ ಜೀವಂತಿಕೆ ಇದ್ದು ಕಲಾಕಾರಳ ಅನುಭವವನ್ನು ಸ್ವತಂತ್ರವಾಗಿ ಜನರಿಗೆ ಹೇಳುತ್ತದೆ. ಇದು ನಿಜಾರ್ಥದಲ್ಲಿ ಕಲಾಕಾರಳ ಕೃತಿ. ಉಳಿದ ಪೇಂಟಿಂಗ್‌ಗಳು ಆಕೆಯ ಅಂತರಿಕ ಪ್ರಯಾಣದ ವಿವರಣೆಯಾಗಿದೆ. ತನ್ನ ಈ ಎಲ್ಲಾ ಬಗೆಯ ಚಿಂತನೆಗಳನ್ನು ೧೫ ಚಿತ್ರಗಳಲ್ಲಿ ಅಭಿವ್ಯಕ್ತಿಸುವ ಇವರ ವೈಖರಿ ವಿಸ್ಮಯಕಾರಿಯಾಗಿದೆ.

ಭಾರತೀಯ ಕಲೆಯಿಂದ ತೀವ್ರವಾಗಿ ಆಕರ್ಷಿತವಾದ ಈಕೆ ೧೯೭೬ ರಲ್ಲಿ ಲಂಡನ್ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಭಾರತೀಯ ದೇವಾಲಯ ವಾಸ್ತುಶಿಲ್ಪವನ್ನು ಕುರಿತ ಥೀಸಿಸ್ ಸಲ್ಲಿಸಿ ೧೯೭೭ ರಲ್ಲಿ ಅದನ್ನೆ ಕುರಿತ ಹೆಚ್ಚಿನ ಅಧ್ಯಯನಕ್ಕೆ ಭಾರತಕ್ಕೆ ಬಂದರು. ಕಲಾವಿದ ಜ್ಯೋತಿ ಸಾಹಿಯವರೊಡನೆ ೭೭ ರಿಂದ ೮೩ರ ವರೆಗೆ ಕೆಲಸ ಮಾಡಿ ಭಾರತೀಯ ಮೈಥಾಲಜಿ ಫಿಲಾಸಫಿ ಮತ್ತು ಕಲೆಯನ್ನು ಕುರಿತು ಅಧ್ಯಯನ ನಡೆಸಿದರು. ಬರಿ ಟೀಕಿಸುತ್ತಲೆ ಯಾವ ಪರಿಹಾರವನ್ನು ಹೇಳದ ಬಹುತೇಕ ಆಧುನಿಕ ಕಲೆ ಪಾಶ್ಚಿಮಾತ್ಯ ಕಾರ ಕಲೆ ಎನ್ನುವ ಅನುಭವದ ಈಕೆ ಪ್ರಾಚೀನ ಭಾರತೀಯ ಕಲೆಯಲ್ಲಿನ ಮಿತಿಗಳು ಮತ್ತು ಮಿಥಿಕಲ್ ಆದ ಸಂಕೇತಗಳು ನನಗೆ ಬಹಳ ಮುಖ್ಯವಾಗುತ್ತವೆ ಎನ್ನುತ್ತಾರೆ. ಸಂಕೇತಗಳಲ್ಲಿ ತೊಡಗಿಸಿಕೊಳ್ಳುವುದು ಈಕೆಗೊಂದು ರೋಮಾಂಚಕಾರಿ ಅನುಭವ. ಹೀಗಾಗಿ

ಸಿಲ್ವೀಪುರದಲ್ಲಿದ್ದ ಆರು ವರ್ಷಗಳಲ್ಲಿ ದುರ್ಗೆ, ರಂಗನಾಥ ಅಲ್ಲದೆ ೪೬ಅಡಿ ಎತ್ತರದ ಬೃಹತ್ ಹನುಮಂತನನ್ನು ಕಲ್ಲುಕೆತ್ತನೆಯಲ್ಲಿ ಮೂಡಿಸಿದ್ದಾರೆ. ೧೯೮೩ರಲ್ಲಿ ಸಂಸ್ಕೃತ ಕಲಿಯುವ ಮತ್ತು ವಿಶಿಷ್ಟಾದ್ವೈತದ ಆಳ ಅನುಭವದ ಸಲುವಾಗಿ ಮೇಲುಕೋಟೆಗೆ ಬಂದು ವಾಲ್ಮೀಕಿ ರಾಮಾಯಾಣವನ್ನು ಸಂಸ್ಕೃತದಲ್ಲೇ ಓದಿ ಅದನ್ನು ಪೇಂಟಿಗ್‌ಗಳಲ್ಲಿ ಪುನರ್‌ರೂಪಿಸಿದರು. ಮೇಲುಕೋಟೆಯ ಪುರಾತನ, ಸಾಂಪ್ರದಾಯಕ ಮನೆಯೊಂದನ್ನು ತನ್ನೆಲ್ಲಾ ಕಲಾ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡಿರುವ ಈ ಕಲಾವಿದೆಯನ್ನು ಮೇಲಾಕೋಟೆಯಲ್ಲಿ ಭೆಟ್ಟಿಯಾಗಿ, ಆಕೆಯ ಈ ಎಲ್ಲಾ ಹಿನ್ನೆಲೆಯ ಸಂಬಧದಲ್ಲಿ ನಡೆಸಿದ ಒಂದು ಸಂವಾದ.

ಪ್ರ : ದಕ್ಷಿಣ ಭಾರತದ ಮೂಲೆಯಲ್ಲಿರುವ ಮೇಲ್‌ಕೋಟೆ ಆಧುನಿಕ ಪಾಶ್ಚಾತ್ಯ ಮೌಲ್ಯಗಳಿಗೆ ತೀರಾ ಹೊರತಾದದ್ದು, ಭಿನ್ನವಾದದ್ದು. ಅತ್ಯಂತ ಮುಕ್ತ ಮತ್ತು ಆಧುನಿಕ ಸಮಾಜದಿಂದ ಬಂದ ಕೊಡುಗೆ ಇಂದಿನ ಸಮಕಾಲೀನ ಬದುಕಿಗೆ ಇಲ್ಲಿನ ವೈಷ್ಣವ ಧರ್ಮದ ಹೊಂದಾಣಿಕೆ ಇದೆ ಎನಿಸುತ್ತದೆಯೇ ? ಮುಖ್ಯವಾಗಿ ಮೇಲುಕೋಟೆಯ ಹೆಂಗಸರ ಸಂದರ್ಭಕ್ಕೆ ನಿಮ್ಮ ವೈಯಕ್ತಿಕ ಅನುಭವವೇನು ?

ಉತ್ತರ : ನಾನು ಮೇಲುಕೋಟೆಗೆ ಬಂದದ್ದು ಆಕಸ್ಮಿಕವೇ. ಇಲ್ಲಿ ಬಂದ ನಂತರ ನಾನು ಇಲ್ಲಿಯ ಬದುಕಿನಲ್ಲಿ ಪೂರ್ತಿ ಒಂದಾಗಿಲ್ಲ. ಹೀಗಾಗಿ ಮೇಲುಕೋಟೆಯ ಮಡಿ–ಮೈಲಿಗೆ ಎಂಬುದು ನನ್ನನ್ನೂ ಭಾವನಾತ್ಮಕವಾಗಿ ಘಾಸಿಗೊಳಿಸುವುದಿಲ್ಲ. ಇಲ್ಲಿನ ನನ್ನ ಸ್ಥಿತಿ ಹಿಂದೂ–ಕ್ರಿಶ್ಚಿಯನ್ ಎರಡೂ ಅಲ್ಲದ ಅವೆರಡರ ನಡುವಿನ ಸ್ಥಿತಿ. ಯಾವುದನ್ನೂ ನಾನು ಸಂಪೂರ್ಣ ಭಿನ್ನ ದೃಷ್ಟಿಯಿಂದ ನೋಡಬಹುದು. ಮುಖ್ಯವಾಗಿ ಹೇಳಬೇಂದರೆ ಮೇಲುಕೋಟೆಗೆ ಬಂದ ನಂತರ ನಾನು ನನ್ನಲ್ಲಿನ ಹೆಣ್ಣಿನ ಅರಿವನ್ನು ಒಪ್ಪಿಕೊಳ್ಳಲು ಸಾಧ್ಯವಾಯಿತು, ಹಾಗಾದ್ದರಿಂದಲೇ ನಾನು ಪೇಂಟ್ ಮಾಡಲು ಸಾಧ್ಯವಾದದ್ದು ಕೂಡ.

ಪ್ರ : ಅದು ಹೇಗೆ ವಿವರಿಸುತ್ತೀರಾ ?

ಉತ್ತರ : ಇಲ್ಲಿಗೆ ಬರುವ ಮೊದಲಿನವರೂ ಕಾಲವೂ ನಾನು ಅಹಿತವಾದುದರ ಅಗಲಿಕೆಯನ್ನು ತಪ್ಪಿಸಲು ಹೆಣ್ಣಿನಂತೆ ನಡೆದುಕೊಳ್ಳದಿರುವಂತಹ ಎಚ್ಚರಿಕೆ ವಹಿಸುತ್ತಿದ್ದೆ. ಹೆಣ್ಣಾಗಿ ಗಂಡಸಿನೊಟ್ಟಿಗೆ ಬೆಳೆಸುವ ಸಂಬಂಧದಲ್ಲಿ ದೇವರೊಟ್ಟಿಗಿನ ಸಂಬಧವು ಅತ್ಯಂತ ಮುಕ್ತವೂ, ವಿಸ್ತಾರವೂ ಆದದ್ದು. ವೈಷ್ಣವ ಧರ್ಮದಲ್ಲಿ ದೇವರ ಅನುಭವ ಪಡೆಯಲು ಸೆನ್‌ಶುಯಲ್ ಪೆಮಿನೈನ್ ಅನುಭವವೇ ಮಾರ್ಗ. ಇದನ್ನೇ ನಾನು ಸತ್ಯ ಎಂದು ನಂಬುತ್ತೇನೆ. ಪರಿಮಿತವಾದುದರ ಜತೆಗಿನ ಸಂಬಂಧದಲ್ಲಿ ನಾವು ನಮ್ಮನ್ನು ಸದಾ ರಕ್ಷಿಸಿಕೊಳ್ಳಬೇಕು. ಆದರೆ ಅನಂತವಾದುದರ ಜತೆಗಿನ ಸಂಬಂಧ ಹಾಗಲ್ಲ. ಮೂಲತ: ದೇವರು ಹೆಣ್ಣನ್ನು ತುಳಿಯುವುದಿಲ್ಲ ಎಂಬುದು ನನ್ನ ನಂಬಿಕೆ. ರಾಮಾನುಜ ಏನು ಹೇಳಿದ್ದಾನೆ ಅದು ನಿಜಕ್ಕೂ ಸೃಜನಶೀಲವಾದುದ್ದೇ. ಅವನು ಭಾವುಕತೆ ಮತ್ತು ಚಿಂತನೆ, ಭಕ್ತಿ ಮತ್ತು ಫಿಲಾಸಫಿಗಳನ್ನು ಬೆಸೆಯುತ್ತಾನೆ. ಅವನಲ್ಲಿ ಬೆಸೆಯುವಿಕೆಯ ಅಂಶ ಇತ್ತು. ಸದಾ ಸೃಜನಶೀಲವಾಗಿರಬೇಕಾದರೆ ಒಂದು ವ್ಯಕ್ತಿತ್ವದಲ್ಲಿ ಹೆಣ್ಣ ಮತ್ತು ಗಂಡುಗಳೆರಡರ ಗುಣಗಳೂ ಇರಬೇಕಾದ್ದು ಅವಶ್ಯಕ. ವೈಷ್ಣವ ಧರ್ಮದಲ್ಲಿ ಇದು ಶಕ್ತಿಶಾಲೀ ಅಂಶ. ಅದು ಗಂಡಿನೊಳಗೆ ಹೆಣ್ಣನ್ನು ಸೃಷ್ಟಿಸುತ್ತದೆ.

ಅಲ್ಲದೆ ನಾನು ಇಲ್ಲಿಗೆ ಬಂದನಂತರೆ ರಿಫ್ಲೆಕ್ಟ್ ಮಾಡುವುದನ್ನು ಕಲಿತೆ ಮೇಲುಕೋಟೆಗೆ ಬಂದನಂತರ ಹೆಣ್ತನ ನನಗೆ ತೊಡಕಾಗಿ ಕಾಣುವುದಿಲ್ಲಿ. ಅಂದರೆ ತುಳಿಯಲ್ಪಡುವ ಮತ್ತು ಯಾವುದೇ ಸೃಜನಶೀಲವಾದದ್ದನ್ನು ಮಾಡಲು ಬಿಡದಂತಹ ಸ್ಥಿತಿ ಇಲ್ಲ.

ಇನ್ನು ಇಲ್ಲಿನ ಹೆಂಗಸರ ಸ್ಥಾನಮಾನದ ಬಗ್ಗೆ ಹೇಳಬೇಕೆಂದರೆ, ಇಪ್ಪತ್ತನೇ ಶತಮಾನ ಇನ್ನು ಮೇಲುಕೋಟೆಗೆ ಬಂದಿಲ್ಲ. ಆದರೆ ೨೦ನೇ ಶತಮಾನ ಹೆಣ್ಣನ್ನು ವಸ್ತುವಿನಂತೆ ಬಳಸತ್ತದೆ ಎನ್ನುವುದನ್ನು ಮರೆಯುವಂತಿಲ್ಲ.

ಪ್ರ : ನಿಮ್ಮ ಈ ತೆರನಾದ ಆಯ್ಕೆಯ ಬದಕು ಪಾಶ್ಚಾತ್ಯ ಸಮಾಜದಲ್ಲಿನ ಅರೆಮುಕ್ತತೆಯಿಂದುಂಟಾದ ಹತಾಷೆಯೇ ?

ಉತ್ತರ : ಪಾಶ್ಚಿಮಾತ್ಯ ಶೋಷಣೆಯಿಂದ ನಾನು ಪೂರ್ತಿ ಬೇಸತ್ತಿದ್ದೆ. ಮುಕ್ತತೆ ಸಂಪೂರ್ಣ ಬಹಿರಂಗವಾದದ್ದು ಸೃಜನಶೀಲವಾದದ್ದೇನನ್ನು ಅಲೋಚಿಸುವುದಿಲ್ಲ. ನಾನು ಹತಾಷಳಾಗಿದ್ದೆಯೆಂದಲ್ಲ. ಆದರೆ ನಾನು ಪೂರ್ಣತೆಗಾಗಿ ಹುಡುಕಾಡದಲ್ಲಿದೆ.

ಪ್ರ : ಈ ಸಮಾಜದ ನೈತಿಕ ಮೌಲ್ಯಗಳೆಡೆಗೆ ನಿಮ್ಮ ಅಭಿಪ್ರಾಯ ಏನು ?

ಉ : ಅಂದರ ?

ಪ್ರ : ಅಂದರೆ ಭಾರತೀಯ ಸಮಾಜದಲ್ಲಿನ ಲೈಂಗಿಕ ಅಸಮಾನತೆ ಮತ್ತು ಶೀಲದ ಕಲ್ಪನೆಗಿರುವ ಪ್ರಾಮುಖ್ಯತೆ ಇನ್ನೂ ಮುಂದುವರೆದು ಹೇಳಬೇಕೆಂದರೆ ಆಧುನಿಕ ಪಾಶ್ಚಿಮಾತ್ಯ ಹೆಣ್ಣಿಗೆ ಭಾರತೀಯ ಗಂಡಿನ ಸಂಬಂಧ ಸಾಧ್ಯವಾ ?

ಉ : ಇದು ಕೊಂಚ ತೊಡಕಿನ ಪ್ರಶ್ನೆ. ತೀರ ವೈಯುಕ್ತಿಕವಾಗಿ ಪ್ರತಿಕ್ರಿಯಿಸುವಲ್ಲಿ ನನ್ನದೇ ಮಿತಿ ಇದೆ. ಆದರೂ, ಶೀಲದ ಬಗ್ಗೆ ಹೇಳಬೇಕೆಂದರೆ ಸೃಜನಾತ್ಮಕವಾದುದರ ಆಗುವಿಕೆಗಾಗಿ ಇರುವ ಶೀಲವನ್ನು ನಾನು ಗೌರವಿಸುತ್ತೇನೆ. ಈ ದೃಷ್ಟಿಯಿಂದ ಸೀತೆಯದು ಸೃಷ್ಟ್ಯಾತ್ಮಕವಾದ ಶೀಲ. ನೀವು ಕೇಳಿರುವಂತಹ ಸಂಬಂಧ ಖಂಡಿತ ಸಾಧ್ಯ ಎಂದು ನನಗನ್ನಿಸುತ್ತದೆ. ಅದಕ್ಕೆ ಉದಾಹರಣೆಗಳೂ ಇಲ್ಲದಿಲ್ಲ.

ಪ್ರ : ಈ ದೃಷ್ಟಿಯಿಂದ ಭಾರತೀಯ ಗಂಡುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉ : ನನ್ನ ಪರಿಚಯದವರ ಬಗ್ಗೆ ಮಾತ್ರ ನಾನು ಹೇಳಬಲ್ಲೆ. ನನಗನ್ನಿಸುತ್ತದೆ ನಾನು ಭಾರತೀಯ ಗಂಡುಗಳಿಗೆ ಸಿಮಿಲರ್ ಎಂದು. ನಾನು ಏನಾಗಿರುತ್ತೇನೋ ಅದಕ್ಕಾಗಿ ಅವರು ನನ್ನನ್ನು ಗೌರವಿಸುತ್ತಾರೆ ನನ್ನ ಸಂಪರ್ಕದ ಯಾವ ಭಾರತೀಯ ಗಂಡೂ ನನ್ನನ್ನು ವಸ್ತುವಿನಂತೆ ನಡೆಸಿಕೊಂಡಿಲ್ಲ. ನನ್ನಲ್ಲಿನ ಕಲಾಕಾರಳು ಅವರನ್ನು ಬೆದರಿಸಿಲ್ಲ. ಆದರೂ, ನಾನು ಅವರಾರೊಟ್ಟಿಗಾದರೂ ಮದುವೆಯಾಗಿದ್ದರೆ ಪರಿಸ್ಥಿತಿಯೇ ಬೇರೆಯಾಗುತ್ತಿತ್ತೇನೋ !

ಪ್ರ : ಭಾರತದೊಂದಿಗಿನ ಸಂಪರ್ಕದಿಂದಾಗಿ ನಿಮ್ಮ ವ್ಯಕ್ತಿತ್ವದಲ್ಲಿ ಏನಾದರೂ ಮುಖ್ಯ ಬದಲಾವಣೆಗಳಾಗಿದೆಯೇ ? ನಿಮ್ಮ ಅನುಭವ ಮತ್ತು ಚಿಂತನೆ ಏನು ?

ಉ : ಖಂಡಿತಾ ಮುಖ್ಯವಾಗಿ ಕಲೆಯ ದೃಷ್ಟಿಯಿಂದ. ನನ್ನ ಕೆಲಸದಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುವುದು ನನಗೆ ಸಾಧ್ಯವಾಗಿದೆ. ಮೈಥಲಾಜಿಕಲ್ ಆದ ಅಂಶಗಳನ್ನು ಬದುಕಿನಲ್ಲಿ ನಿಜವಾಗಿಸುವುದು ನನಗೆ ಸಾಧ್ಯವಾಯಿತು. ಸೀತೆಯಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ನನಗೆ ಸಾಧ್ಯವಾಯಿತು. ಆಕೆಯಲ್ಲಿ ನಾನು ನನ್ನ ಬದುಕನ್ನು ಅರ್ಥೈಸಿಕೊಂಡೆ. ಇದು ನನ್ನ ಸಮಾಜದಲ್ಲಿ ಸಾಧ್ಯವಾಗುತ್ತಿರಲಿಲ್ಲ. ನನ್ನ ಅನುಭವದಲ್ಲಿ ಪಶ್ಚಿಮದ ಸಮಾಜ ನಂಬಿಕೆಗಳನ್ನು ನಾಶಮಾಡುತ್ತದೆ. ಗೀತ ಹೇಳುವಂತೆ ಅನುಮಾನದಿಂದ ಯಾವುದನ್ನೂ ಅನುಮಾನಿಸುತ್ತಲೇ ಹೋಗುತ್ತೀಯಾ ಮತ್ತು ಅನುಮಾನದಲ್ಲೇ ಸಾಯುತ್ತೀಯಾ ಸೃಜನಾತ್ಮಕವಾದದ್ದೇನನ್ನೂ ಮಾಡಲಾರೆ ಎರಡನೆಯದಾಗಿ ಈ ದೇಶಕ್ಕೆ ಬಂದಮೇಲೆ ಬದುಕಿನಲ್ಲಿ ಹೆಚ್ಚೆಚ್ಚು ಪ್ರಾಕ್ಟಿಕಲ್ ಆಗಿರುವುದನ್ನು ಕಲಿತೆ ಸವಾಲುಗಳನ್ನು ನಾನು ಪ್ರೀತಿಸುತ್ತೇನೆ.

ಪ್ರ : ಸೀತೆ ಭಾರತೀಯ ಹೆಣ್ಣಿಗೆ ಆದರ್ಶಳು. ಅವಳ ಪ್ರಚಂಡತಾಳ್ಮೆ, ಸಂಯಮ, ವಿಧೇಯತೆ, ಮೌನವಾಗಿ ನೋವುಣ್ಣುವ ಕ್ರಮ ಇವೇ ಅವಳ ಆದರ್ಶ ಗುಣಗಳಾಗಿ ಪ್ರಕಟವಾಗುವುದರಿಂದ ಇದು ಭಾರತೀಯ ಹೆಣ್ಣನ್ನು ನೇರವಾಗಿ ತುಳಿಯುವ ಸಂಚು ಎಂಬುದು ವಾದವಾಗುತ್ತದೆ. ಹೀಗಾಗಿ ಸೀತೆಯ ಬದುಕಿನ ಕ್ರಮ ಇನ್ನೆಂದಿಗೂ ನಮಗೆ ಆದರ್ಶವಾಗಲಾರದು ಎಂಬಂತಹ ಸ್ಥಿತಿ ಏರ್ಪಟ್ಟಿದೆ. ಸ್ತ್ರೀ ವಿಮೋಚನೆಯೆಡೆಗೆ ವಿಭಿನ್ನ ಮತ್ತು ಹೆಚ್ಚು ಆಧುನಿಕ ಧೋರಣೆಯ ನೀವೂ ಸೀತೆಯನ್ನು ಆದರ್ಶ ಹೆಣ್ಣಾಗಿ ಕಂಡವರು. ಈ ಸಂಬಂಧದಲ್ಲಿ ನೀವು ಸೀತೆಯನ್ನು ಹೇಗೆ ಗ್ರಹಿಸುವಿರಿ ?

ಉ ; ಆಧುನಿಕ ದೃಷ್ಟಿಕೋನದಿಂದ ಪುರಾತನ ಪಾತ್ರಗಳೊಂದಿಗೆ ಸಂಬಂಧ ಬೆಳೆಸುವ ಬಗ್ಗೆ ಪಣಿಕರ್ ಹೀಗೆ ಹೇಳುತ್ತಾರೆ: " ನೀನೇನೆಂಬುದನ್ನು ಮೊದಲು ಪರೀಕ್ಷಿಸಿಕೊಂಡು, ಪುರಾಣ ಪಾತ್ರಗಳಲ್ಲಿ ನಿನ್ನನ್ನು ತೊಡಗಿಸಿಕೋ " ಖಂಡಿತವಾಗಿ ಇದು ನನ್ನ ಅನುಭವ ನಾನು ನನ್ನ ಸ್ವಂತ ಅನುಭವವನ್ನು ೨೦ ನೇ ಶತಮಾನದ ದೃಷ್ಟಿಕೋನ, ಸಾಧ್ಯತೆ, ಶಿಕ್ಷಣ ಮತ್ತು ನಿರೀಕ್ಷೆಗಳೊಂದಿಗೆ ನೋಡುತ್ತೇನೆ. ನನ್ನ ಶಿಕ್ಷಣ ನನಗೆ ಕಲಾಕಾರಳಾಗಿ ಬೆಳೆಯಬೇಕೆಂಬ ಹಂಬಲ ತಂದುಕೊಟ್ಟಿತು. ಆದರೆ ಒಬ್ಬ ಹೆಣ್ಣಿಗೆ ತನ್ನನ್ನು ಕಲಾಕಾರಳಾಗಿ ಗುರುತಿಸಿಕೊಳ್ಳುವುದು ಬಹಳ ಕಷ್ಟ ಎಂಬುದು ಶಾಲೆ ಬಿಟ್ಟ ನಂತರ ನನಗೆ ತಿಳಿಯಿತು. ಏಕೆಂದರೆ ಕಲೆಯ ಚರಿತ್ರೆ

ಯಲ್ಲಿ ಸ್ತ್ರೀ ಕಲಾಕಾರರ ಪರಂಪರೆ ಇಲ್ಲ. ಜರ್ಮನ್ ಗ್ರೇರ್ ತನ್ನ ಅಬ್‌ಸ್ಟೆಕಲ್ ರೇಸ್‌ನಲ್ಲಿ ಯಾವ ಸ್ತ್ರೀ ಕಲಾಕಾರಳೂ ಪರಿಪೂರ್ಣತೆಯನ್ನು ಪಡೆದಿಲ್ಲ ಎಂಬುದನ್ನು ತೋರಿಸಿಕೊಡುತ್ತಾಳೆ. ಈ ಹಿನ್ನೆಲೆಯೊಳಗೆ ನಾನು ನನ್ನನ್ನು ಯಾವ ಕಲಾಕಾರಳೊಂದಿಗಾಗಲೀ, ಬರಹಗಾರ್ತಿಯೊಂದಿಗಾಗಲೀ ಗುರುತಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಶಿಕ್ಷಣ ನನ್ನ ಪ್ರತಿಭೆಯನ್ನು ಬೆಳೆಸಿತು, ಆದರೆ ಸಮಾಜ ನನಗೆ ನನ್ನ ಐಡೆಂಟಿಟಿಯನ್ನು ಕೊಡಲಿಲ್ಲ. ನನಗೆ ನನ್ನ ಸಾಮರ್ಥ್ಯ ತಿಳಿದಿದೆ. ಆದರೆ ಈ ಹೆಣ್ಣು ಜನ್ಮದಿಂದಾಗಿ ಒಂದು ಬಗೆಯ ಸೋಲಿನ ಕಾಂಪ್ಲೆಕ್ಸ್ ಕಾಡುತ್ತದೆ. ನಾನು ಮಾಡಬಲ್ಲೆನೆಂಬ ನಂಬಿಕೆ ಇದೆ, ಆದರ ಆಂತರಿಕ ಶಕ್ತಿ ಇಲ್ಲ. ನಾನು ಭಾರತಕ್ಕೆ ಬಂದ ನಂತರ ಸೀತೆಯ ಪಾತ್ರವನ್ನು ಅಭಿನಯಿಸುತ್ತಿದ್ದಾಗ ನಾನು ಸೀತೆಯದೇ ಆದ ಹತಾಷೆಯಲ್ಲಿದ್ದೆ. ಈ ಕನ್ಸೂಮರ್ ಸಮಾಜ (ರಾವನ್ನನು) ತನ್ನತ್ತ ಸೆಳೆಯಲು ಪ್ರಯತ್ನಿಸುತ್ತಿದೆ. ಹಾಗೆಯೇ ನನ್ನನ್ನು ಸೃಷ್ಟಿಶೀಲ ವ್ಯಕ್ತಿಯಾಗಿ ಸ್ವೀಕರಿಬಲ್ಲವರು (ರಾಮ)ಇರುತ್ತಿಲ್ಲ. ಈ ಕನ್ಸೂಮರ್ ಸಮಾಜ ಎಂದಿಗೂ ನನ್ನ ಸೃಜನಶೀಲತೆ ಹೊರಹೊಮ್ಮಲು ಬಿಡಲಿಲ್ಲ. ಅದು ನನ್ನ ಸೃಜನಶೀಲತೆಯನ್ನ ಸಂಪೂರ್ಣ ನಾಶಮಾಡುತ್ತದೆ. ಇಂತಹ ಸಾದೃಶ್ಯ ಸ್ಥಿತಿಯಲ್ಲಿ ಅವಳೇ ನನ್ನ ಸ್ಫೂರ್ತಿಯಾದಳು.

ಸೀತೆಯಲ್ಲಿ ಅತ್ಯಂತ ಆದರ್ಶದಾಯಕವಾದದ್ದೆಂದರೆ ಅವಳು ಅಯೋದೆಯನು ಬಿಟ್ಟಾಗಲಾಗಲಿ, ರಾಮನಿಂದ ಬೇರ್ಪಟ್ಟಾಗಲಾಗಲೀ, ಅಗ್ನಿಪರೀಕ್ಷೆಗೆ ಒಳಗಾಗಲಾಗಲೀ, ಕೊನೆಯಲ್ಲಿ ಮತ್ತೆ ಕಾಡಿಗೆ ಕಳಿಸಲ್ಪಲ್ಲಟ್ಟಾಗಲಾಗಲೀ ಕಹಿಯಾಗುವುದಿಲ್ಲ. ಬದುಕು ಪೂರ್ತಿ ನೋವುಗಳಿಂದ ತುಂಬಿದೆ, ಆದರೆ ಅದು ಕಹಿಯದಾಹೀಗೆ ಆದರ್ಶಳಾಗುತ್ತಾಳೆ ಸೀತೆ. ಇಲ್ಲಿ ನನಗೆ ಸಿಕ್ಕ ಉತ್ತರ ಸೀತೆ ಎಲ್ಲವನ್ನೂ ವಿಶಾಲ ದೃಷ್ಟಿಯಿಂದ ನೋಡುತ್ತಾಳೆ.ತೀರಾ ವೈಯಕ್ತಿಕವಾಗಿಯಲ್ಲ. ಸೀತೆಯ ಇನ್ನೊಂದು ವಿಶಿಷ್ಟ ಗುಣವೆಂದರೆ ಅವಳು ಜನರನ್ನು (ಮುಗ್ಧರನ್ನು) ಕ್ಷಮಿಸುವಬಗೆ. ಇದನ್ನು ರಾಕ್ಷಸರ ಸಂದರ್ಭಕ್ಕೆ ಹೇಳಬಹುದು, ತಮ್ಮ ಮುಗ್ಧತೆಯಿಂದ ನಮ್ಮನ್ನು ತುಳಿಯಲು ಪ್ರಯತ್ನಿಸುವ ಗಂಡಸರನ್ನು ನಾನು ಸದಾ ಕ್ಷಮಿಸುತ್ತೇನೆ. ಹೆಣ್ಣಾಗಿ,ಕಲಾಕಾರಳಾಗಿ ಈ ಕ್ಷಮಿಸುವ ಗುಣ ನನಗೆ ಸೀತೆಯಿಂದ ಬಂದದ್ದು.

ಸಂಪ್ರದಾಯದ ಪುನರ್‌ಸೃಷ್ಟಿ ಉಂಟುಮಾಡುವ ಪರಿಣಾಮ ವಿಹ್ವಲಕಾರಿಯಾದದ್ದು. ಎಲ್ಲ ಪರೀಕ್ಷೆಗಳು ಮುಗಿದ ನಂತರ ಅವಳು ಇಬ್ಬರು ಮಕ್ಕಳಿಗೆ ಜನ್ಮ ಕೊಡುತ್ತಾಳೆ. ಅದು ಅವಳ ಸೃಷ್ಟಿಶೀಲತೆಯಲ್ಲಿನ ಇತ್ಯಾತ್ಮಕ ಅಂಶ.ಇಲ್ಲಿ ಮತ್ತೆ ನಾನು ಸೀತೆಯಲ್ಲಿ ನನ್ನನ್ನು ಕಂಡುಕೊಳ್ಳುತ್ತೇನೆ. ನನ್ನ ಬದುಕಿನ ಅಗ್ನಿಪರೀಕ್ಷೆಯ ನಂತರ ಹೊರಬಂದ ಈ ಪೇಂಟಿಂಗ್‌ಗಳು ಒಂದು ರೀತಿಯಲ್ಲಿ ಜೀವನದ ಹಂತದಲ್ಲಿ ಅಗ್ನಿಪರೀಕ್ಷೆ ಎನ್ನಬಹುದು.

ಅವಳು ಸದಾ ಸಂಪ್ರದಾಯದೊಟ್ಟಿಗೆ ತಳುಕು ಹಾಕಿಕೊಂಡಿದ್ದು, ಸಂಪ್ರದಾಯವೆಂಬುದು ಪುನರ್ ಅಭಿವ್ಯಕ್ತಿಗೊಳ್ಳಬಹುದಾದ್ದೆಂದು ನಂಬುತ್ತಾಳೆ. ಅವಳು ಕೊನೆಯವರೆಗೂ ರಾಮನನ್ನು ಪ್ರೀತಿಸುತ್ತಾಳೆ. ನಮ್ಮ ಫೆಮಿನಿಸ್ಟರು ಸಂಪ್ರದಾಯವನ್ನು ತಿರಸ್ಕರಿಸುತ್ತಾರೆ ಆದರೆ ಅದರ ಪುನರ್‌ವ್ಯಾಖ್ಯೆ ಬಹಳ ಮುಖ್ಯ-ಎಂದು ನನಗನ್ನಿಸುತ್ತದೆ. ಸೀತೆ ಒಂದು ಹಂತದಲ್ಲಿ ಲಕ್ಷ್ಮಣನ ರೂಪದಲ್ಲಿ ಸಂಪ್ರದಾಯವನು ತಿರಸ್ಕರಿಸುತ್ತಾಳೆ. ಆದರೆ ತಕ್ಷಣ ರಾವಣ ಬರುತ್ತಾನೆ. ಮತ್ತೆ ಅವಳು ಸಂಪ್ರದಾಯಕ್ಕೆ ಬೆಸೆದುಕೊಳ್ಳುತ್ತಾಳೆ.

ನನಗೆಸ್ವಾತಂತ್ರವಿದೆ ಆದರೆ ಅದನ್ನು ಏನು ಮಾಡಬೇಕೆಂಬುದು ನನಗೆ ತಿಳಿದಿಲ್ಲ. ನಾನು ಸಂಪ್ರದಾಯವನ್ನು ಪೂರ್ತಿ ತಳ್ಳಿ ನಡೆದರೆ ನನ್ನ ಬದುಕು ಅರ್ಥಹೀನವಾಗುತ್ತದೆ. ನಾನು ಸಂಪ್ರದಾಯದ ಪುನರ್‌ಅಭಿವ್ಯಕ್ತಿಗಾಗಿ ಸಂಪ್ರದಾಯವನ್ನು ಬಳಸುತ್ತಿದ್ದೇನೆ.

ನನಗೆ ಸ್ವಾತಂತ್ರವಿದೆ.ಆದರೆ ಅದನ್ನು ಏನು ಮಾಡಬೇಕೆಂಬುದು ನನಗೆ ತಿಳಿದಿಲ್ಲ. ನಾನು ಸಂಪ್ರದಾಯವನ್ನು ಪೂರ್ತಿ ತಳ್ಳಿ ನಡೆದರೆ ನನ್ನ ಬದುಕು ಅರ್ಥಹೀನವಾಗುತ್ತದೆ. ನಾನು ಸಂಪ್ರದಾಯದ ಪುನರ್‌ಅಭಿವ್ಯಕ್ತಿಗಾಗಿ ಸಂಪ್ರದಾಯವನ್ನು ಬಳಸುತ್ತಿದ್ದೇನೆ.

ಪ್ರ : ನಿಮ್ಮ ಸೀತೆ ರಾಮನಿಗೆ ಕೊಟ್ಟ ಪ್ರಾಮುಖ್ಯತೆ ಅತಿಯಾಯಿತು ಎಂದು ನಿಮಗನಿಸುವುದಿಲ್ಲವೇ ? ಒಂದು ಹಂತಕ್ಕಂತೂ ಅವನಿಲ್ಲದೆ ತನ್ನ ಅಸ್ತಿತ್ವವಿಲ್ಲ ಎಂಬ ಸ್ಥಿತಿ ತಲುಪುತ್ತಾಳೆ. ಸ್ತ್ರೀ ವಿಮೋಚನೆಯ ದೃಷ್ಟಿಯಿಂದ ಇದಕ್ಕೆ ನಿಮ್ಮ ಸಮರ್ಥನೆ ಏನು ?

ಉ : ರಾಮ ಸೃಷ್ಟಿಶೀಲ. ರಾಮನಲ್ಲಿ ಸೃಜನಶೀಲತೆಗೆ ಸ್ಥಾನವಿಲ್ಲ. ಮೂಲಭೂತವಾಗಿ ರಾಮ ಸೀತೆ

ಯನ್ನು ಪ್ರೀತಿಸುತ್ತಾನೆ. ಅವನು ಸಂಪ್ರದಾಯದಲ್ಲಿನ ಒಳ್ಳೆಯದನ್ನು ಬಿಂಬಿಸುತ್ತಾನೆ. ಸಂಪ್ರದಾಯ ಸೃಜನ ಶೀಲತೆಯನ್ನು ಪ್ರೀತಿಸುತ್ತದೆ. ಮತ್ತು ಬದಲಾವಣೆ ಬಯಸುತ್ತದೆ. ಸಂಪ್ರದಾಯದಲ್ಲಿನ ಈ ವ್ಯಕ್ತಿ, ಸೃಜನ ಶೀಲತೆಯನ್ನು ಪರಿಗಣಿಸದಂತಹ ಜನರ ಸಂಬಂಧದಲ್ಲಿ ಇದ್ದಾನೆ. ಸೀತೆಯ ಸೃಜನಶೀಲತೆಗೆ ಮಾರುಹೋದ ಸೃಜನಶೀಲನೀತ, ಆದರೆ ಇವನರಿತೆ ನೋವುಣ್ಣುವವರಿಂದ ಸುತ್ತುವರಿದಿದ್ದಾನೆ. ಸೀತೆಯನ್ನು ಕಂಡಾಗ ಅವನು ಕಂಬನಿದುಂಬುತ್ತಾನೆ



ಪ್ರ : ನಿಮ್ಮ ಪ್ರಮುಖ ಆಕರ್ಷಣೆ ವೈಷ್ಣವಧರ್ಮದ ಕಡೆಗೆ. ಆದರೆ ನಿಮ್ಮನ್ನು ಮೂಲಭೂತವಾಗಿ ಸೆಳೆದವಳು ಶೈವಿಸಂ ಪರಿಕಲ್ಪನೆಯ ಹೆಣ್ಣು. ಇದು ನಿಮ್ಮ ಸೀತೆಯಲ್ಲೂ ಬಿಂಬಿತಗೊಂಡಿದೆ. ಸೀತೆಯನ್ನು ನೀವು ಕೆಲವು ಸಂದರ್ಭಗಳಲ್ಲಿ ಹೆಚ್ಚು ಬಹಿರಂಗವಾಗಿ ಪ್ರತಿಭಟಿಸುವ, ಉಗ್ರಳಾಗುವ ಹಾಗೆ ಚಿತ್ರಿಸುತ್ತೀರಿ. ನಿಮ್ಮ ಚಿಂತನೆ ಇಲ್ಲಿ ಹೇಗೆ ಕೆಲಸಮಾಡಿದೆ ಹೇಳುವಿರಾ ?

ಉ : ಪ್ರಶ್ನೆ ತುಂಬಾ ಪ್ರೋಬಿಂಗ್ ಆಗಿದೆ. ಕಲಾಕಾರಳಾಗಿ ನಾನು ಶೈವ ಮತ್ತು ವೈಷ್ಣವಧರ್ಮಗಳೆರಡನ್ನು ಓದುತ್ತೇನೆ ಮೂಲತ ಕಲಾಕಾರಳಾಗಿ ನಾನು ವೈಷ್ಣವ ಮತ್ತು ಶೈವಧರ್ಮಗಳೆರಡರ ಸಂಕೇತಗಳಿಂದಲೂ ಪ್ರಭಾವಿತಳಾಗಿದ್ದೇನೆ. ನಾನು ಕೆತ್ತಿದ ಮೊದಲನೇ ಶಿಲ್ಪವೇ ದುರ್ಗೆಯದು. ದುಷ್ಟನಾಶಕ್ಕಾಗಿ ಉಗ್ರಳಾಗಿ ಹೋರಾಡುವ ಆಕೆ ಆದರ್ಶಳಾಗಿ ಕಂಡಳು. ಶೈವ ಸಂಕಲ್ಪನೆಯ ಸೃಷ್ಟಿ ನಾಶಗಳು ಅವಶ್ಯಕ. ಆದ್ದರಿಂದ ಕಲಾಕಾರಳಾಗಿ ಎಲ್ಲಾ ಪೇಂಟಿಂಗ್‌ಗಳಲ್ಲೂ ನಾನು ಯಾವುದೇ ಪಂಥದ ಪ್ರತಿನಿಧಿ ಅಲ್ಲ ಎಂದು ಹೇಳಬಯಸುತ್ತೇನೆ. ೩ ನೇ ಪೇಂಟಿಂಗ್ ಖಂಡಿತವಾಗಿಯೂ ಶೈವ ಪರಿಕಲ್ಪನೆಯದ್ದೇ. ನನ್ನ ಸೀತೆಗೆ ಅದರ ಅವಶ್ಯಕತೆಯಿತ್ತು, ಎಂದು ನನಗೆನ್ನಿಸುತ್ತದೆ ಅವಳು ತೀರಾ ಪ್ಯಾಸಿವ್ ಆಗಿ ಹೋಗಿಬಿಡುವ ಅಪಾಯ ಸದಾ ಇತ್ತು. ಹೀಗಾಗಿ ಅದು ಅನಿವಾರ್ಯವಾಯಿತು, ನಾನು ಎರಡೂ ಪಂಥಗಳನ್ನು ಮೇಳವಿಸಿಕೊಂಡವಳು.

ಪ್ರ : ನಿಮ್ಮ ಸೀತೆಯ ಬಗ್ಗೆಯೇ ಇನ್ನೊಂದು ಮಾತು. ಪಾಲ ಮಾಡರ್‌ಶನ್ ಬೆಕರ್‌ಳು ಮೊಲೆಯೂಡಿಸುವ ತಾಯಿಯಲ್ಲಿ ಪರಿಪೂರ್ಣ ಹೆಣ್ಣನ್ನು ಕಂಡಿದ್ದಾಳೆ. ಅವಳು ಸೃಷ್ಟಿಸುವ ಬೆತ್ತಲೆ ಹೆಣ್ಣಿನಲ್ಲಿ, ಕಲೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಹೆಣ್ಣಿನ ದೇಹ ಸೌಂದರ್ಯ ಅಭಿವ್ಯಕ್ತಿಗೊಳ್ಳದ ಹಾಗೆ ಎಚ್ಚರಿಕೆ ವಹಿಸುತ್ತಾಳೆ. ಹಾಗೆಯೇ ಅವಳ ಸೃಷ್ಟಿಯ ಹೆಣ್ಣು ತೋಳ್ಬಲದಿಂದ ತನ್ನ ಸ್ಥಾನ ಭದ್ರಪಡಿಸುವುದಿಲ್ಲ. ಪರಿಪೂರ್ಣತೆಯ ಹಾದಿಯಲ್ಲಿ ಪಾಲ ಸೃಷ್ಟಿಸುವ ಹೆಣ್ಣಿನ ಸ್ಥಾನ ಬಹಳ ಗಟ್ಟಿಯಾದುದು,ನಿರ್ದಿಷ್ಟವಾದುದು ಎಂದು ನನ್ನ ಅನಿಸಿಕೆ. ಈ ಬಗೆಯ ಶಕ್ತಿಶಾಲೀ ಹೆಣ್ಣಿನ ಸೃಷ್ಟಿ ನಿಮಗೇಕೆ ಸಾಧ್ಯವಾಗೇವುದಿಲ್ಲ. ಇದಕ್ಕೆ ನಿಮ್ಮದೇ ಆದ ಸಮರ್ಥನೆ ಇದೆಯೆ ?

ಉ : ನಾನು ಯಾವುದನ್ನು ಸಮರ್ಥಿಸಿಕೊಳ್ಳುವುದಿಲ್ಲ. ನಾನು ಅವಳನ್ನು ಸ್ತ್ರೀ ಕಲಾಕಾರಳಾಗಿ ಮೆಚ್ಚಿಕೊಳ್ಳುತ್ತೇನೆ. ಅವಳು ತುಂಬಾ ಒಳ್ಳೆಯ ಕಲಾವಿದೆ. ಕಲೆಯಲ್ಲಿ ಈ ತಾಯಿ ಮಗು ಅನ್ನುವುದು ಅಷ್ಟು ಮುಖ್ಯವಲ್ಲ. ಸೀತೆ ಎಲ್ಲೂ ತಾಯಿಯಾಗಿ ಕಂಡುಬರುವುದಿಲ್ಲ (ಉತರ ಖಾಂಡವನ್ನು ಹೊರತುಪಡಿಸಿದರೆ) ಅವಳು ಬರೀ ಪ್ರೇಮಿಯಾಗಿ ಕಾಣಿಸಿಕೊಳ್ಳುತ್ತಾಳೆ. ಸೀತೆಯಲ್ಲಿ ನನಗೆ ಬಹಳ ಮುಖ್ಯವಾಗುವುದೆಂದರೆ ಅವಳ ಶಕ್ತಿಶಾಲೀ ಸಂಬಂಧ

ಪಾಲ ಹೆಣ್ಣಿನ ಹೆಚ್ಚು ವಿಸ್ತಾರವಾದ ಏಕನೋಗ್ರಫಿ ಯನ್ನು ಸೃಷ್ಟಿಸುವುದಿಲ್ಲ ಎಂಬುದು ನನ್ನ ಅಸಮಾಧಾನ. ಒಂದು ಬಗೆಯಲ್ಲಿ ಅದು ಅಪರಿಪೂರ್ಣವೇ. ಹೆಣ್ಣು ಬರೀ ತಾಯಿಯಲ್ಲ. ಅವಳಿಗೆ ಇನ್ನೂ ಅನೇಕ ವ್ಯಕ್ತಿತ್ವಗಳಿವೆ. ಅವಳ ಸೃಷ್ಟಿಯ ಬತ್ತಲೆಯು ಹೆಣ್ಣು ಪೂರ್ತಿ ಹೆಣ್ಣಿನ ದೃಷ್ಟಿಕೋನದಿಂದ ಚಿತ್ರಿತವಾದದ್ದು. ಯಾವ ಗಂಡಸು ಇಂತದನ್ನು ಸೃಷ್ಟಿಸಲಾರ. ಸಂಪ್ರದಾಯದಲ್ಲಿನ ಅವಳ ಸೃಜನಶೀಲತೆಯನ್ನು ನಾನು ಮೆಚ್ಚುತ್ತೇನೆ. ನನ್ನ

ಸೃಷ್ಟಿಯ ಸೀತೆಯಲ್ಲಿ ಸಂಪೂರ್ಣ ಹೆಣ್ಣಿನದೇ ಆದ ಅನುಭವಳಿವೆ. ಇಡೀ ರಾಮಾಯಾಣದ ಪೇಂಟಿಂಗ್ ಗಳ ಸರಣಿಯಲ್ಲಿ ಹೆಣ್ಣನ್ನೂ ಅನೇಕ ರೀತಿಯಲ್ಲಿ ಹೇಳಲು ಪ್ರಯತ್ನಿಸಿದ್ದೇನೆ. ರಾವಣನನ್ನೂ ವಿರೋಧಿಸುವಲ್ಲಿನ ಸೃಜನಾತ್ಮಕವಾದ ಶೀಲ, ಲಕ್ಷ್ಮಣನನ್ನು ದೂರ ತಳ್ಳುವ ದುರ್ಗೆಯ ರೂಪ, ಹಾಗೆಯೇ ಹತಾಷೆಯ ಕ್ಷಣಗಳು, ಹನುಮಂತನನ್ನು ಭೆಟ್ಟಿಯಾಗುವುದು, ಅಗ್ನಿಯಲ್ಲಿ ಉರಿಯುವ ಸೀತೆ ಹೀಗೆ ಹಲವು ಹತ್ತು ಅಂಶಗಳಲ್ಲಿ ಅಭಿವ್ಯಕ್ತಿಸಿದ್ದೇನೆ. ತಾಯಿ ಮಗುವನ್ನು ಚಿತ್ರಿಸುವಲ್ಲಿ ನನ್ನದೇ ಆದ ಮಿತಿಗಳಿವೆ. ನನಗೆ ಬೇರೆ ವಿಷಯಗಳು ಬೇಕು.

ಪ್ರ : ಮೌನವಾಗಿ ನೋವುಣ್ಣುವ ಪರಿಕಲ್ಪನೆ ನಿಮ್ಮ ಮೇಲೆ ಪ್ರಭಾವ ಬೀರಿದೆ ಎಂದಿರಿ, ಭಾರತೀಯ ಹೆಣ್ಣಿನ ಸಂದರ್ಭಕ್ಕೆ ಅದು ಖಂಡಿತವಾಗಿಯಾ ತುಳಿಯುವ ಮೌಲ್ಯವೇ. ಸೀತೆಯಲ್ಲಿ ನಿಮಗೆ ಇದು ಸಮಕಾಲೀನ ಸಂದರ್ಭಕ್ಕೆ ಎಷ್ಟು ತೃಪ್ತಿ. ಪರಿಪೂರ್ಣತೆ ಕೊಟ್ಟಿದೆ?

ಉ : ಸೃಜನಶೀಲವಾಗಿ ನೋವುಣ್ಣುವ ಕ್ರಮ ನಾನು ಪಾಶ್ಚಿಮಾತ್ಯ ಗಂಡಸರಲ್ಲಿ ಕಂಡಿದ್ದೇನೆ. ಹೆಣ್ಣು ಯಾವಾಗಲೂ ನೋವುಣ್ಣುವ ಗಂಡಸಿನ ಬೆಂಬಲಳಾಗಿ ಅಷ್ಟೇ ಚಿತ್ರಿತಳಾಗುತ್ತಾಳೆ. ಇದು ನಮ್ಮ (ಪಶ್ಚಿಮದ) ಕಲೆಯಲ್ಲಿ ಸಾಕಷ್ಟಿದೆ. ಯೇಸು ಮೇರಿ ಸಂಬಂಧದಲ್ಲಿ ಇದು ಸ್ಪಷ್ಟ. ಕ್ರಿಯೇಟಿವ್ ಸಫರಿಂಗ್ ಎನ್ನುವುದು ಗಂಡಸಿನ ಸ್ವತ್ತು. ಇದು ಹೆಣ್ಣಿನ ಸಂದರ್ಭಕ್ಕೆ ಎಲ್ಲೂ ಕಂಡುಬರುವುದಿಲ್ಲ. ಭಾರತೀಯ ಸಂದರ್ಭಕ್ಕೆ ಹೆಣ್ಣುಗಳೇ ಮೂಲತಃ ನೋವುಣ್ಣುವ ಜೀವಿಗಳು. ಸೀತೆಯಂತೆ ನೋವುಗಳನ್ನು ಸೃಜನಾತ್ಮಕವಾಗಿ ಸ್ವಿಕರಿಸಿದಾಗ ಮಾತ್ರ ವ್ಯಕ್ತಿತ್ವ ಗಟ್ಟಿಯಾಗುವುದೆಂದು ನನ್ನ ಅನಿಸಿಕೆ. ತನ್ನೊಳಗನ್ನು ಕಹಿಯಾಗಿಸಿಕೊಳ್ಳದೆ ಕ್ಷಮೆ ಕೊಡುವಂತಹ ಸಾಮರ್ಥ್ಯ ಅತ್ಯಂತ ಮಹತ್ವದ್ದು.

ಪ್ರ : ಸಾಂಪ್ರದಾಯಿಕ ಕಲೆ ಹೆಚ್ಚು ಸಾಮರಸ್ಯ ಕೇಂದ್ರಿತ. ಅದು ಸಂಘರ್ಷಣೆಯನ್ನು ಕಡಿಮೆ ಮಾಡಲು ಮತ್ತು ಸಾಮರಸ್ಯ ತರಲು ಸದಾ ಹೆಣಗುತ್ತದೆ. ನಿಮ್ಮ ಅನುಭವವೂ ಇದೇ ಏನು ? ಸ್ತ್ರೀ ಕಲಾಕಾರಳಾಗಿ ನೀವು ಇದಕ್ಕೆ ಹೇಗೆ ರಿಲೇಟ್ ಮಾಡುವಿರಿ ?

ಉ : ನನ್ನ ಕೃತಿಗಳಲ್ಲಿ ವಾಸ್ತುಶಿಲ್ಪವನ್ನು ಸಾಮರಸ್ಯ ಕೇಂದ್ರಿತವನ್ನಾಗಿಯೂಮತ್ತು ಪೇಂಟಿಂಗಗಳನ್ನು ಘರ್ಷಣೆ ಕೇಂದ್ರಿತವನ್ನಾಗಿಯೂ ವಿಭಾಗಿಸಿಕೊಂಡಿರುವೆನಾಗಿ, ಎರಡೂ ಬಗೆಯ ಕಲೆಯ ತೀವ್ರ ಅವಶ್ಯಕತೆ ನನಗುಂಟು. ಹೆಚ್ಚಿನ ಪಶ್ಚಿಮದ ಸಂಸ್ಕೃತಿ ಸಂಘರ್ಷಣೆಯ ಹಾದಿಯಲ್ಲಿ ಅತ್ಯಂತ ದೂರ ನಡೆದಿದೆ. ನಾನು ಭಾರತಕ್ಕೆ ಬಂದು ಆರು ವರ್ಷಗಳ ಕಾಲ ಕಲ್ಲುಕೆತ್ತನೆಯಲ್ಲಿ ಕಳೆದನಂತರ ಸಾಮರಸ್ಯಕೇಂದ್ರಿತ ಸಂಕೇತಗಳನ್ನು ಮಾಡುವುದರಲ್ಲಿ ನನಗೆ ಅತ್ಯಂತ ಶಮನಕಾರೀ ಅನುಭವ ಸಿಕ್ಕಿತು. ಹೆಣ್ಣಾಗಿ ನನ್ನ ಕಲೆ ಘರ್ಷಣೆ ದುರಂತ ಕೇಂದ್ರಿತವಾಗಿದೆ. ನನ್ನ ಸೀತಾ ಪೇಂಟಿಂಗ್ ಗಳು ಘರ್ಷಣೆ ಮತ್ತು ಸಾಮರಸ್ಯವಲ್ಲದ ಪ್ರತಿಮೆಗಳಿಗೆ ಟಿಪಿಕಲ್ ಆದ ಉದಾಹರಣೆ ಎನಿಸುತ್ತದೆ. ಗಾಯ ಗೊಂಡು ನೋವುಣ್ಣುವ ಸೀತೆ ತನ ಕೈಯಲ್ಲಿನ ಗಾಯವನ್ನು ವಾಲ್ಮೀಕಿಗೆ ತೋರಿಸುವ ರಿಕ್ಕಿ ನೀ ಪೇಂಟಿಂಗ್ ಅನ್ನು ಬದಲಾಯಿಸುವಂತೆ ನನ್ನನ್ನು ಅನೇಕ ಸಂದರ್ಭಗಳಲ್ಲಿ ಕೇಳಲಾಗಿದೆ. ಸಾಮಾನ್ಯವಾಗಿ ಈ ಟೀಕೆ ಹೀಗೆ ಬಂದಿದೆಃ "ರಾಮಾಯಣ ಒಂದು ಧರ್ಮಶಾಸ್ತ್ರವಾದ್ದರಿಂದ ಅದು ಸಾಮರಸ್ಯದಲ್ಲಿ ಕೊನೆಗೊಳ್ಳಬೇಕು" ಆದರೆ ಹೆಂಗಸರು ಇನ್ನು ಸಾಮರಸ್ಯದಲ್ಲಿಯೇ ಉಳಿಯಲಾರರು ಎಂದು ನಾನು ಹೇಳಬಯಸುತ್ತೇನೆ. ನೋವುಣ್ಣುವ ಅಂಶವನ್ನು ಗಮನಕ್ಕೆ ತರಲು ನಾನು ಬಯಸುತ್ತೇನೆ. ಸೀತೆಯ ಕಥೆ ಸಂತೋಷ ಸಾಮರಸ್ಯಗಳಲ್ಲಿ ಕೊನೆಗೊಳ್ಳುವುದಿಲ್ಲವನ್ನುವಲ್ಲಿ ಜನ ಅದರಿಂದ ಹೆಚ್ಚು ಅಸಹನೀಯರಾಗುವುದನ್ನು ನಾನು ಬಯಸುತ್ತೇನೆ.

ಅದೇನೇಯಾದರೂ, ಪೇಂಟಿಂಗ್ಸ್‌ನಲ್ಲಿ ನನ್ನ ಕಲೆ ಈ ರೀತಿ ಇದ್ದರೂ ಸಾಮರಸ್ಯ ಕೇಂದ್ರಿತ ಕಲೆಯಿಂದ ನಾನು ಅತ್ಯಂತ ಗಾಢವಾಗಿ ಪ್ರಭಾವಿತಳಾಗಿದ್ದೇನೆ. ವಿಶೇಷವಾಗಿ ಮೇಲುಕೋಟೆಯಲ್ಲಿನ ಹಲವು ಹಬ್ಬಗಳು ನನ್ನ ಸೃಜನಶೀಲತೆಯನ್ನು ಹೊರತರುವಲ್ಲಿ ಬಹಳ ಪೂರಕವಾಗಿವೆ. ನಾನು ಸಾಮರಸ್ಯ ಕೇಂದ್ರಿತ ಭಾರತೀಯ ಕಲೆಯನ್ನು ಸಂಧಿಸದೇ ಹೋಗಿದ್ದರೆ ಸೀತೆಯ ಪೇಂಟಿಂಗ್‌ಗಳನ್ನು ಮಾಡುವ ಸೃಜನಶೀಲತೆ ನನ್ನಲ್ಲಿ ಮೂಡುತ್ತಿರಲಿಲ್ಲವೇನೋ ! ಹೀಗಾಗಿ ಈ ಎರಡೂ ಬಗೆಯ ಕಲೆ ಅನೇಕ ರೀತಿಯಲ್ಲಿ ಅವಶ್ಯಕ ಮತ್ತು ಮೌಲಿಕವಾದವುಗಳು ಎಂದು ನನ್ನ ಅತ್ಯಂತ ಆಳದ ಅನಿಸಿಕೆ.

ಪ್ರ : ನಿಮ್ಮ ದೃಷ್ಟಿಯಲ್ಲಿ ಸ್ತ್ರೀ ವಿಮೋಚನಾವಾದಿ ಕಲೆ ಎಂದರೇನು ?

ಉ : ಫೆಮಿನಿಸ್ಟ್ ಆರ್ಟ್ ಎಂಬುದೊಂದಿದೆಯೆಂದು ನಾನು ನಂಬುವುದಿಲ್ಲ. ಇಲ್ಲಿ ಮಹಿಳೆಯರು ಕಲೆಯನ್ನು ಗಂಭೀರವಾಗಿ ತೆಗೆದುಕೊಳ್ಳುವುದು ಮುಖ್ಯವಾಗುತ್ತದೆ. ಪಾಲ ಮಾಡೆರ್‌ಶನ್ ಬೆಕರ್ ಶೀಲಾ ಗೌಡ, ಡಿಸೌಜ ಮುಂತಾದ ಸ್ತ್ರೀ ಕಲಾಕಾರರಿಂದ ನಾನು ಪ್ರೇರಿತಳಾಗಿದ್ದೇನೆ. ಈ ಎಲ್ಲಾ ಹೆಂಗಸರ ನಡುವೆ ಒಂದು ಬಗೆಯ ಬೆಸುಗೆ ಇದೆ ಎಂದು ನನಗನ್ನಿಸುತ್ತದೆ. ತಮ್ಮ ಅನುಭವವೇನು ಎಂಬುದರ ಒಂದು ಸ್ಪಷ್ಟ ಚಿತ್ರವನ್ನು ಒಬ್ಬ ಪುರುಷ ಕಲಾಕಾರ ಚಿತ್ರಿಸುವುದಕ್ಕಿಂತ ಭಿನ್ನವಾಗಿ ಅವರು ಕೊಡುತ್ತಾರೆ. ಆದರೆ ಫೆಮಿನಿಸ್ಟ್ ಆರ್ಟ್‌ನ ಒಂದು ಸಾಮಾನ್ಯೀಕೃತಗೊಂಡ ನಿಯಮ ಇಲ್ಲವೇ ಇಲ್ಲ. ಒಬ್ಬ ಹೆಣ್ಣು ತನ್ನಲ್ಲಿನ ಪ್ರತಿಭೆಯನ್ನು ಕಂಡುಕೊಂಡಾಗ ಅದನ್ನು ಒಂದು ಹವ್ಯಾಸವನ್ನಾಗಿಯಷ್ಟೇ ನೋಡುವ ಮಟ್ಟಕ್ಕೆ ಇಳಿಸಬಾರದು, ಅದು ಸಮಾಜಕ್ಕೆ ಹೆಚ್ಚು ಒಪ್ಪಿತವಾದದ್ದು ಕೂಡ. ಎಲ್ಲಾ ಹೆಂಗಸರೂ ವೃತ್ತಿಯಿಂದ ಕಲಾಕಾರರಾಗುವುದು ಸಾಧ್ಯವಿಲ್ಲ. ಅಲ್ಲದೆ ಅನೇಕ ಹೆಂಗಸರು ಅದನ್ನು ಬಿಡುವಿನ ವೇಳೆಯ ಕೆಲಸವನ್ನಾಗಿ ಮಾಡುತ್ತಾರೆ. ಅದು ಉಪಯುಕ್ತ ಕೂಡ. ಉದಾ : ಗೇಬ್ರಿಯಲ್ ಡೈಟ್ರಿಚ್, ಇದು ಹೆಂಗಸರಿಗೆ ತಮ್ಮ ಸ್ವಂತಿಕೆಯನ್ನು ನಿರೂಪಿಸಲು ಸಹಾಯವಾಗುತ್ತದೆ. ಇದರಿಂದ ಅನೇಕ ಬಗೆಯ ಪ್ರತಿಮೆಗಳು ಹೊರಬರುವ ಸಾಧ್ಯತೆ ಇದೆ. "ಎಲ್ಲಾ ಹೆಂಗಸರಿಗೂ ವಿಮೋಚನೆ ಎನ್ನುವುದು ಒಂದೇ ರೀತಿಯಲ್ಲಿರುವುದಿಲ್ಲ" ಎನ್ನುವ ಗೆಳತಿಯೊಬ್ಬಳ ಮಾತು ಪೂರ್ತಿ ಸರಿಯಾಗಿದೆ. ಆದ್ದರಿಂದ ಬೇರೆ ಬೇರೆ ಹೆಂಗಸು ಬೇರೆ ಬೇರೆ ರೀತಿಯ ಕಲೆಗಳನ್ನು ಸೃಷ್ಟಿಸುವಂತಾಗಬೇಕು. ಪ್ರತಿ ಹೆಂಗಸೂ ತನ್ನ ಬದುಕಿನ ಅನುಭವಕ್ಕೆ ಜೀವ ಕೊಡಬೇಕು. ಸಾಂಪ್ರದಾಯಿಕ ತಾಯಾಗಿರುವುದು ಅತ್ಯಂತ ಅರ್ಥಪೂರ್ಣವೆಂದು ಅನ್ನಿಸಿದರೆ ಆಕೆ ಅದನ್ನು ಅಭಿವ್ಯಕ್ತಿಸಬೇಕು. ಅದು ಕೂಡ ಫೆಮಿನಿಸ್ಟ್ ಕಲೆಯೇ ಆಗುತ್ತದೆ. ಬೇರೊಂದು ಹೆಣ್ಣಿಗೆ ಇದು ದಮನಕಾರಿಯಾಗಿ ಕಾಣಬಹುದು. ಆಗ ಆಕೆ ಬೇರೆ ರೀತಿಯ ಹೆಣ್ಣನ್ನು ಚಿತ್ರಿಸಬಹುದು. ಹೆಂಗಸರು ತಾವು ಕಂಡಂತೆ ಮತ್ತು ಅನುಭವಿಸಿದಂತೆ ಗಂಡಸರನ್ನು ಚಿತ್ರಿಸಬೇಕು ಹೆಂಗಸರ ಪ್ರಶ್ನೆಗೆ ಸಂಬಂಧಿಸದ ಕಲೆಯನ್ನು ಅವರು ಮಾಡಬಹುದು ಆದರೆ ಅವರು ಅದನ್ನು ಹೆಂಗಸರಾಗಿ ಮಾಡುವುದು ಮುಖ್ಯ ಅಷ್ಟೆ.

ಪ್ರ : ಪಾಶ್ಚಿಮಾತ್ಯ ಸ್ತ್ರೀ ವಿಮೋಚನಾ ಚಿಂತನೆಯು ಭಾರತಕ್ಕೆ ಎಷ್ಟರಮಟ್ಟಿಗೆ ಪ್ರಸ್ತುತವಾಗಬಲ್ಲುದು ?

ಉ : ಪಾಶ್ಚಿಮಾತ್ಯ ಸ್ತ್ರೀ ವಿಮೋಚನಾವಾದದ ಅಧ್ಯಯನ ಮಾಡುವುದು ಯೋಗ್ಯವೇ. ಆದರೆ ಅದನ್ನು ಭಾರತೀಯ ದೃಷ್ಟಿಕೋನ ಮತ್ತು ಸಂಪ್ರದಾಯಗಳ ಜೊತೆ ಮೇಳೈಸುವುದು ಬಹಳ ಅವಶ್ಯಕ. ಪಶ್ಚಿಮ, ಪೂರ್ವಗಳೆರಡೂ ಪರಸ್ಪರರಿಂದ ಕಲಿಯಬೇಕಾದ್ದಿದೆಯೆಂದು ನನಗನ್ನಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಇಲ್ಲದಂತಹ ದುರ್ಗೆ, ಮಹಾದೇವಿಯಕ್ಕಾ ಸೀತೆಗಳಂತಹ ಶಕ್ತಿಶಾಲಿ ಪ್ರತಿಮೆಗಳಿವೆ. ಪಾಶ್ಚಿಮಾತ್ಯ ಸ್ತ್ರೀ ವಿಮೋಚನಾವಾದ ಎಲ್ಲಿ ತಪ್ಪಿದೆ ಎಂದು ನೋಡಬೇಕಾದ್ದು ಅವಶ್ಯಕ.

ಸೀತೆಯ ಚಿತ್ರಣ ಪಾಶ್ಚಾತ್ಯ ಸ್ತ್ರೀ ವಿಮೋಚನಾ ಹಿನ್ನೆಲೆ ಮತ್ತು ಭಾರತೀಯ ಸಂಸ್ಕೃತಿಗಳೆರಡರ ಸಂಯೋಗದಿಂದ ಹೊರಬಂದದ್ದು. ಪಾಶ್ಚಾತ್ಯ ಫೆಮಿನಿಸ್ಟ್ ಥಿಯಾಲಜಿ ಸಂಪ್ರದಾಯದ ಪುನರ್‌ವ್ಯಾಖ್ಯೆಗೆ ಏನನ್ನಾದರೂ ಕೊಡಬಲ್ಲುದು, ಆದರೆ ವಿಧಾನ ಉಪಯುಕ್ತವಾಗಬಲ್ಲುದು ಆದರೆ ಯಾವುದನ್ನೂ ಸಾಮಾನ್ಯೀಕರಿಸುವುದನ್ನು ನಾನು ಒಂದಿಷ್ಟೂ ಇಷ್ಟಪಡುವುದಿಲ್ಲ. ಪ್ರತಿ ಹೆಣ್ಣು ತನ್ನದೇ ದಾರಿಯನ್ನು ಕಂಡುಕೊಳ್ಳಬೇಕು. ವರ್ಜೀನಿಯಾ ವುಲ್ಫ್, ಜಾರ್ಜ್ ಈಲಿಯಟ್, ಸಿಮನ್ ದಿ ಬುವಾ ಇಲ್ಲಿ ಉಪಯುಕ್ತರು.

ಪ್ರ : ಕೊನೆಯದಾಗಿ ಸೀತೆಯಲ್ಲಿ ನಿಮ್ಮನ್ನು ಕಂಡುಕೊಂಡಿರುವಿರಿ. ನಿಮ್ಮ ಸೃಷ್ಟಿಯ ಸೀತೆ ನಿಮಗೆ ತೃಪ್ತಿ, ಸಮಾಧಾನಗಳನ್ನು ತಂದಿದ್ದಾಳೆಯೇ ?

ಉ , ಹೌದು ಮುಖ್ಯವಾಗಿ ಸೃಷ್ಟಿಶೀಲತೆ ಮತ್ತು ಆತ್ಮವಿಶ್ವಾಸಗಳನ್ನು ತುಂಬಿದ್ದಾಳೆ. ಅವಳು ನನ್ನ ಮಟ್ಟಿಗೆ ಸರಿಹೊಂದುತ್ತಾಳೆ. ಎಲ್ಲರಿಗೂ ಅಲ್ಲದಿರಬಹುದು ನನ್ನ ನಿರೂಪಣಾಕ್ರಮ ಪಥ್ಯವನ್ನವಲಂಬಿಸಿದೆ. ಸೀತೆ ಏನಾದರೂ ಕೊಡಬಲ್ಲಳು ಎಂಬುದು ಅರಿವಿಗೆ ಬಂದ

ನಂತರವೇ ನನಗೆ ಅಪಾರವಾದ ಪುನರ್ವ್ಯಾಖ್ಯೆ ಸಾಧ್ಯ ದದ್ದು.

ಪ್ರ : ನಿಮ್ಮ ಸಂಪರ್ಕದ ವೈಚಾರಿಕ, ಪ್ರಗತಿಪರ ಭಾರತೀಯ ಹೆಂಗಸರು ನಿಮ್ಮ ಸೃಜನಶೀಲತೆಯನ್ನು ಹೇಗೆ ಸ್ವೀಕರಿಸಿದ್ದಾರೆ ?

ಉ : ಅನೇಕರು ಇದರಲ್ಲಿ ಧಾರ್ಮಿಕ ಅಂಶಗಳು ಹೆಚ್ಚಾಗಿದೆಯೆಂದು ಹೇಳಿದ್ದಾರೆ. ಹಲವರು ಅದನ್ನು ಮೊರಲಿಸ್ಟಿಕ್ ಅಂದಿದ್ದಾರೆ. ವ್ಯಕ್ತಿ ಧಾರ್ಮಿಕತೆಯತ್ತ ಪರವೋ, ವಿರೋದವೋ ಎನ್ನುವುದನ್ನು ನೇತ್ಯಾತ್ಮಕ ಅಂಶವೆಂದು ಭಾವಿಸುವವರೇ ಹೆಚ್ಚು. ಬೇರೆ ಬೇರೆಯ ವರು ಬೇರೆ ಬೇರೆ ಪೇಂಟಿಂಗ್‌ಗಳನ್ನು ಇಷ್ಟಪಡುತ್ತಾರೆ. ಹಲವು ಗಂಡಸರಿಗೆ ರಾಮ ಕಂಗೆಟ್ಟು ಕೂರುವ ಪೇಂಟಿಂಗ್ ಹಿಡಿಸಿದೆ. ಒಟ್ಟಿನಲ್ಲಿ ಹಿಂದೂ ಮತ್ತು ಕ್ರಿಸ್ಚಿಯನ್ನರಿಬ್ಬರೂ ಇದರಿಂದ ಏನಾದರೂ ಪಡೆಯಲು ಸಾಧ್ಯವಾಗಿದೆ.

. . . . .

ಈ ಲೇಖನದಲ್ಲಿ ಆಗಿರುವ ತಪ್ಪುಗಳನ್ನು ಹೀಗೆ ಸರಿಪಡಿಸಿ ಓದಿಕೊಳ್ಳಿ. ಪ್ರತಿಕ್ರಿಯೆ ಎಂಬುದನ್ನು ಪ್ರಕ್ರಿಯೆಂದು, ಮುಕ್ತಿ ಎಂಬುದನ್ನು ಮತ್ತೆಯೆಂದು, ಅರೆಮುಕ್ತತೆ ಎಂಬುದನ್ನು ಅತಿಮುಕ್ತತೆಯಂದು.

(ಈ ಅಭಿಪ್ರಾಯಗಳು ಲೇಖಕಿಯದು. ಪೋಲಂಕಿಯವರು "ಸೀತಾಯಣ" ದಲ್ಲಿ ಸೀತೆಯನ್ನು ಕಮೋಡಿಟಿಯಾಗಿ ಚಿತ್ರಿಸುವ ಪರಮಾವಧಿ ತಲುಪಿದರೆ, ಕನ್‌ಸ್ಯೂಮರ್ ಸಮಾಜದ ಹತಾಷೆಯಲ್ಲಿ ಹುಟ್ಟಿಕೊಂಡಿರುವ ಇಲ್ಲಿಯ ಸೀತೆಯ ಚಿತ್ರಣ ಸಂಪ್ರದಾಯ ಮೌಲ್ಯಗಳನ್ನು ಬಲಪಡಿಸುವಂತಹದು. ಈ ರೀತಿಯ ಪುನರ್ ವಿಮರ್ಶೆಗಳು ಎಷ್ಟು ಪ್ರಸ್ತುತ ಎಂಬುದಕ್ಕೆ ನಿಮ್ಮ ಅಭಿಪ್ರಾಯಗಳನ್ನು ಸ್ವಾಗತಿಸುತ್ತೇವೆ.)

ಸಂ. ಮ.

ಓದುಗರ ವಿಭಾಗ :

ಮಾನವಿ ನಿಜಕ್ಕೂ ಶೋಷಣೆಗೆ ಒಳಪಟ್ಟ ಸ್ತ್ರೀಯರ ಮನೆ ಮನವನ್ನು ತಲುಪಿ ಚೇತನವನ್ನು ತುಂಬಿರುತ್ತಾಳೆ. ಮಾನವಿಯ ೬ ೭ ಸಂಚಿಕೆಯಲ್ಲಿ "ನೀವೂ ಏನು ಹೇಳುತ್ತೀರಿ" ಕವನ ಚೆನ್ನಾಗಿ ಮೂಡಿ ಬಂದಿದೆ. ಪರಿಶುದ್ಧ ಸಂಪಾದಕೀಯ ಹಾಗೂ ಲೇಖನಗಳಿಂದ ಮಾನವಿ ನಿಜಕ್ಕೂ ಯಶಸ್ವಿಯಾಗುತ್ತಾಳೆ.

ರತ್ನಾತನಯಮಂಜು, ಸಿರಸಿ.

ಮಾನವಿಯ ಉದ್ದೇಶ ತಿಳಿದು ಅಭಿಮಾನವೆನಿಸಿತು. ನಿಮ್ಮ ಪ್ರಯತ್ನ ಫಲಕಾರಿಯಾಗಲಿ ಎಂದು ಆಶಿಸುತ್ತೇನೆ.

ಶ್ರೀಮತಿ ಅನಸೂಯಾದೇವಿ ಬೆಂಗಳೂರು.

ಶತಮಾನಗಳಿಂದ ಸ್ತ್ರೀಯರ ಮೇಲೆ ನಡಿಯುತ್ತಿರುವ ಶೋಷಣೆ,ಅನ್ಯಾಯ, ದೌರ್ಜನ್ಯ ಅತ್ಯಾಚಾರ ಮುಂತಾವುಗಳನ್ನು ಬೆಳಕಿಗೆ ತರುವ ಉದ್ದೇಶದಿಂದ ಈ ಪತ್ರಿಕೆಯನ್ನು ಹೊರಡಿಸಿದ್ದು ನಿಜವಾಗಿಯೂ ಶ್ಲಾಘನೀಯ

ಸ್ತ್ರೀಗೆ ತನ್ನದೇ ಆದ ಸ್ವತಂತ್ರ ಅಸ್ಥಿತ್ವವೊಂದಿದೆ ಎಂಬುದನ್ನ ಏಕೆ ಈ ಸಮಾಜ ತಿಳಿಯುತ್ತಿಲ್ಲ. ಆಕೆಯನ್ನು ತಮ್ಮ ಭೋಗದ ವಸ್ತುವೆಂದು ಭಾವಿಸುವ ಗಂಡಸು ತಮ್ಮ ಕೆಲಸದ ಆಳು ಎಂಬಂತೆ ಕಾಣುವ ಅತ್ತೆ. ಇಂತಹವರೇ ತುಂಬಿರುವ ಈ ಸಮಾಜದಲ್ಲಿ ಬಾಳುವ ಹೆಣ್ಣಿಗೆ ಜೀವನ ಎಂದರೆ ಬೇಸರ ತರುವ ಅಂಶವಾಗುವುದರಲ್ಲಿ ಏನೂ ವಿಶೇಷವಿಲ್ಲ. ಹೆಣ್ಣು ಗಂಡು ಸಮಾನ ಹಕ್ಕು ಬೇಕೆಂದು ನಾನೇನು ಕೇಳಿಕೊಳ್ಳುತ್ತಿಲ್ಲ. ಆದರೆ ಆಕೆಗೂ ಒಂದು ವ್ಯಕ್ತಿತ್ವವಿದೆಯೆಂದು ತಿಳಿಯುತ್ತಿಲ್ಲ ಎಂಬುದೇ ನೋವಿನ ಸಂಗತಿ. ಹಿಂದಿನ ಸಂಚಿಕೆಯಲ್ಲಿ ಯಾವ ಪಾಪಕೆ ಸಾವು ಕಾದಿದೆ ವಿ. ಆರ್. ಶುಭಾ ಮತ್ತು "ಸಂವೇದನೆ" ಸಾವಿತ್ರಿ ಜಿ. ಕೆ. ಮನವನ್ನು ಕಲಕಿದವು.


ಸರಸ್ವತಿ ಚಂಬಾಪುರ ಕನ್ಯಾನ.

ಶೋಷಣೆಗೆ ಒಳಗಾದ ಎಲ್ಲಾ ಜನರಂತೆ ಸ್ತ್ರೀಯರು ಮೌನ ಸಂಸ್ಕೃತಿಯಲ್ಲಿ ಬದುಕುತ್ತಾರೆ.

ರೋಸ್ ಮೇರಿ

ಸಂವೇದನಾಶೀಲ ಲೇಖಕಿ

ಮಹಾದೇವಿ ವರ್ಮಾ



ಮಧ್ಯಕಾಲೀನ ಸಾಹಿತ್ಯಯುಗದಲ್ಲಿ ಮೊದಲ ಬಂಡಾಯಗಾರಳಾಗಿ ಮೀರಾಬಾಯಿಕಂಡು ಬರುತ್ತಾಳೆ. ಮಹಾದೇವಿ ವರ್ಮಾಳನ್ನು ಅಧುನಿಕ ಬಂಡಾಯಗಾರ್ತಿಯೆಂದು ಕರೆದರೆ ತಪ್ಪಾಗಲಾರದು. ಇವರ ಕವ್ಯಗಳಲ್ಲೂ ಅದೇ ರೀತಿಯ ಪ್ರೇಮ ದುಃಖ, ಮಿಶ್ರಿತ ಎಳೆಗಳೂ, ಚಿತ್ರಗಳು ಅನಾಮಿಕ ಪ್ರಿಯತಮನಿಗೋಸ್ಕರ ಕಾಯುವ ತುಡಿತ ಸೃಜನಶೀಲತೆಯ ಜೀವಾಳ.

ಸಿ. ಜಿ. ಉಷಾದೇವಿ

೧೯೦೭ ರಂದು ಉತ್ತರ ಪ್ರದೇಶದ ಫರೂಕಾಬಾದ್ ನಗರದಲ್ಲಿ ಮಹಾದೇವಿ ವರ್ಮಾ ಜನ್ಮ ತಾಳಿದರು. ತಂದೆ ಡಾ॥ ಗೋವಿಂದ ಪ್ರಸಾದ್. ತಾಯಿ ಶ್ರೀಮತಿ ಹೇಮಾರಾಣಿ. ಮಹಾದೇವಿಯವರ ಉನ್ನತ ಶಿಕ್ಷಣ ಅಲಹಾಬಾದ್ ವಿಶ್ವವಿದ್ಯಾ ನಿಲಯದಲ್ಲಿ ಆಯಿತು. ಪ್ರಯಾಗದ ಮಹಿಳಾ ವಿದ್ಯಾ ಪೀಠದ ಪ್ರಾಚಾರ್ಯರಾಗಿ ಕೆಲಸ ನಿರ್ವಹಿಸಿದರು. ಮಹಾದೇವಿಯವರು ಅನೇಕ ಗದ್ಯ ಪದ್ಯ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಕಾವ್ಯ ಸಂಗ್ರಹಗಳು ನಿಹಾರ, ರಶ್ಮಿ, ನೀರಜಾ. ಸಂಧ್ಯಾಗೀತ ಮತ್ತು ದೀಪಶಿಖಾ. ಗದ್ಯ ಬರಹಗಳು: ಶೃಂಖಲಾ ಕಿ ಕಡಿಯಾ. ಪಥ್ ಕೇ ಸಾಥಿ ಮತ್ತು ಮೇರಾ ಪರಿವಾರ್. ಲಲಿತ ಪ್ರಬಂಧಕಾರಳಾಗಿ, ಚಿತ್ರಕಲಾವಿದೆ, ಕವಯಿತ್ರಿಯಾಗಿ ಶಿಕ್ಷಣ ತಜ್ಞೆಯಾಗಿ ಕಂಡು ಬರುತ್ತಾರೆ ಇವರ "ಯಾಮಾ" ಎನ್ನುವ ಕವನ ಸಂಕಲನಕ್ಕೆ ೧೯೮೩ರ ಜ್ಞಾನಪೀಠ ಪ್ರಶಸ್ತಿ ಲಭ್ಯವಾಗಿದೆ. "ದೀಪ್ತ" ಮಹಾದೇವಿಯವರ ಕಾವ್ಯದ ಸಂಗ್ರಹವಾಗಿದೆ. ತಾನು "ಬಂಧಿ" ತಳು ಎಂಬ ಪ್ರಜ್ಞೆಯ ಜೊತೆಯಲ್ಲೇ ಖಿನ್ನತೆಯೊಡನೆ ಬದುಕನ್ನು ಸಾಗಿಸುವ ವಿಶ್ವಾಸ ಹಾಗೂ ಅದರೊಡನೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ಸ್ವತಂತ್ರಗೊಳ್ಳುವ ಶಕ್ತಿಯನ್ನು ಪಡೆದಿದ್ದಾರೆ. ಅವರ ಕಾವ್ಯಗಳಲ್ಲಿ ವ್ಯಕ್ತಿಗತ ಕನಸುಗಳ ಮತ್ತು ಆಶೋತ್ತರಗಳ ವಿಷಣ್ಣ ಪದ್ಯಗಳನ್ನು ರಚಿಸಿದ್ದರು. ತಾತ್ವಿಕ ಚಿಂತನೆ ಮತ್ತು ಅನುಭಾವ ಸಾಹಿತ್ಯಕ್ಕಷ್ಟೇ ಸೀಮಿತಗೊಳ್ಳದೆ ವ್ಯಕ್ತಿ ವಿಶಿಷ್ಟತೆಯನ್ನು ಪಡೆದುಕೊಂಡಿವೆ. ವೇದ, ಉಪನಿಷತ್ತುಗಳನ್ನು ಅನುವಾದ ಮಾಡಿರುವುದರ ಜೊತೆಗೆ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ ಅಪಾರ. ಉಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಹೆಣ್ಣಿನ ಸ್ಥಿತಿ ಗತಿಯ ವಿಶ್ಲೇಷಣೆ ಇದ್ದು, ಹೆಣ್ಣಿನ ನೋವನ್ನು ಪ್ರಚೋದಕ ರೂಪಕಗಳಲ್ಲಿ ಹಿಡಿದಿರಿಸಿದ್ದಾರೆ.

ಮಧ್ಯಕಾಲೀನ ಸಾಹಿತ್ಯ ಯುಗದಲ್ಲಿ ಮೊದಲು ಬಂಡಯಗಾರಳಾಗಿ ಮೀರಬಾಯಿ ಕಂಡುಬರುತ್ತಾಳೆ. ಮಹಾದೇವಿವರ್ಮಾ ಅವರನ್ನು "ಆಧುನಿಕ ಮೀರ" ಎಂದು ಕರೆದರೆ ತಪ್ಪಾಗಲಾರದು. ಇವರ ಕಾವ್ಯಗಳಲ್ಲೂ ಅದೇ ರೀತಿಯ ಪ್ರೇಮದ ದುಃಖಮಿಶ್ರಿತ ಎಳೆಗಳು, ಪ್ರಕೃತಿಚಿತ್ರಗಳು, ಅನಾಮಿಕ ಪ್ರಿಯತಮನಿಗೋಸ್ಕರ ಕಾಯುವ ತುಡಿತ ಅವರ ಸೃಜನಾತ್ಮಕತೆಯ ಜೀವಾಳ. ಸಮಕಾಲೀನ ಮಧ್ಯಮವರ್ಗದ ಹೆಣ್ಣಿನ ಪ್ರಾಮಾಣಿಕ ಅನುಭವಗಳಿಗೆ ದಟ್ಟ ಪ್ರಾಕೃತಿಕ ರೂಪಕಗಳು: ಉದಾ: ಮಂಜು, ಹುಣ್ಣಿಮೆ ರಾತ್ರಿ, ಸಮುದ್ರದ ಅಲೆಗಳು, ವಿಶಾಲ ದಿಗಂತ ಮುಂತಾದವನ್ನು ಬಳಸಿಕೊಂಡಿದ್ದಾರೆ.

ಹಿಂದಿ ಸಾಹಿತ್ಯ ಕ್ಷೇತ್ರದಲ್ಲಿ ಮಹಾದೇವಿ ವರ್ಮಾ "ಛಾಯಾವಾದಿ ಕವಯಿತ್ರಿ" ಯಾಗಿ ಗುರುತಿಸಲ್ಪಟ್ಟಿದ್ದಾರೆ. ಮಹಾದೇವಿಯವರಿಗೆ ಮಹಿಳೆಯರ ವಿಮೋಚನೆ ಆಕೆಯ ಸಾಹಿತ್ಯದ ವಸ್ತುವಷ್ಟೇ ಅಲ್ಲ, ಜೀವನದ ಪರಮಗುರಿ ಕೂಡ ಆಗಿತ್ತು. ಮಹಿಳೆಯ ಸರ್ವತೋಮುಖ ಅಭಿವೃದ್ಧಿಗೋಸ್ಕರ ಶೈಕ್ಷಣಿಕ, ಕಲಾತ್ಮಕ ಹಿನ್ನೆಲೆಯಲ್ಲಿ ದುಡಿದಂತಹ ವ್ಯಕ್ತಿ.

ಅಮೂರ್ತ ಮಿಲನ

ನೀನು ಮರೆಯಾದೆಯೆಂದು
ಗೊಣಗುಟ್ಟಲಿಲ್ಲ ನನ್ನ ಹೃದಯ
ನನ್ನ ಅಂಗಾಲನ್ನು ಚುಚ್ಚಿದ ಮುಳ್ಳುಗಳನ್ನು
ನಾನೆಂದೂ ಲಕ್ಷಿಸಲಿಲ್ಲ
ನನ್ನ ನಿಟ್ಟುಸಿರ ಹುಚ್ಚೆದ್ದ ಅಲೆಗಳಲ್ಲಿ ನಾನು
ಮುಳುಗಿ ಹೋಗಿದ್ದೆ.

ಬೀಸು ಬಿರುಗಾಳಿಯ ಸಮುದ್ರದಲ್ಲಿ
ನಗುತ್ತಾ ಬಿಟ್ಟೆ ನನ್ನ ದೋಣಿಯನ್ನು
ಕೇಳಲಿಲ್ಲ ನಿನ್ನನ್ನು ನಾನು
ನಾವೆಲ್ಲಿ ಭೇಟಿಯಾಗುವುದೆಂದು.

ನೊರೆತುಂಬಿ ಉದ್ರೇಕಿತ ಸಮುದ್ರ
ನನ್ನ ಹಾದಿಯನ್ನು ನಿಗೂಢಗೊಳಿಸಿದಾಗ
ಬಲವಾದ ಬಿರುಗಾಳಿ ಕಗ್ಗತ್ತಲೆಯ ಬೆಟ್ಟಗಳನ್ನು
ತನ್ನೊಡನೆ ಹೊತ್ತು ತಂದಾಗ
ವಿಫಲಳಾಗಲಿಲ್ಲ ನಾನದರ ಅಲೌಕಿಕ
ಸಂದೇಶವನ್ನು ಓದಲು.
ಅರ್ಥಗರ್ಭಿತವಾಗಿವೆ ನನ್ನ ಕನಸುಗಳು
ಯಾತನೆಯನ್ನು ಮೂರ್ತಿವೆತ್ತವಳು ನಾನು
ಉಸುಕಿನ ಮುತ್ತುಗಳು ನನ್ನ ಕಣ್ಣುಗಳು
ಭಗ್ನ ಮಿಂಚುಗಳು ನನ್ನುಸಿರು
ಉತ್ತುಂಗಕ್ಕೇರಿಸುತ್ತೇನೆ ನಾನು ಈ ಮಣ್ಣನ್ನು
ನಿನ್ನೊಂದಿಗೆ ಮತ್ತು ಉರಿಯುವ ಜ್ವಾಲೆ
ಯೊಂದಿಗೆ ಬೆರೆಯುವುದರಿಂದ

ಹರುಷದ ಕಂಪನ ನನ್ನ ನರನಾಡಿಗಳಲ್ಲಿ
ಹರಿಯುತ್ತಿದೆ
ಹಿಗ್ಗುತ್ತದೆ ನನ್ನ ಹೃದಯ ನೀಕಳಿಸಿದ
ಖಾಲೀ ಕ್ಷಣಗಳಿಗಾಗಿ
ಜೇನಿನಿಂದ ತುಂಬಿ ಹಂಚುತ್ತೇನೆ
ನಾನದನ್ನ ಇತರರಿಗೆ. ಆದರೆ
ಕಿರುನಗೆಯ ಜಗತ್ತಿಗಾಗಿ
ಹೃದಯ ಸುಡುವ ನನ್ನಾಸೆ
ಅಪೂರ್ಣವಾಗಿ ಉಳಿಯುತ್ತದೆ.
ಮಣ್ಣಿನ ಸಂಗೀತದಲ್ಲಿ ಪ್ರತಿಫಸಿಲ
ಅರ್ಭಟದೊಂದಿಗೆ ಬಾನನ್ನು ಮುತ್ತಿದ
ಕೆಲವೊಮ್ಮೆ ಈ ತುದಿಯಲ್ಲಿ ಕೆಲವೊಮ್ಮೆ ಆ ತುದಿ
ಯಲ್ಲಿ ನಿನ್ನ ಹೆಜ್ಜೆಗಳ ಸದ್ದನ್ನು ಕೇಳಿದಾಗ
ಬೆಂಕಿ ಕಿಡಿಯ ನನ್ನ ಕಣ್ಣೀರಿನ
ಹೂಗಳನ್ನು ಅರ್ಪಿಸುತ್ತೇನೆ.

ಪ್ರೀತಿ ಕನಸು

ಸುಂದರರಾದವರೊಬ್ಬರ ಕನಸುಗನ್ನು ನಾನು
  ಕಾಯುತ್ತಿದ್ದೇನೆ ನನ್ನ ಕನಸುಗಳಲ್ಲಿ
  ಅಚ್ಚರಿ ಪಡುತ್ತೇನೆ ನಾನು
  ಮಿಂಚು ಗುಟ್ಟಾಗಿ ಅಳುವಂತೆ
ಕತ್ತಲ ತೊಡಕಿನ ಒಣಗಳಲ್ಲಿ ನಾನು ಕಳೆದು ಹೋಗಿದ್ದೇನೆಂದು ಅವರೇಕೆ ಹೇಳುತ್ತಾರೆ
ಅವನ ಕಣ್ಣೀರಿನಲ್ಲಿ ಹೀರುತ್ತೇನೆ ನಾನು ಅವನ ಪ್ರೀತಿಯನ್ನು

ಚುಚ್ಚುತ್ತವೆ ಮುಳ್ಳುಗಳು ಮೃದುವಾಗಿ ನನ್ನ ಅಂಗಾಲನ್ನು
ಸನ್ನೆ ಮಾಡಿ ಕರೆಯುತ್ತಿವೆ ನನ್ನ ಬಾನಿನ ಮೋಡಗಳು
ಉಕ್ಕುಕ್ಕಿ ಹರಿಯುತ್ತಿದೆ ಪ್ರವಾಹ
  ಉಕ್ಕುಕ್ಕಿ ಹರಿಯುತ್ತಿದೆ ಪ್ರವಾಹ
ಕಂಪಿಸುತ್ತಿರುವ ನನ್ನಡಿಯ "ಪ್ರೀತಿಯ" ಪೂಜೆಗಾಗಿ
  ಬಿರುಗಾಳಿ ಬೀಸಿ ತರುತ್ತಿದೆ ನನ್ನ ಬಳಿ
  ಸುಂದರರಾದವರೊಬ್ಬರ ಕಂಪನವನ್ನು

ಕಣ್ಣುಗಳು ಚಿವುಟುತ್ತವೆ ಆಕಾಶವನ್ನು
  ಅಡಗಿದೆ ಹೃದಯ ಸೆಳೆವ ಮಿಂಚಿನಲ್ಲಿ
ಯಾರೋ ಬಂಧನ ಮುಕ್ತರು ನನ್ನ ಮೈತುಂಬಾ
  ಹರಡಿದ್ದಾರೆ ಸುಗಂಧದ ಪರಿಮಳವನ್ನು
  ನನ್ನ ಮೇಲಿರುವ ಅನುಗ್ರಹದ ಸನ್ನಿಧಿಯಲ್ಲಿ
ಮನವೇಕೆ ಅರಳುತ್ತದೆಯೆಂದು ಅಚ್ಚರಿ ಪಡುತ್ತೇನೆ.

ಆದಿ ಅಥವಾ ಅಂತ್ಯಗಳೊಡನೆ ಆಡುವುದಕ್ಕಿಂತ
  ಒಬ್ಬಂಟಿಯಾಗಿ ಹಾದಿಗುಂಟ ನಡೆಯುವುದಷ್ಟೆ ನನ್ನ ಬದುಕು
ಸಂಗಮಕ್ಕೆ ಕಿರುಗುಡುವ ನನ್ನ ಸುಪ್ತ ಬಯಕೆಗಳು
  ಅಜ್ಞಾತನೊಂದಿಗಿನ ನನ್ನ ಪ್ರೀತಿಯನ್ನು ನಿಜಗೋಸುತ್ತದೆ.
ಯಾವುದೊ ಪ್ರಕ್ಷುಬ್ಧ ಪ್ರಪಂಚ ನನ್ನೆದುರಿಗೆ ಜೀವ ತಳೆಯುತ್ತದೆ.

ಮೂಲ : ಮಹಾದೇವಿ ವರ್ಮಾ
ಕನ್ನಡಕ್ಕೆ ರಾಜೇಶ್ವರಿ ಎಚ್ ಎಸ್

ಗಾಂಧಿ ದೃಷ್ಟಿಯಲ್ಲಿ ಹೆಣ್ಣು

ವಿವಾಹದ ವಯಸ್ಸನ್ನು ನಿರ್ಧರಿಸುವ ಮಸೂದೆಯ ಬಗ್ಗೆ ನನಗೆ ಏನೂ ತಿಳಿದಿಲ್ಲ. ಸಮ್ಮತಿಯ ವಯಸ್ಸನ್ನು ೧೪ ರಿಂದ ೧೬ ಕೆ ಏರಿಸಬೇಕೆಂದು ನಾನು ಪ್ರಬಲವಾಗಿ ಸಮರ್ಥಿಸುತೇನೆ. ಮಸೂದೆಯ ವಿಧಿಗಳ ವಿಷಯವಾಗಿ ನಾನು ಏನನ್ನೂ ಹೇಳದಿದ್ದರೂ ಪುರುಷನ ಕಾಮ ಪ್ರಕೋಪದಿಂದ ಎಳೆಯ ವಯಸ್ಸಿನ ಬಾಲಕಿಯರನ್ನು ಪಾರುಮಾಡಲುದ್ದೇಶ ಹೊಂದಿರುವ ಯಾವ ಚಳುವಳಿಯನ್ನಾದರೂ ನಾನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತೇನೆ. ವಿವಾಹ ಸಂಸ್ಕಾರವೆಂದು ಕರೆಯಲ್ಪಡುವುದರಿಂದ ೧೪ ನೇ ವಯಸ್ಸಿನಲ್ಲಿಯೂ ನಿಷೇಕಪ್ರಸ್ತಕ್ಕೆ ನ್ಯಾಯಬದ್ಧ ಅವಕಾಶಕೊಬಾರದು. ಏಕೆಂದರೆ ಆ ವಯಸ್ಸಿನಲ್ಲೂ ಅದು ಅನೈತಿಕ ಮತ್ತು ಅಮಾನುಷಕ ಕ್ರಿಯೆ ಎಂದು ನನ್ನ ಖಚಿತವಾದ ಅಭಿಪ್ರಾಯ. ಯಾವುದು ಸ್ವಾಭಾವಿಕವಾಗಿಯೇ ಅನೀತಿ ಅನ್ನಿಸುತ್ತದೆಯೋ ಅದನ್ನು ಸಮರ್ಥಿಸಲು ಮತ್ತು ಪರಿಶುದ್ಧವೆನ್ನಲು ಅನುಮಾನಗ್ರಸ್ತ ಆಧಾರವುಳ್ಳ ಸಂಸ್ಕೃತ ವಾಕ್ಯಗಳನ್ನು ಉದಹರಿಸುವುದು ಯುಕ್ತವಲ್ಲ. ಕೇವಲ ಬಾಲ್ಯದಲ್ಲಿಯೇ ತಾಯಂದಿರಾಗುವ ಅನೇಕರ ಆರೋಗ್ಯ ನಾಶವಾಗಿರುವುದನ್ನೂ ನಾನು ಕಂಡಿದ್ದೇನೆ. ಇದರ ಘೋರತೆಯ ಜತೆಗೆ ಬಲಾತ್ಕಾರ ಬಾಲವೈಧವ್ಯವೂ ಕೂಡಿದರೆ, ಮಾನವೀಯ ದುರಂತ ಪರಿಪೂರ್ಣವಾಗುತ್ತದೆ. ಆದುದರಿಂದ ಈ ಸಮ್ಮತಿಯ ವಯಸ್ಸನ್ನು ಹೆಚ್ಚಿಸುವುದಕ್ಕೆ ಸಹಾಯಕವಾಗುವ ಯಾವ ಬಗೆಯ ವಿವೇಕಯುಕ್ತ ಶಾಸನವನ್ನಾದರೂ ನಾನು ಖಂಡಿವಾಗಿಯೂ ಒಪ್ಪುತ್ತೇನೆ. ಆದರೆ ಪ್ರಸ್ತುತದ ಶಾಸನವೂ ಸಾಕಷ್ಟು ಸಾರ್ವಜನಿಕ ಬೆಂಬಲವಿಲ್ಲದೆ ನಿಷ್ಫಲ ವಾದುದನ್ನು ಕಂಡು ನನಗೆ ವ್ಯಥೆಯಾಗುತ್ತದೆ. ಎಲ್ಲಾ ಸುಧಾರಣೆಯ ಕಾರ್ಯಗಳಿಗೂ ಇರುವಂಥ ಕಷ್ಟಗಳೇ ಈ ಕಾರ್ಯಕ್ಕೂ ಇದೆ. ಸತತವಾದ ಚಳುವಳಿ ಅವಶ್ಯಕ. ಇದರಿಂದ ಹಿಂದೂ ಜನತೆಯ ಮನಸ್ಸಿನ ಮೇಲೆ ನಿಜವಾದ ಪರಿಣಾಮ ಆದೀತು. ಭಾರತೀಯ ಹೆಣ್ಣುಮಕ್ಕಳನ್ನು ಅಕಾಲ ಮುಪ್ಪು ಮತ್ತು ಸಾವಿನಿಂದಲೂ ಹಿಂದೂ ಧರ್ಮ ನರಪೇತಲಗಳನ್ನು ಹುಟ್ಟಿಸಿ ಬೆಳೆಸಲು ಕಾರಣವಾಗಿದೆಯೆಂದು ಅಪವಾದದಿಂದ ಪಾರು ಮಾಡುವಂತಹ ಎಲ್ಲಾ ಘನ ಪ್ರಯತ್ನಗಳಿಗೂ ಯಶಸ್ಸು ದೊರೆಯಲೆಂದು ನಾನು ಅಪೇಕ್ಷಿಸುತ್ತೇನೆ.


ಹುಡುಗಿ, ಮಾಸಿಕ ಬಹಿಷ್ಠೆಯಾಗುವ ವಯಸ್ಸಿಗಿಂತಲೂ ಮುಂಚೆ ವಿವಾಹ ಮಾಡದಿರುವುದು ಪಾಪವೆಂದು ಹೇಳೊ ವ್ಯಕ್ತಿ, ಆತ್ಮಸಂಯಮ ಇಲ್ಲದವನು. ಮತ್ತು ದುರ್ವ್ಯಸದನಲ್ಲಿ ಮುಳುಗಿದವನು ಎನ್ನಬೇಕು ಆ ವಯಸ್ಸು ಪ್ರಾಪ್ತವಾದ ಮೇಲೂ ಕೆಲವು ವರುಷಗಳೊಳಗೆ ಹುಡುಗಿಗೆ ವಿವಾಹ ಮಾಡಬಾರದು. ಆಗ ತಾನೇ ಚಿಗುರು ಮೀಸೆ ಬರುವ ಹುಡುಗ ಸಂತಾನೋತ್ಪತ್ತಿ ಕ್ರಿಯೆ ಮಾಡಲು ಹೇಗೆ ಅಸಮರ್ಥನೊ ಹಾಗೆಯೇ ಆಗತಾನೆ ಮಾಸಿಕಬಹಿಷ್ಠೆಯಾಗುವ ಹುಡುಗಿ ಸಂತಾನ ಧರಿಸಲು ಅಸಮರ್ಥಳು.

ಈ ಬಾಲ್ಯವಿವಾಹದ ಪದ್ಧತಿ ನೀತಿಯ ದೃಷ್ಟಿಯಿಂದಲೂ ಶಾರೀರದ ದೃಷ್ಟಿಯಿಂದಲೂ ಪಾಪವೇ ಸರಿ. ಏಕೆಂದರೆ ಅದು ನಮ್ಮ ನೀತಿಯನ್ನು ಕೆಡಿಸುವುದಲ್ಲದೇ ದೈಹಿಕ ಅವನತಿಗೂ ಕಾರಣವಾಗುತ್ತದೆ. ಇಂಥ ಪದ್ಧತಿ ಪ್ರೋತ್ಸಾಹ ಕೊಡುವುದರಿಂದ ನಾವು ದೇವರಿಂದಲೂ ಸ್ವರಾಜ್ಯದಿಂದಲೂ ದೂರ ಸರಿಯುತ್ತೇವೆ. ಹುಡುಗಿಯ ಎಳೆಯ ವಯಸ್ಸನ್ನು ಪರಿಗಣಿಸದಿರುವಂತ ದೇವರ ಪರಿಗಣನೆಯಲ್ಲಿ ಇಲ್ಲದವನು.

ಸಮ್ಮತಿಯ ವಯಸ್ಸನ್ನು ಹೆಚ್ಚಿಸಲು ಶಾಸನವೂ ಪ್ರೋತ್ಸಾಹಿಸಲ್ಪಡುತ್ತಿದೆ. ಇದರಿಂದ ಯಾರೋ ಕೆಲವರನ್ನು ವಿಚಾರಣೆಗೆ ಗುರಿಪಡಿಸಲು ಸಾಧ್ಯವಾಗಬಹುದು. ಆದರೆ ಜನರಲ್ಲಿ ರೂಢಿಬದ್ಧವಾಗಿರುವ ಕೆಡುಕನ್ನು ಶಾಸನ ಪರಿಹರಿಸಲಾರದು. ಇದನ್ನು ಮಾಡಬಲ್ಲ ಶಕ್ತಿ ಪ್ರಬುದ್ಧ ಸಾರ್ವಜನಿಕಾಭಿಪ್ರಾಯ. ಇಂಥ ವಿಷಯಗಳಲ್ಲಿ ನಾನು ಶಾಸನಕ್ಕೆ ವಿರೋಧಿಯಲ್ಲ. ಆದರೆ ಸಾರ್ವಜನಿಕ ಅಭಿಪ್ರಾಯವನ್ನು ರೂಪುಗೊಳಿಸುವುದಕ್ಕೆ ನಾನು ಹೆಚ್ಚು ಪ್ರಾಶಸ್ತ್ಯ ಕೊಡುತ್ತೇನೆ.

ಬಾಲ್ಯ ವಿವಾಹದ ಕೆಟ್ಟ ಪದ್ಧತಿಯನ್ನು ಪಟ್ಟಣಗಳಲ್ಲಿ ಹರಡಿರುವಷ್ಟೇ ಹಳ್ಳಿಗಳಲ್ಲಿ ಹರಡಿದೆ.

ಪು: 30 ನೋಡಿ



ಸಂವೇದನೆ

ಇಷ್ಟೊಂದು ದೊಡ್ಡ ಮನೆಯಿದೆ ನೆಮ್ಮದಿ ಇಲ್ಲದ ಮೇಲೆ ಇಂತಹ ಮನೆ ಇದ್ರು ಏನು ಪ್ರಯೋಜನ. ಒಂದು ಗುಡಿಸಲಾದ್ರು ಪರವಾಗಿಲ್ಲ. ನನಗೆ ಬೇಕಾಗಿರುವುದು ಪ್ರೀತಿ, ಆತ್ಮೀಯತೆ. ಅದೇ ಇಲ್ಲದೆ ಮೇಲೆ ಇದನ್ನೆಲ್ಲಾ ತಗೊಂಡು ಏನು ಮಾಡ್ಬೇಕು.

ಅಷ್ಟೊಂದು ತೀವ್ರವಾದ ನೋವಿನ ಆಳದಲ್ಲೂ ಅವಳ ಕಣ್ಣುಗಳಲ್ಲಿ ಆಕರ್ಷಕವಾದ ಮಿಂಚಿನ ಸೆಳೆತವಿತ್ತು. ಅವಳ ಹಾವಭಾವಗಳಿಗೆ, ಭಾವನೆಗಳಿಗೆ ಮಾತುಗಳ ಅಗತ್ಯವೇ ಇಲ್ಲವೆನ್ನುವಷ್ಟು ಅಭಿವ್ಯಕ್ತಿ ಸಾಮರ್ಥ್ಯನ್ನು ಆಕೆ ಹೊಂದಿದ್ದಳು. ಹದಿನೆಂಟು ವರ್ಷ ವಯಸ್ಸಿನ ಈ ಬಾಲೆ ಬದುಕಿನ ಅಮಾನುಷ ಕ್ರೂರ ವಾಸ್ತವಿಕತೆಯ ಇಕ್ಕಳದ ನಡುವೆ ಸಿಲುಕಿ ಒದ್ದಾಡುತ್ತಿರುವ ಈಕೆಗೆ ಅತ್ಮೀಯ ಭಾವನಾತ್ಮಕ ಸಂಬಂಧಗಳ ತುಡಿತದ ಸೆಲೆಯೆದುರು ಇತರ ಎಲ್ಲವೂ ತೃಣಮಾತ್ರ.

ನನ್ನ ಸ್ನೇಹಿತೆಯೊಬ್ಬಳು ತನಗೆ ಅಕಸ್ಮಾತಾಗಿ ಬಸ್ಸಿನಲ್ಲಿ ಪರಿಚಯವಾದ ತನ್ನ ಸ್ನೇಹಿತೆಯ ಮನೆಗೆ ಹೋಗೋಣವೆಂದು ಕರೆದೊಯ್ದಳು. ಮನೆಯ ಹತ್ತಿರ ಬಂದಂತೆ, ಒಂದು ನಿಮಿಷ ನೀವು ಇಲ್ಲೆ ನಿಂತಿರಿ, ಮನೆಯಲ್ಲಿ ಅವರ ಅಪ್ಪ ಅಮ್ಮ ಯಾರಾದ್ರು ಇದ್ದಾರಾ ನೋಡಿಕೊಂಡು ಬರುತ್ತೇನೆ ಎಂದು ಇದ್ದಕ್ಕಿದ್ದಂತೆ ಹೇಳಿ ಹೊರಟೇ ಹೋದ್ಲು. ಕಸಿವಿಸಿಯಾದ ನನಗೆ ಇದೇನಪ್ಪ ಇವಳು ಹೀಗೆ ರಸ್ತೆಯಲ್ಲಿ ಬಿಟ್ಟು ಹೊರಟು ಹೋದ್ಲು ಅನ್ನಿಸಿದ್ರೂ ಅನಿವಾರ್ಯವಾಗಿ ಹಾಗೆ ನಿಂತಿದ್ದೆ. ನನ್ನ ಸ್ನೇಹಿತೆ, ಅವಳ ಸ್ನೇಹಿತೆಯ ಸ್ಥಿತಿಗತಿಯ ಬಗ್ಗೆ ಆಗಾಗ ಹೇಳಾತ್ತಾ ಮರುಗುತ್ತಿದ್ದಳು. ಅವಳು ಹೇಳುತ್ತಿದುದ್ದರಲ್ಲಿ ಸ್ವಲ್ಪ ಅತಿಶಯೋಕ್ತಿ ಇರಬಹುದು ಎಂದು ಕೊಳ್ಳುತ್ತಿದ್ದ ನನಗೆ ಅವಳು ಹಾಗೆ ನನ್ನನ್ನು ರಸ್ತೆಯಲ್ಲಿ ನಿಲ್ಲಿಸಿ ಹೊರಟು ಹೋಗಿದ್ದು ಒಂದು ಕ್ಷಣ ಪಿಚ್ಚೆನಿಸಿತ್ತು. ಒಂದೈದು ನಿಮಿಷದಲ್ಲಿ ವಾಪಸ್ಸು ಬಂದ ನನ್ನ ಸ್ನೇಹಿತೆ ಬನ್ನಿ ಅವಳು ಮನೆಯಲ್ಲಿಯೇ ಇದ್ದಾಳೆ ತಂದೆ ತಾಯಿ ಯಾರೂ ಮನೆಯಲ್ಲಿ ಇಲ್ಲ, ಅವರು ಯಾರಾದ್ರು ಇದ್ರೆ ಮನೆಯ ಗೇಟೊಳಗೆ ಬಿಡಲ್ಲ ಎನ್ನುತ್ತಾ ಅವರ ಮನೆಗೆ ಕರೆದೊಯ್ದಳು.

ಟಿ. ಸಿ. ಎಚ್ ಮಾಡಿ ಸರಿಯಾದ ಕೆಲಸ ಸಿಗದೆ ಮನೆಯಲ್ಲಿ ಇರುವುದಕ್ಕಿಂತ ಯಾವ ಕೆಲ್ಸಾ ಮಾಡಿದ್ರು ಪರವಾಗಿಲ್ಲ ಎಂದು ಸೇಲ್ಸ್ ಗರ್ಲಾಗಿ ಕೆಲಸ ಮಾಡುತ್ತಿರುವ ಈಕೆ ತಂದೆ ತಾಯಿಯ ನಿರ್ವಾಜ್ಯ ಮಮತೆಗಾಗಿ ಹಳಹಳಿಸುವ ಜೀವ. ಹಣದ ಮುಂದೆ ಎಲ್ಲವನ್ನು ತೃಣವಾಗಿ ಕಾಣುವ ತಾಯಿ, ಅಸಹಾಯಕನಾಗಿ ತೋರುವ ತಂದೆ. ಇವಳನ್ನು ಅಂಟಿಕೊಂಡ ತಂಗಿ ತಮ್ಮಂದಿರು. ಈ ದೊಡ್ಡದಾದ ಕಾಂಕ್ರೀಟ್ ಮನೆಯ ಗೋಡೆಗಳ ನಡುವೆ ಮನುಷ್ಯ ಸಂಬಂಧದ ತಡಕಾಟಗಳು ರಾತ್ರಿ ಕಣ್ಣು ಕಾಣದೆ ಬಿರುಸಾಗಿ ರೆಕ್ಕೆ ಬೀಸಿಕೊಂಡು ಎಲ್ಲೆಂದರಲ್ಲಿ ಡಿಕ್ಕಿ ಹೊಡೆದು ದಿಕ್ಕೆಟ್ಟ ಬಾವಲಿಗಳಂತೆ.

ಏನು ಕಾರಣ ಅಂತ ಗೊತ್ತಿಲ್ಲ. ಹಣ, ಹಣ ಅಂತ ಯಾವಾಗ್ಲೂ ಸಾಯ್ತಾರೆ. ತಂದೆ ತಾಯಿ ಇಬ್ರುದುಡೀತಾರೆ. ಅಮ್ಮ ಅಳತೇ ಮಾಡಿ ಕೊಡೊ ಸಾಮಾನಿನಲ್ಲಿ ಅಡಿಗೆ ತಿಂಡಿ ಮಾಡ್ಬೇಕು. ಕೆಲಸಕ್ಕೆ ಒಂದು ಅಪ್ಲಿಕೇಶನ್ ಹಾಕಬೇಕಾದ್ರೆನೂ ಅವನಿ ಅಂಚೆ ವೆಚ್ಚಕ್ಕೆ ದುಡ್ಡು ಕೊಡಲ್ಲ. ದೊಒಂದು ಸಾರಿ ನಾನು ಒಂದು ರೂಪಾಯಿ ಉಳಿಸೋದಕ್ಕೆ ಕೆಲಸಮಾಡೊ ಅಂಗಡಿಯ ವರೆಗೆ ನಡೆದು ಹೋಗ್ತಿಲೆ ಕೇವಲ ಒಂದು ರೂಪಾಯಿ ಉಳಿಸೋದಕ್ಕೆ. ನಾನು ದುಡಿದದ್ದನ್ನೂ ಒಂದು ಪೈಸೆ ಇಟ್ಟುಕೊಳ್ಳದೆ ಅವರ ಕೈಗೊಪ್ಪಿಸಬೇಕು.

ದಿನಾ ನಿತ್ಯಾ ನನ್ನ ಬದುಕು ಅಂದ್ರೆ ಕತ್ತಿಮೇರ ಮಲಗಿದ ಹಾಗೆ. ಕುಳಿತರೆ, ನಿಂತರೆ ನಮ್ಮ ತಾಯಿಯಿಂದ ನಿಂದನೆಯ ಮಾತುಗಳನ್ನು ಕೇಳ್ಬೇಕು. ಮೊದ ಮೊದಲು ಎದುರುತ್ತರ ಕೊಡ್ತಿದ್ದೆ. ಆದ್ರೆ ಈಗ ಗೊತ್ತಾಗಿದೆ, ಅದರಿಂದ ಏನ್ನೂ ಪ್ರಯೋಜನವಿಲ್ಲ ಎಂದು. ಬೆಳಕು ಹರಿಯೊದೆ ಬೈಗುಳಗಳ ಪುಷ್ಪಾರ್ಚ

ನೆಯಿಂದ. ಮೊದಲು ಅವರ ಒಂದೊಂದು ಮಾತು ನನ್ನ ಎದೆಯನ್ನು ಚುಚ್ಚುವ ವಿಷಬಾಣಗಳಂತೆ ಎನ್ನಿಸುತ್ತಿತ್ತು. ಈಗೇನಿಲ್ಲ ಮೌನವಾಗಿ ಸಹಿಸೋದನ್ನು ಕಲಿತು ಬಿಟ್ಟಿದ್ದೇನೆ. ಏಕೆಂದರೆ ಅವರ ರಕ್ತ ಮೈಯಲ್ಲಿ ಹರಿಯುತ್ತಿದೆ ನೋಡಿ, ಎಷ್ಟೇ ಆದ್ರೂ ಅವರ ಉಪ್ಪು ತಿನ್ನುತ್ತಿದ್ದೇನಲ್ಲವೆ?

ನಾವು ಮೂರು ಜನ. ಕೊನೆಯವನಾದ ನನ್ನ ತಮ್ಮನನ್ನು ಕಂಡರೆ ಮಾತ್ರ ಅವರಿಗೆ ಪ್ರೀತಿ. ಅವನಿಗೆ ನನ್ನನ್ನು ಕಂಡರೆ ತುಂಬಾ ಅಕ್ಕರೆ. ಒಂದು ಬಾರಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದೆ. ಮನೆಬಿಟ್ಟು ಎಲ್ಲಿಗಾದ್ರು ಹೋಗಿಬಿಡೋಣ ಎಂದು ಎಷ್ಟೋ ಬಾರಿ ಅಂದುಕೊಳ್ಳುತ್ತೇನೆ. ಅಂದ್ರೆ ನನ್ನ ತಂಗಿ, ತಮ್ಮನ ಪ್ರೀತಿ ಕಾಲು ಕಟ್ಟಿಹಾಕುತ್ತೆ.

ನನ್ನ ತಂದೆ ತಾಯಿಗೆ ಮನುಷ್ಯ ಸಂಬಂಧಗಳ ಅಗತ್ಯವೇ ಇಲ್ಲ. ಅವರು ಮನೆಯಲ್ಲಿ ಇದ್ರೆ ಅಕ್ಕಪಕ್ಕದವರೂ ನಮ್ಮ ಮನೆ ಗೇಟುಹತ್ರ ಸುಳಿಯಲ್ಲ. ನಿಜ ಹೇಳಬೇಕಂದ್ರೆ ನಮ್ಮ ನಾಯಿ ಸಹ ಅವರು ಇದ್ರೆ ಒಳಗೆ ಬರಲ್ಲ. ಅವರ್‍ಯಾರು ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಅಕ್ಕ ಪಕ್ಕದ ಮನೆಯವರು ಬಂದು ಮಾತಡಿಸಿಕೊಂಡು ಹೋಗುತ್ತಾರೆ. ಯಾರಾದ್ರೂ ಆಯ್ಯೋ ಪಾಪ ಅಂತ ಕರುಣೆ ತೋರಿಸಿದ್ರೆ ಅವರಿಗೆ ನಮ್ಮ ಮನೆಯಲ್ಲಿ ಇನ್ನೊಂದು ಬಾರಿ ಪ್ರವೇಶವಿಲ್ಲ.

ಜಿಂಕೆ ಕಣ್ಣಿನ ಈ ಎಳೆಯ ಹುಡುಗಿಯ ಮನಸ್ಥಿತಿಗೆ ತಂದೆ ತಾಯಿಯ ಅಮಾನವೀಯ ನಿರ್ಲಕ್ಷತೆಗೆ ಕಾರಣವನ್ನು ಹುಡುಕಲಸಾಧ್ಯವಾದುದು. ಗೊತ್ತಿಲ್ಲವೆನ್ನುವುದೊಂದನ್ನು ಬಿಟ್ಟರೆ, ಅವಳ ಮನಸ್ಸು ನೋವುಂಡ ಕ್ಷಣಗಳ ವಿವರಗಳೆಲ್ಲ ಮುಳುಗಿ ಹೋಗುತ್ತದೆ. ಮಧ್ಯಾಹ್ನ ಒಂದು ಗಂಟೆಯಾದುದರಿಂದ ಅವಳ ಕಣ್ಣುಗಳು ಆಗಾಗ ಗಡಿಯಾರದ ಬಳಿಯೋಡುತ್ತಿದ್ದವು. ತಂದೆ ಯಾವಕ್ಷಣದಲ್ಲಾದ್ರು ಬಂದು ಬಿಡಬಹುದು. ನೀವು ಬಂದಿರೋದನ್ನು ನೋಡಿದ್ರೆ ಇನ್ನು ದಿನವೆಲ್ಲಾ ರಾಮಾಯಣ ಶುರುವಾಗುತ್ತೆ ಅನ್ನೊ ಆತಂಕ ಅವಳ ಕಣ್ಣುಗಳಲ್ಲಿ ಸ್ಪಷ್ಟವಾಗಿದ್ದರಿಂದ ನಾವು ಹೊರಡುತ್ತೇವೆಂದು ಎದ್ದು ಹೊರಟು ನಿಂತಾಗ ನಾನು ಅವಕಾಶ ಸಿಕ್ಕರೆ ನಿಮ್ಮ ಮನೆಗೆ ಬರುತೇನೆಂದು ವಿಳಾಸ ತೆಗೆದು ಕೊಂಡಳು.

ರೆಕ್ಕೆ ಬಿಚ್ಚಿ ನಿರ್ಮಲವಾಗಿ ಹಾರಾಡುವ ವಯಸ್ಸಿನ ಘಾಸಿಗೊಂಡ ಈ ಎಳೆಯ ವಯಸ್ಸಿನ ಮನಸ್ಸಿಗೆ ಬದುಕೊಂದು ಮುದುಡಿದ. ಮುಚ್ಚಿಟ್ಟ ಪ್ರಪಂಚ. ರಕ್ತಸಂಬಂಧ ನಿರ್ವಾಜ್ಯ ಪ್ರೀತಿಯಿಂದ ವಂಚಿತವಾದ ಈ ಎಳೆಯ ಮನಸ್ಸು ಮುಂದೆ ಹೇಗೆ ರೂಪಿತವಾಗಬಹುದೆಂದು ಕಲ್ಪಿಸಿ ಕೊಳ್ಳಲಸಾಧ್ಯವೆಂದೆನಿಸಿತು. ಮಹಿಳಾ ಸಮಸ್ಯೆಯನ್ನು ಸಾಮಾಜಿಕ ಆರ್ಥಿಕ ಸಂಭಂದಲ್ಲಿ ಅರ್ಥಮಾಡಿಕೊಂಡು ಸಾಮಾನ್ಯೀಕರಿಸುವುದು ಅಗತ್ಯ ವೆಂಬುದು ನನ್ನ ನಂಬಿಕೆಯಾದರೂ ಭಾವನಾತ್ಮಕ ಸ್ತರದಲ್ಲಿ ಅಘಾತವನ್ನು ಉಂಡು ಬದುಕುವ ಇಂತಹ ಜೀವಿಗಳ ನೋವಿನ್ನು ಹೇಗೆ ಸಾಮಾನ್ಯೀಕರಿಸುವುದು, ಹೇಗೆ ಇನ್ನೊಬ್ಬರ ನೋವಿನ ತೀವ್ರತೆಯ ಆಳಕ್ಕೆ ಹೋಲಿಸುವುದು ಎಂಬ ಪ್ರಶ್ನೆ ತೀವ್ರವಾಗಿ ಕಾಡಿದ ದಿನವದು.

ಎಚ್. ಎಸ್. ರಾಜೇಶ್ವರಿ

ಚಿತೆಯ ಇತಿಹಾಸ

ಇತಿಹಾಸವಾದಳು ರೂಪ್‌ಕನ್ವರ್
ಕನಸುಗಳು ಬಾಡುವ ಮುನ್ನವೇ
ಚಿತೆಯೇರಿದಳು
ದಗ್ಧಳಾದಳು ಮುಗ್ಧವಾಗಿ
ಹಸೆಮಣೆಯೇರಿದ ಬಳಿಕ
ಸಂತಸದಿಂದಿರಬೇಕಾದವಳು
ದಗ್ಧಳಾದಳು ಸೋದರಿ
ಏನೇನು ಕನಸು ಹೊತ್ತಿದ್ದಳೊ ಏನೋ
ಕನಸು ಆರುವ ಮುನ್ನವೇ
ಕನಸಾದಳು
ಮಹಿಳೆಯರ ಸ್ಥಿತಿ
ಪ್ರತಿಬಿಂಬಿಸಿದಳು
ಅರ್ಥಪೂರ್ಣವಾಗಿ ಬದುಕಬೇಕಾದವಳು
ಕೊಲೆಯಾದಳು
ಮೂರ್ಖರ ಕಾಟದಲ್ಲಿ
ಬಲಿಪಶುವಾದಳು ಮುಗ್ಧೆ
'ದೇವರಾಲ' ಇಂದಿಗೂ ಸಾರಿ ಹೇಳುತಿದೆ
ರೂಪಕನ್ವರ್ ಇತಿಹಾಸವಾದ ಬಗ್ಗೆ

ಭಗವತಿ ಎಂ ಆರ್

. . . . .

ಇದನ್ನು ಪರಿಹರಿಸುವುದು ಮಹಿಳೆಯರಿಗೆ ಮೀಸಲಾದ ಕೆಲಸ. ಪುರುಷರೂ ತಮ್ಮ ಭಾಗದ ಕಾರ್ಯವನ್ನೇನೋ ಮಾಡಬೇಕು. ಆದರೆ ಪುರುಷನೊಬ್ಬ ಮೃಗದ ಅಂತಸ್ತಿಗೆ ಇಳಿದರೆ ಅವನು ಯಾವ ವಿಚಾರವನ್ನು ಲಕ್ಷಿಸುವುದಿಲ್ಲ. "ನಕಾರ" ನೀಡುವ ತಮ್ಮ ಹಕ್ಕನ್ನು ಅರಿತುಕೊಳ್ಳಲು ತಾಯಂದಿರೇ ಶಿಕ್ಷಣವನ್ನು ಪಡೆದುಕೊಳ್ಳಬೇಕಾದವರು ಮಹಿಳೆಯರಲ್ಲದೆ. ಬೇರೆ ಯಾರು ಇದನ್ನು ಕಲಿಸಬಲ್ಲರು ? ಆದುದರಿಂದ ಅಖಿಲಭಾರತ ಮಹಿಳಾಸಮ್ಮೆಳನ ತನ್ನ ಹೆಸರನ್ನು ಸಾರ್ಥಕಮಾಡಿಕೊಳ್ಳಬೇಕಾದರೆ, ಗ್ರಾಮಾಂತರಗಳ ಮಟ್ಟಕ್ಕೆ ಇಳಿಯಬೇಕೆಂದು ನಾನು ಸಲಹೆಮಾಡುವ ಧೈರ್ಯ ಹೊಂದಿದ್ದೇನೆ. ಅವರ ಸಮಾಚಾರ ಪತ್ರಿಕೆಗಳು ಅಮೂಲ್ಯವಾದುವು. ಅವು ಎಲ್ಲೋ ಕೆಲವು ಮಂದಿ ಇಂಗ್ಲೀಷನ್ನು ಬಲ್ಲ ಪಟ್ಟಣಿಗರನ್ನು ಮಾತ್ರ ಮುಟ್ಟುತ್ತವೆ. ಗ್ರಾಮಾಂತರ ಮಹಿಳೆಯರ ವೈಯುಕ್ತಿಕ ಸಂಪರ್ಕವೇ ಅವಶ್ಯಕವಾದುದು. ಒಂದು ವೇಳೆ ಈ ಸಂಪರ್ಕ ಸ್ಥಾಪಿತವಾದರೂ ಮುಂದಿನ ಕಾರ್ಯ ಸುಲಭವಲ್ಲಿ. ಆದರೆ ಏನಾದರೂ ಪರಿಣಾಮವಾಗಬೇಕಾದರೆ ಒಂದಿಲ್ಲ ಒಂದು ದಿನ ಈ ಕಾರ್ಯ ಆರಂಭವಾಗಲೇಬೇಕು.

ಹದಿನಾರು ವಯಸ್ಸಿಗಿಂತಲೂ ಕಡಿಮೆ ಇರುವ ಹುಡುಗಿಯರನ್ನು ವಿವಾಹ ಮಾಕೊಳ್ಳುವುದಿಲ್ಲ ವೆನ್ನುವಷ್ಟಾದರೂ ಕಾಮವನ್ನು ನಿಗ್ರಹ ಮಾಡಲು ನೀವು ಶಕ್ತರಾಗಬೇಕು. ನಾನೇ ಆದನ್ನು ಮಾಡಬೇಕಾದ್ದರೆ ಇಪ್ಪತ್ತು ಎಂದೇಮ ಕನಿಷ್ಟವಾಗಿ. ಭಾರತದಲ್ಲಿಯೂ ಇಪ್ಪತ್ತನೆಯ ವಯಸ್ಸು ಎಷ್ಟೊ ಮುಂಚೆ ಎನ್ನಬೇಕು. ನಮ್ಮ ಹೆಣ್ಣು ಮಕ್ಕಳು ಅಕಾಲ ಪ್ರೌಢೆಯರಾಗಲು ನಾವು ಜದಾಬುದಾರರೇ ಹೊರತು, ಭಾರತೀಯ ಹವಾಗುಣವಲ್ಲ. ಏಕೆಂದರೆ ಪರಿಶುದ್ಧರೂ, ನಿಷ್ಕಲಂಕರೂ ಆಗಿದ್ದು ತಮ್ಮ ಸುತ್ತಲಿನ ಉಗ್ರ ಪಾಪವನ್ನು ಸಹಿಸಬಲ್ಲ ಸತ್ವವುಳ್ಳ ಇಪ್ಪತ್ತು ವಯಸ್ಸಿನ ಹುಡಿಗಿರನ್ನು ನಾನು ಬಲ್ಲೆ. ಹನ್ನೆರಡು ವಯಸ್ಸಿನ ಹುಡುಗಿಯನ್ನು ಅತ್ಯಾಚಾರಕ್ಕೆ ಗುರಿಮಾಡುವುದಕ್ಕೆ ಪ್ರತಿಯಾಗಿ ತನ್ನ ಜಾತಿಯಲ್ಲದ ಹುಡುಗಿಯನ್ನು ವಿವಾಹ ಮಾಡಿಕೊಂಡ ತಪ್ಪನ್ನು ಹಿಂದೂಗಳ ದೇವರು ಕ್ಷಮಿಸುವವನೆಂದು ತಿಳಿಯಬಯಸುತ್ತೇನೆ.

. . . .

★ ★ ★

ಶತಮಾನಗಳಿಂದ ತುಳಿತಕ್ಕೊಳಗಾದ ಸ್ತ್ರೀಯರ ಧ್ವನಿಯಾದ ಮಾನವಿ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಬೇಕೆಂಬ ಮಹತ್ವಾಕಾಂಕ್ಷಯಿಂದ ಪ್ರಾರಂಭಿದ್ದರೂ, ಆರ್ಥಿಕ ಕಾರಣಗಳಿಂದಾಗಿ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಲು ಸಾದ್ಯವಾಗದೆ ಇರುವುದನ್ನು ನೀವು ಈಗಾಗಲೇ ಗಮನಿಸಿರಬಹುದು.

ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನವನ್ನೂ ಮೀರಿ ಅಡಿಗಡಿಗೆ ಎದುರಾಗುವ ಈ ಸಮಸ್ಯೆಯಿಂದಾಗಿ ಪತ್ರಿಕೆ ತುಂಬಾ ವಿಳಂಬ ಗತಿಯಲ್ಲಿ ಪ್ರಕಟವಾಗುತ್ತಿದೆ. ಪತ್ರಿಕೆಯ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದು ಪುಟ್ಟದಾದ ಅಚ್ಚುಮೊಳೆಯ ಕೇಂದ್ರವನ್ನು ಈಗಾಗಲೇ ಪ್ರಾರಂಭಿದ್ದೇವೆ. ಇತರ ಖರ್ಚು ವೆಚ್ಚಗಳೊಂದಿಗೆ ಬಾಡಿಗೆಗೆ ಹಣ ಹೊಂದಿಸುವುದು ದುಸ್ತರವಾಗುತ್ತಿದೆ. ಈ ಹಂತದಲ್ಲಿ ಪತ್ರಿಕೆಯ ಆತ್ಮೀಯ ಹಿತೈಷಿಗಳಾದ ನಿಮಗೆ ಈ ಕೆಳಗಿನ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇವೆ. ಪ್ರತಿ ತಿಂಗಳೂ ಮಾನವಿಯ ಆಫೀಸ್ ಬಾಡಿಗೆಗೆಂದು ರೂ. 5–00 ಕಳಿಸಲು ಸಾಧ್ಯವೆ? ಪ್ರತಿ ತಿಂಗಳೂ ಕಳಿಸುವುದು ಸಮಸ್ಯೆ ಎನಿಸಿದರೆ, ಅರ್ಧ ವರ್ಷದ ಅಂದರೆ ರೊ. 30–00 ಅಥವಾ ಒಂದು ವರ್ಷದ ರೂ. 60–00 ಒಟ್ಟಿಗೆ ಕಳಿಸಬಹುದು. ನಮ್ಮ ಈ ಕಿರು ಪ್ರಯತ್ನಕ್ಕೆ ನಿಮ್ಮ ಬೆಂಬಲ ಹಾಗೂ ಪ್ರೋತ್ಸಾಹವಿದೆ ಎಂಬ ಭರವಸೆ ನಮಗಿದೆ.

'ಮಾನವಿ' ಬಳಗ

ಮಾನವಿ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ.

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ: "ಮಾನವಿ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು-**560 067**

ಸೂಚನೆ:
ವಾರ್ಷಿಕ ಚಂದಾ **15** ರೂ.
ಅಜೀವ ಚಂದಾ: **250** ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಆರು ಸಂಚಿಕೆಗಳು
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.